# Osmania University Library

Call No K83 V17R

Name Of Book [illegible]

Name Of Authu [illegible]

UNIVERSAL LIBRARY
OU_200212
UNIVERSAL LIBRARY

ಶ್ರೀ ಶೇಷಾಚಲ ಗ್ರಂಥಮಾಲೆ, ಆನಂದವನ.

# ರಾಕಾಚಂದ್ರ

ಅಥವಾ

## ಸೇಡು.

[ಸಾಮಾಜಿಕ ಕಾದಂಬರಿ]

ಲೇಖಕ:—

**ಕೇ. ವೆಂಕಟಾಚಲಯ್ಯ, ಬಿ. ಏ.**

ಹೆಡ್‌ಮಾಸ್ತರ, ಗ. ಮಿಡ್ಲಸ್ಕೂಲ,

ಅರಸಿಕೆರೆ (ಹಾಸನ್)

ಪ್ರಕಾಶಕ—

**ಭೀ. ಪ. ಕಾಳೆ,**

ಶ್ರೀ ಶೇಷಾಚಲ ಪ್ರೆಸ್ಸ, & ಗ್ರಂಥಮಾಲೆ,

ಆನಂದವನ. [ಜಿ. ಧಾರವಾಡ.]

ಅಕ್ಟೋಬರ ೧೯೩೧.

ಬೆಲೆ ೮ ಆಣೆ.

# ಮುನ್ನುಡಿ.

“ಪರಸಹಿಷ್ಣುತೆಯಿಲ್ಲದೆ ದುಸ್ಸಹವಾಸದಿಂದ ಸ್ತ್ರೀಲೋಭ, ಧನಲೋಭಗಳಿಗೊಳಗಾದವನು ಮನೋವಾಕ್ಕಾಯಗಳಲ್ಲಿ ಪರಿಶುದ್ಧನಾದವನನ್ನು ಅಲ್ಲದ-ಸಲ್ಲದ ದೋಷಗಳಿಗೆ ಗುರಿ ಮಾಡಿ, ಅದರಿಂದ ತನ್ನ ಮಾಲಿನ್ಯತೆಯನ್ನು ಇತರರಿಗೆ ತಿಳಿಯದಂತೆ ಮಾಡಿ, ತನ್ಮೂಲಕ ತನ್ನ ಇಷ್ಟಾರ್ಥವನ್ನು ಕೈಗೂಡಿಸಿಕೊಳ್ಳಲು ಪ್ರಯತ್ನಪಟ್ಟು, ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುವ ಮಾರ್ಜಾಲದಂತೆ ಕೊನೆಗೆ ಸಿಕ್ಕಿ ಬೀಳುವನು. ನಿರ್ದೋಷಿಯಾದವರೊ ಪುಟಕ್ಕೆ ಹಾಕಿದ ಚಿನ್ನದೋಪಾದಿಯಲ್ಲಿ ಪ್ರಕಾಶಿಸುವನು” ಎಂಬ ವಿಷಯವನ್ನು ತಿಳಿಸುವುದೇ ಈ ಕಾದಂಬರಿಯ ಧ್ಯೇಯವಾಗಿದೆ ಇದರ ಜೊತೆಗೆ “ಪತಿಯೆಂದು ವರಿಸಿದವನು ಎಂತಹ ಕುಟಿಲನು, ಜಾರನು, ಕೊಲೆಗಡುಕನೇ ಆಗಿದ್ದರೂ, ಆತನೇ ತನ್ನ ಸರ್ವಸ್ವವೆಂದು ಪರಿಗಣಿಸಿದ ‘ಸಾಧ್ವಿಯಾದ ಮಂಥರೆ’ಯ ಗುಣವೂ” ಉಲ್ಲೇಖಿತವಾಗಿದೆ. ಈ ಕಾದಂಬರಿಯು ಪಾಠಕ ವರ್ಗಕ್ಕೆ ಸ್ವಲ್ಪ ಮಟ್ಟಿಗಾದರೂ ಆದರವನ್ನು ಹುಟ್ಟಿಸಿದರೆ, ನನ್ನ ಶ್ರಮವು ಸಾರ್ಥಕವೆಂದು ಆನಂದಿಸುತ್ತೇನೆ ಇದನ್ನು ಪರಿಶೀಲಿಸಿ, ತಮ್ಮ ಉದಾರವಾದ ಅಂತಃಕರಣವನ್ನು ನನ್ನ ಮೇಲೆ ಅನುಗ್ರಹಿಸಿ, ತಮ್ಮ ಗ್ರಂಥಮಾಲೆಯಲ್ಲಿ ಪ್ರಕಟಿಸಿದುದಕ್ಕಾಗಿ ನಾನು ಮ||ರಾ||ರಾ|| ಬಿ. ಪಿ. ಕಾಳೆ, ಇವರಿಗೆ ಕೃತಜ್ಞನಾಗಿರುತ್ತೇನೆ.

ಇದರ ಮೊದಲನೆಯ ಮುದ್ರಣದ ಸರ್ವ ಸ್ವತಂತ್ರ ಶ್ರೀ ಶೇಷಾಚಲ ಗ್ರಂಥಮಾಲೆಯದೇ ಆಗಿರುತ್ತದೆ.

ಅರಸಿಕೆರೆ, ಸಜ್ಜನ ವಿಧೇಯ,

ತಾ|| 21-9-1931. ಗ್ರಂಥಕರ್ತ.

ಶ್ರೀ

# ರಾಕಾಚಂದ್ರ

ಅಥವಾ

## ಸೇಡು.

(ಸಾಮಾಜಿಕ ಕಾದಂಬರಿ.)

## ಪರಿಚ್ಛೇದ ೧

ಸೋಮಪುರದ ಈಶಾನ್ಯ ಭಾಗದಲ್ಲಿರುವ ಪಂಚವಟಿ ತೋಪಿನಲ್ಲಿ ಮೂವರು ಯುವಕರು ಕುಳಿತುಕೊಂಡು ಹೊಗೆಬತ್ತಿಗಳನ್ನು ಸೇದುತ್ತಿದ್ದಾರೆ ಪ್ರತಿಯೊಬ್ಬನ ಅಂಗಿಯ ಕಿಸೆಯಲ್ಲಿಯೂ ಒಂದೊಂದು ಶೀಸೆ ಇದೆ. ಅದರ ತುಂಬ ಸೆರೆ ಇದ್ದಂತೆ ಕಾಣುತ್ತೆ. ಪ್ರತಿಯೊಬ್ಬನೂ ಶೀಸೆಯನ್ನು ಹೊರಕ್ಕೆ ತೆಗೆದು ನೆಲದ ಮೇಲೆ ಇಟ್ಟನು. ಸೂರ್ಯದೇವನು ಆಗ ತಾನೆ ಪಶ್ಚಿಮಾಂಬುಧಿಯನ್ನು ಕುರಿತು ತೆರಳುತ್ತಿದ್ದಾನೆ ಪಂಚವಟಿ ತೋಪಿಗೆ ಸಮೀಪದಲ್ಲಿರುವ ಸಾನಂದ ಹೊಳೆಯ ಮೇಲಿನಿಂದ ತಂಗಾಳಿ ಬೀಸುತ್ತಲಿದೆ ಯುವಕರು ಸೋಮಪುರದಿಂದ ಹೊರಟು, ಎರಡು ಮೈಲಿ ದೂರದಲ್ಲಿರುವ ಈ ಸ್ಥಳಕ್ಕೆ ವಾಯುಸೇವನೆಗಾಗಿ ಬಂದಂತೆ ತೋರುತ್ತಿದ್ದರೂ ಅವರು ಈಗ ತಾನೆ ನೆಲದ ಮೇಲಿಟ್ಟಿರುವ ಶೀಸೆಗಳನ್ನು ನೋಡಿದರೆ, ನಿರ್ಜನವಾದ ಈ ಸ್ಥಳದಲ್ಲಿ ಕುಳಿತು ಮದ್ಯ ಸೇವನೆಯನ್ನು ಮಾಡಿ ಆನಂದದಿಂದ ಕೊಂಚ ಕಾಲವಿದ್ದು ಹೋಗೋಣವೆಂದು ಬಂದಂತೆ ಕಾಣುತ್ತೆ. ಹೊಗೆ ಬತ್ತಿಯನ್ನು ಸೇದಿ ಬಿಡುವ ಧೂಮವು ಚಕ್ರಾಕಾರ

ವಾಗಿ ಸುತ್ತುತ್ತಾ ಮೇಲಕ್ಕೆ ಹೋಗಿ, ದೂರದಿಂದ ನೋಡುವವರಿಗೆ ಛಿದ್ರಛಿದ್ರವಾದ ಬಿಳಿಯ ಮೋಡಗಳು ಮೇಲಕ್ಕೇರುತ್ತಿದ್ದಂತೆ ಭಾಸವಾಗುತ್ತಿತ್ತು. ಆ ಮೂವರಲ್ಲಿ ಒಬ್ಬನು ಸೀಸೆಯನ್ನು ಹೊರಕ್ಕೆ ತೆಗೆದವನೇ ಅತ್ಯಾನಂದದಿಂದ ಅದರಲ್ಲಿದ್ದ ಸೆರೆಯನ್ನು ಪಾನ ಮಾಡಿದನು. ಮತ್ತೊಬ್ಬರು ಹಾಗೆ ಮಾಡದೆ ಸುಮ್ಮನೆ ಕುಳಿತಿದ್ದುದನ್ನು ನೋಡಿದರೆ, ಯಾವುದೋ ಒಂದು ಆಲೋಚನೆಯು ಇವರ ಈ ಸಂದರ್ಭಕ್ಕೆ ಅಡ್ಡಿ ಮಾಡುತ್ತಿತ್ತೆಂದು ಕಾಣುತ್ತೆ. ಸೆರೆಯನ್ನು ಕುಡಿದವನಿಗೆ ಅಮಲೇರುತ್ತ ಬಂದಿತು ತಲೆಯನ್ನು ತೂಗುತ್ತ ಹಾಡುವುದಕ್ಕೆ ಪ್ರಾರಂಭ ಮಾಡಿದನು. ಮಿಕ್ಕ ಇಬ್ಬರಲ್ಲೊಬ್ಬನು ಮತ್ತೊಬ್ಬನನ್ನು ಕುರಿತು: "ವಿಕ್ರಮ, ಚಂಚಲೆಯು ನಿನ್ನನ್ನು ಮದುವೆ ಮಾಡಿಕೊಳ್ಳಲೊಪ್ಪಿರುವಳೋ-ಇಲ್ಲವೋ?"

ವಿಕ್ರಮ:—ಭೀಷಣ, ಆ ವಿಚಾರವನ್ನೇನೆಂದು ಹೇಳಲಿ? ಪ್ರತಿ ದಿನವೂ ನಾನು ಅವಳ ಅನುರಾಗವನ್ನು ಸಂಪಾದಿಸಬೇಕೆಂದು ಅವಳನ್ನು ಅಂಗಲಾಚಿ ಬೇಡಿಕೊಳ್ಳುತ್ತಿದ್ದರೂ, ಯಾವ ಪ್ರಯೋಜನವೂ ಆಗಲಿಲ್ಲ. ಅವಳ ಮನಸ್ಸೆಲ್ಲವೂ ಆ ರಾಕಾಚಂದ್ರನಲ್ಲಿಯೇ ನೆಟ್ಟು ಹೋಗಿದೆ. ನಾನವಳನ್ನು ನೋಡುತ್ತಲೇ 'ಅಣ್ಣಾ, ಬಾ, ಕುಳಿತುಕೋ' ಎಂದು ಕರೆಯುವಳು. 'ಅಣ್ಣಾ' ಎಂಬ ಶಬ್ದವು ಅವಳ ಬಾಯಿಂದ ಹೊರಡುತ್ತಲೆ, ಎಷ್ಟು ಉತ್ಸಾಹ-ಸಂತೋಷಗಳಿಂದ ಅವಳನ್ನು ಕಂಡು, ಅವಳ ಅನುರಾಗ ಭಿಕ್ಷೆಯನ್ನು ಹೊಂದಬೇಕೆಂದು ಹೋಗುವೆನೋ, ಆ ಉತ್ಸಾಹ-ಸಂತೋಷಗಳೆಲ್ಲವೂ ಮಾಯವಾಗಿ, ನನ್ನ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಗುತ್ತೆ. ಭೀಷಣ, ನಾನು ಆ ಚಂಚಲೆಯನ್ನು ಎಷ್ಟು ವಿಧದಲ್ಲಿ ಪ್ರಾರ್ಥಿಸಿಕೊಂಡರೂ, ಆ ನನ್ನ ಪ್ರಾರ್ಥನೆಗಳೆಲ್ಲವನ್ನೂ ನೀರಿನ ಮೇಲೆ ಬರೆದ ಲಿಪಿಯಂತೆ ಮಾಡುತ್ತಿರುವಳು. ಅಯ್ಯೋ! ದರಿದ್ರನೂ, ಅಜ್ಞಾತ ಕುಲಗೋತ್ರನೂ ಆದ ರಾಕಾಚಂದ್ರನೊಬ್ಬನು ನನ್ನ ಪ್ರೀತಿಗೆ ಅಡ್ಡಿ ಮಾಡಿನಲ್ಲ! ಏನು ಮಾಡಲಿ?

ಭೀಷಣ:— ಏನು? ಆ ಚಂಡಾಲನು ನಿನಗೂ ಶತ್ರುವಾಗಿ ಪರಿಣಮಿಸಿರುವನೇ? ಹಾ! ಕಷ್ಟ-ಕಷ್ಟ. ವಿಕ್ರಮ, ಇನ್ನು ಈ ಪ್ರಪಂಚದಲ್ಲಿ ಆ ರಾಕಾಚಂದ್ರನು ಆಚಂದ್ರಾರ್ಕವಾದ ಸುಖವನ್ನು ಅನುಭೋಗಿಸಿಕೊಂಡು ಇರಬೇಕು. ಅದಕ್ಕಾಗಿ ನಾವಿಬ್ಬರೂ ಇಹ ಲೋಕದಿಂದ ಶೀಘ್ರವಾಗಿಯೇ ಪ್ರಯಾಣವನ್ನು ಬೆಳಸಬೇಕು; ಇಲ್ಲವೆ ಆ ಪಾಪಿ ರಾಕಾಚಂದ್ರನು ರಕ್ತ-ಮಾಂಸ ಮಯವಾದ ತನ್ನ ದೇಹವನ್ನು ನಮ್ಮ ತೀಕ್ಷ್ಣವಾದ ಖಡ್ಗಗಳ ಬಾಯಿಗೆ ಈಡು ಮಾಡಿ, ತಾನು ಅನುಭವಿಸಬೇಕೆಂದಿರುವ ಸುಖಸಾಮ್ರಾಜ್ಯವನ್ನು ನಮ್ಮ ಪಾಲಿಗೆ ಬಿಡಬೇಕು

"ಏನು? ರಾಕಾಚಂದ್ರನು ಸಾಯಬೇಕೆ? ಅವನನ್ನು ಕೊಲ್ಲು ವಿರಾ? ಬೇಡ ಬೇಡ ಅವನನ್ನು ಕೊಲ್ಲಬಾರದು" ಎಂದು ಮದ್ಯ ಸೇವನೆಯಿಂದ ಹಲವು ಜ್ಞಾನಗಳನ್ನು ಕಳೆದುಕೊಂಡಿದ್ದ ಮಧುಪ್ರಿಯನು ನಡುವೆ ಮಾತನಾಡಿದನು. ಇದನ್ನು ಕೇಳಿ ಭೀಷಣನು:—ವಿಕ್ರಮ, ನಿನ್ನ ಸೀಸೆಯಲ್ಲಿರುವ ಮಧುವನ್ನು ಮಧುಪ್ರಿಯನಿಗೆ ಕೊಡು. ಆನಂದಪಡಲಿ, ಎಂದು ಹೇಳುತ್ತಾ, ತನ್ನ ಮತ್ತು ವಿಕ್ರಮನ ಮುಂದಿದ್ದ ಸೀಸೆಗಳೆರಡನ್ನೂ ಅವನಿಗೆ ಕೊಟ್ಟು: "ಮಧುಪ್ರಿಯ, ನಾವು ಮಾತಾಡುತ್ತಿದ್ದುದೇನು? ನೀನು ಕೇಳಿದುದೇನು? ರಾಕಾಚಂದ್ರನು ನಿನಗೆ ಹೇಗೆ ಸ್ನೇಹಿತನೋ, ನಮಗೂ ಹಾಗೆಯೆ ಸ್ನೇಹಿತನು ತಿಳಿದುಕೊ, ಇದನ್ನು ಪಾನ ಮಾಡು."

ಮಧುಪ್ರಿಯ:— ಭೀಷಣ, ನೀನು ಎಷ್ಟು ಹುಚ್ಚನೋ! ಪಾಪ, ರಾಕಾಚಂದ್ರನು ದರಿದ್ರ. ತಾಯಿಲ್ಲದ ಹುಡುಗನು. ಅವನೂ ಹುಚ್ಚನು. ನನಗೂ ಈ ದಿನ ಎರಡು ರೂಪಾಯಿ ಕೊಟ್ಟ. ಹೋಗಲಿ ಬಿಡು, ಎಂದು ಹೇಳುತ್ತ, ಹಿಂದು ಸೀಸೆಯನ್ನು ಬರಿದು ಮಾಡಿದನು.

ಭೀಷಣ:— ವಿಕ್ರಮ, ನಾನು ತಿಮ್ಮಪ್ಪನಾಯ್ಕರ ಕಾರ್ಖಾನೆಯಲ್ಲಿ ಎಷ್ಟು ದಿನಗಳಿಂದ ಕೆಲಸಮಾಡುತ್ತಿರುವೆನು? ಮೊನ್ನೆ ತಾನೆ

ಬಂದು ಕೆಲಸಕ್ಕೆ ಸೇರಿದ ರಾಜಾಚಂದ್ರನು ತನ್ನ ಕೃತ್ರಿಮವಾದ ನಗುವಿನಿಂದಲೂ, ಬೇಳವೆ ಮಾತುಗಳಿಂದಲೂ ತಿಮ್ಮಪ್ಪನಾಯ್ಕರ ಮನಸ್ಸನ್ನು ತನ್ನ ಕಡೆಗೆ ಎಳೆದುಕೊಂಡಿರುವನು. ಮೊನ್ನೆ ಮ್ಯಾನೇಜರರು ತೀರಿಹೋಗಲು, ಆ ಕೆಲಸಕ್ಕೆ ನನ್ನನ್ನು ನೇಮಿಸುವುದಕ್ಕೆ ಬದಲಾಗಿ, ತಿಮ್ಮಪ್ಪನಾಯ್ಕರು ಅವನಿಗೆ ಬಡತಿಯನ್ನು ಕೊಟ್ಟು ಮ್ಯಾನೇಜರನ್ನಾಗಿ ಮಾಡಿರುವರು. ನನ್ನ ಕೈ ಕೆಳಗೆ ಕೆಲಸ ಮಾಡುತ್ತಿದ್ದ ಇವನು ಈಗ ನನಗಿಂತಲೂ ಮೇಲಿರುವನು. ಇದನ್ನು ನೋಡಿ ಸಹಿಸುವದಂತೂ ನನ್ನಿಂದಾಗದು. ಇವನ ಅಂತ್ಯಕ್ಕೆ ಉಪಾಯವನ್ನು ಚಿಂತಿಸಿ ಅದನ್ನು ಸಾಧಿಸದ ಹೊರತು, ನನಗೆ ಯಾವುದೂ ರುಚಿಸಲಾರದು.

ವಿಕ್ರಮ:—ಭೀಷಣ, ನಿನ್ನ ಅಭಿಪ್ರಾಯವೇ ನನಗೂ ಸಮಂಜಸವಾಗಿ ಕಾಣುವುದು. ನಾಳೆಯೇ ಚಂಚಲೆಯನ್ನು ಕೊಟ್ಟು ಅವನಿಗೆ ಲಗ್ನವಾಗುವುದಂತೆ. ಇದನ್ನು ತಪ್ಪಿಸುವ ಬಗೆ ಹೇಗೆ?

ಭೀಷಣ:—ನನಗೊಂದು ಯುಕ್ತಿಯು ತೋರುವುದು.

ವಿಕ್ರಮ:—ಅದೇನು?

ಈ ಸೋಮಪುರದರಸನಾದ ಭೀಮಚೂಡನನ್ನು ಮೋಸದಿಂದ ಕೊಂದು, ಆತನ ಮಗನಾದ ಚಂದ್ರಚೂಡನನ್ನು ಸೆರೆಯಲ್ಲಿಡಿಸಿ, ದೇವಿದಾಸನೇ ದೊರೆಯಾಗಿದ್ದ ಸಂಗತಿಯು ನಿನಗೆ ತಿಳಿದಿದೆಯಷ್ಟೆ? ಚಂದ್ರಚೂಡನು ಕಾರಾಗೃಹದಿಂದ ತಪ್ಪಿಸಿಕೊಂಡು, ಕಲ್ಯಾಣಪುರದ ರಾಜನ ಸಹಾಯದಿಂದ ದೇವಿದಾಸನನ್ನು ಯುದ್ಧದಲ್ಲಿ ಸೋಲಿಸಿ, ತನ್ನ ರಾಜ್ಯವನ್ನು ತಾನು ಹೊಂದಿದನು. ದೇವಿದಾಸನು ಸುವರ್ಣಪುರದಲ್ಲಿ ಸೇರಿಕೊಂಡು ಈಗಿನ ದೊರೆಯಿಂದ ಪುನಃ ರಾಜ್ಯವನ್ನು ಹೊಂದಲು ಅಲ್ಲಿ ಫಿತೂರಿ ನಡೆಸುತ್ತಿರುವನು.

ಭೀಷಣ:-ಮೊನ್ನೆ ರಾಜಾಚಂದ್ರನು ಸುವರ್ಣಪುರಕ್ಕೆ ಹೋಗಿದ್ದನಷ್ಟೆ? ಅಲ್ಲಿ ದೇವಿದಾಸನನ್ನು ಕಂಡಿದ್ದನಂತೆ. ಆತನು ಇವನಿಗೆ ಒಂದು ಕಾಗದವನ್ನು ಕೊಟ್ಟು, ಇದನ್ನು ಈ ಊರಲ್ಲಿರುವ ಚಿಂತಾ

ಸಾಗರನಿಗೆ ತಲ್ಪಿಸಬೇಕೆಂದು ಹೇಳಿರುವನಂತೆ ಆ ಕಾಗದವನ್ನು ತನ್ನಲ್ಲಿಯೇ ಇಟ್ಟುಕೊಂಡು ಅದನ್ನು ಅವನಿಗೆ ತಲ್ಪಿಸಬೇಕೆಂದಿರುವನಂತೆ. ರಾಕಾಚಂದ್ರನ ಈ ನಡವಳಿಕೆಯು ರಾಜದ್ರೋಹವಾಗಿರುವುದರಿಂದ ಈ ವಿಚಾರವನ್ನು ಸರ್ಕಾರಕ್ಕೆ ತಿಳಿಸಿದರೆ, ಆಗ ಇವನನ್ನು ರಾಜದ್ರೋಹಿಯೆಂದು ಶೂಲಕ್ಕೇರಿಸಬಹುದು. ಇದರಿಂದ ನಮ್ಮ ಶತ್ರು ನಿರ್ನಾಮವಾಗುವನು!

ವಿಕ್ರಮ:-ದೇವಿದಾಸನನ್ನು ನೋಡಿ ಅವನಿಂದ ಕಾಗದವನ್ನು ತಂದ ಮಾತ್ರಕ್ಕೆ ಇವನು ರಾಜದ್ರೋಹಿಯು ಹೇಗೆ ಆಗುವನು? ಹಾಗಾದರೂ ಕೂಡ ಈ ಕಾಲಕ್ಕೆ ಕಾಗದವನ್ನು ಚಿಂತಾಸಾಗರನಿಗೆ ಮುಟ್ಟಿಸಿರಬಹುದು. ಆಗ ಅವನ ಮೇಲೆ ಹೊರಿಸಲ್ಪಟ್ಟ ಅಪವಾದನೆಯು ಸುಳ್ಳಾಗಬಹುದಲ್ಲವೆ?

ಭೀಷಣ:—ದೇವಿದಾಸನು ತನ್ನ ಸ್ವಾಸ್ಥ್ಯವನ್ನು ಪುನಃ ಹೊಂದಲು ಪ್ರಯತ್ನಪಡುತ್ತಿರುವನು. ಇದಕ್ಕಾಗಿ ಈಗಿನ ದೊರೆಯ ವಿಷಯದಲ್ಲಿ ಅಲ್ಲಲ್ಲಿ ಫಿತೂರಿಗಳು ನಡೆಯುತ್ತಿರುವವು ಫಿತೂರಿಗಳಿಗೆ ಸಂಬಂಧಪಟ್ಟವರನ್ನೆಲ್ಲಾ ಗಲ್ಲಿಗೇರಿಸುತ್ತಿರುವರು; ಇಲ್ಲವೆ ಕರಿನೀರಿನ ಶಿಕ್ಷೆಯನ್ನು ವಿಧಿಸುತ್ತಿರುವರು. ಅವನು ಪತ್ರವನ್ನು ಚಿಂತಾಸಾಗರನಿಗೆ ತಲ್ಪಿಸಿರಬಹುದೆಂದು ನಿನ್ನ ಊಹೆಯಲ್ಲವೆ? ನಿನ್ನ ಊಹೆಯು ತಪ್ಪು. ಈಗ ಎರಡು ಗಂಟೆಗಳ ಹಿಂದೆ ಚಿಂತಾಸಾಗರನ್ಯಾರೆಂದು ಅವನೇ ನನ್ನನ್ನು ಕೇಳಿದನು. ನನಗೆ ತಿಳಿಯದೆಂದು ಹೇಳಿದೆ. ಪತ್ರವಿನ್ನೂ ಅವನಲ್ಲಿ ಇದ್ದೇ ಇರುವುದು. ಅದರಲ್ಲಿ ಸ್ವಲ್ಪವೂ ಸಂಶಯವಿಲ್ಲ.

ವಿಕ್ರಮ:—ಹಾಗಾದರೆ ಈ ವಿಷಯವನ್ನು ಸರ್ಕಾರಕ್ಕೆ ತಿಳಿಸುವ ಬಗೆ ಹೇಗೆ?

"ಅದೆಷ್ಟರ ಕೆಲಸ? ನಾನು ಎಡಗೈಯಿಂದ ಒಂದು ಕಾಗದವನ್ನು ಬರೆದು ಪೋಲೀಸ ಠಾಣೆಯ ಮುಖ್ಯಸ್ಥನ ವಿಳಾಸಕ್ಕೆ ಹಾಕುವೆನು. ಇದರಿಂದ ಕಾಗದವನ್ನು ಯಾರು ಬರೆದರೆಂದು ಕಂಡು ಹಿಡಿ

ಯಾಲಾಗುವದಿಲ್ಲ. ನಾಳೆ ಲಗ್ನದ ವೇಳೆಗೆ ಪೋಲೀಸಿನವರು ಬಂದು, ಅವನನ್ನು ದಸ್ತಗಿರಿ ಮಾಡಿ ಎಳೆದುಕೊಂಡು ಹೋಗುವರು. ಈ ಮೇಲೆ ನಿನ್ನ ಮತ್ತು ನನ್ನ ರೊಟ್ಟಿಗಳು ತಾವಾಗಿಯೇ ತುಪ್ಪದಲ್ಲಿ ಜಾರಿ ಬಿದ್ದಂತಾಗುವುವು!

ವಿಕ್ರಮ:--ಸರಿ-ಸರಿ ನೀನು ಹೇಳುವುದೇ ಸಮಂಜಸವಾಗಿದೆ. ಹಾಗೆ ಮಾಡು. ಇದೇನು ಮಧುಪ್ರಿಯನು ಸೆರೆಯನ್ನೆಲ್ಲಾ ಕುಡಿದು ಜ್ಞಾನತಪ್ಪಿ ಬಿದ್ದಿರುವನು? ನಡೆ, ಇವನನ್ನು ಕರೆದುಕೊಂಡು ಮನೆಗೆ ಹೋಗೋಣ. ನಮ್ಮ ಸಂಚು ಹೊರಬೀಳದಂತೆ ನೋಡಿಕೊ.

ಮಧುಪ್ರಿಯ:-ಸಂ........ಚು.........ಹುಂ ........ಅ.....ಗ್ಲಿ.....

ಮೂವರೂ ಹೊರಟು ಹೋಗುವರು

---

## ಪರಿಚ್ಛೇದ. ೨

ರಾಕಾಚಂದ್ರನು ಸೋಮಪುರದಲ್ಲಿರುವ ಶಾಂತಶೀಲನ ಒಬ್ಬನೇ ಒಬ್ಬ ಮಗನು ಶಾಂತಶೀಲನು ಬಡವನು. ಆಸ್ತಿ-ಪಾಸ್ತಿಗಳೇನೂ ಇರಲಿಲ್ಲ. ಈತನ ಭಾರ್ಯೆಯಾದ ಸುಶೀಲೆಯು ರಾಕಾಚಂದ್ರನು ಇನ್ನೂ ಮೂರು ವರ್ಷ ವಯಸ್ಸಿನವನಿರುವಾಗಲೆ ಸ್ವರ್ಗಸ್ಥಳಾಗಿದ್ದಳು. ತಾಯಿಲ್ಲದ ಮಗನನ್ನು ಶಾಂತಶೀಲನು ಬಡತನವಾದರೂ ಬಹು ಅಕ್ಕರೆಯಿಂದ ಸಾಕಿ ಸಲಹಿದನು. ಮಗನಿಗೆ ತನ್ನ ಶಕ್ತಿಮೀರಿ ವಿದ್ಯಾವ್ಯಾಸಂಗ ಮಾಡಿಸಿದನು. ಮಗನಾದರೂ ಸುಗುಣಗಳಿಗೆ ಆಗರಸ್ಥಾನನಾಗಿ, ಪೌರ್ಣಿಮಾ ಚಂದ್ರನಂತೆ ಅಭಿವೃದ್ಧಿಯನ್ನು ಹೊಂದುತ್ತಿದ್ದನು. ಶಾಂತಶೀಲನು ಭಾರ್ಯೆಯ ಮರಣದಿಂದಲೂ, ಬಡತನದಿಂದಲೂ ಉಂಟಾದ ಶೋಕವನ್ನು, ಸದ್ಗುಣಿಯೂ, ಸದಾಚಾರ ಸಂಪನ್ನನೂ ಆದ ಮಗನನ್ನು ನೋಡಿ ಮರೆಯುತ್ತಿದ್ದನು. ರಾಕಾಚಂದ್ರನಿಗೆ ಈಗ ಹದಿನೆಂಟು ವಯಸ್ಸು. ಬಟ್ಟೆ ನೇಯುವ

ಕಾರ್ಖಾನೆಯ ಮಾಲೀಕನಾದ ತಿಮ್ಮಪ್ಪನಾಯ್ಕನು ಈ ಹುಡುಗನ ಬುದ್ಧಿ ಕುಶಲತೆಗೆ ಮೆಚ್ಚಿ, ಈತನನ್ನು ಮೊದಲು ಹಿಬ್ರ್ಯ ಗುಮಾಸ್ತನನ್ನಾಗಿ ತನ್ನಲ್ಲಿ ಚಾಕರಿಗಿಟ್ಟುಕೊಂಡನು. ರಾಕಾಚಂದ್ರನು ಕೊಂಚ ಕಾಲದಲ್ಲಿಯೇ ತನ್ನ ಕಾರ್ಯದಕ್ಷತೆಯಿಂದ ತಿಮ್ಮಪ್ಪನಾಯಕನಿಗೆ ಅಚ್ಚುಮೆಚ್ಚಿನವನಾದನು. ಈಗೆ ಕೆಲವು ದಿನಗಳ ಹಿಂದೆ ಕಾರ್ಖಾನೆಯ ಮ್ಯಾನೇಜರು ತೀರಿಹೋಗಲು, ಈತನನ್ನೇ ನಾಯಕರು ಆ ಉದ್ಯೋಗದಲ್ಲಿಟ್ಟರು ಕೊಂಚಕಾಲದಲ್ಲಿಯೇ ಈತನು ಬಡತಿಗೆ ಹತ್ತಿದ್ದು ಅಲ್ಲಿಯ ಇತರ ನೌಕರರಿಗೆ ಸರಿಬೀಳಲಿಲ್ಲ. ಏನು ಮಾಡುತ್ತಾರೆ? ನಾಯಕರ ಮುಂದೆ ನಿಂತು ಮಾತನಾಡಲು ಯಾರಿಗೂ ಧೈರ್ಯ ಸಾಲದು.

ಈ ಮಧ್ಯೆ ಜಮೀನ್ದಾರ ಸೋಮಶೇಖರರಾಯರು ತಮ್ಮ ಮಗಳಾದ ಚಂಚಲೆಯ ಅಭಿಪ್ರಾಯದಂತೆ ಅವಳನ್ನು ರಾಕಾಚಂದ್ರನಿಗೆ ಕೊಡಬೇಕೆಂದು ಉದ್ದಿಶ್ಯಪಟ್ಟರು. ಶಾಂತಶೀಲನೂ ಸಮ್ಮತಿಸಿದನು. ಲಗ್ನವೂ ನಿಷ್ಕರ್ಷೆಯಾಯಿತು.

ಜಮೀನ್ದಾರರ ಮನೆಯಲ್ಲಿ ಈ ದಿನ ಅತಿಯಾದ ವಿಜೃಂಭಣೆಯಿಂದ ಲಗ್ನ ಸಮಾರಂಭವು ನಡೆದಿದೆ ವಧೂ-ವರರಿಗೆ ಎಣ್ಣೇಶಾಸ್ತ್ರವನ್ನು ಮಾಡಿದರು ಪುರೋಹಿತರು ನಾಂದಿಕಾರ್ಯಕ್ಕಾರಂಭ ಮಾಡಲು ವರನನ್ನು ತ್ವರೆ ಪಡಿಸುತ್ತಲಿದ್ದಾರೆ. ಎಲ್ಲೆಲ್ಲಿಯೂ ಗಡಿಬಿಡಿಯಾದ ಓಡಾಟ ಮಕ್ಕಳು ಅಳುತ್ತಿದ್ದರೂ ಲಕ್ಷ್ಯ ಮಾಡದೆ, ದೊಡ್ಡ ಜರತಾರಿ ಅಂಚಿನ ಸೀರೆಗಳನ್ನುಟ್ಟುಕೊಂಡು ಹೆಂಗಸರು ಆ ಕೆಲಸವಾಗಲಿಲ್ಲ, ಈ ಕೆಲಸವಾಗಲಿಲ್ಲವೆಂದು ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಬಿಡುವಿಲ್ಲದೆ ಓಡಾಡುತ್ತಿದ್ದಾರೆ ಕುಲಪುರೋಹಿತರು ಎಂಟು ಬಾರಿ ನಸ್ಯವನ್ನು ಸೇದಿಯಾಯಿತು ಇತ್ತಿಂದತ್ತ ಬೆಳ್ಳಿ ತಾಟುಗಳನ್ನೂ, ಚಂಬುಗಳನ್ನೂ ತೆಗೆದಿಟ್ಟುದಾಯ್ತು. ಮುಂದು ಮುಂದಕ್ಕೆ ಸ್ವಲ್ಪ ಸ್ವಲ್ಪವಾಗಿ ಬರುತ್ತಿದ್ದ ಹುಡುಗರ ತಂಡವ ಕೆಕ್ಕರಿಸಿ ನೋಡಿ ಹಿಂದಕ್ಕೆ ಕುಳಿತುಕೊಳ್ಳುವಂತೆ ದೊಡ್ಡ ದನಿಯಿಂದ ಹೇಳಿ, ಬೆಲ್ಲದ

ಚೂರುಗಳನ್ನು ಅವರ ಕಡೆಗೆ ಬಿಸಾಕಿದ್ದಾಯ್ತು. ಇಷ್ಟಾದರೂ ವರನ ದರ್ಶನವೇ ಇಲ್ಲ "ಲೋ ಶಾಮು, ಲಗ್ನ ಕಾಲ ಮೀರಿ ಹೋಗು ವದು. ಕೂಗೋ ರಾಕಾಚಂದ್ರನನ್ನ" ಎಂದು ಅಲ್ಲಿದ್ದ ಹುಡು ಗನೊಬ್ಬನಿಗೆ ಹೇಳಿದ್ದಾಯ್ತು ಇಷ್ಟಾಗುವದರಲ್ಲಿ ರಾಕಾಚಂದ್ರನು ಕಾಶ್ಮೀರ ಮಗುಟವನ್ನುಟ್ಟು, ರೇಶ್ಮೆಯ ವಲ್ಲಿಯನ್ನು ಹೊದ್ದು ಕೊಂಡು ಕೋಣೆಯಿಂದ ಹೊರಕ್ಕೆ ಬಂದನು. ಈ ಕಾಲಕ್ಕೆ ಸರಿ ಯಾಗಿ ಕರಿಯುಡುಪನ್ನು ಧರಿಸಿ ಕೈಯಲ್ಲಿ ಬಾರುದ್ದ ಕೋಲನ್ನು ಹಿಡಿದಿರುವ ಪೋಲೀಸ್ ಜವಾನರಿಬ್ಬರು ಹೊಳಕ್ಕೆ ಬಂದು:-"ಸ್ವಾಮಿ, ರಾಕಾಚಂದ್ರರಾಯರೆ, ಇನ್‌ಸ್ಪೆಕ್ಟರ ಸಾಹೇಬರು ತಮ್ಮನ್ನು ಕರೆದು ಕೊಂಡು ಬರಹೇಳಿದ್ದಾರೆ. ಬರೋಣವಾಗಲಿ" ಎಂದು ಹೇಳಿದರು.

ರಾಕಾಚಂದ್ರ:—ಏನು? ನನ್ನನ್ನ ಬರ ಹೇಳಿವರೆ?

ಜವಾನ:—ಹೌದು ಸ್ವಾಮಿ, ತಮ್ಮನ್ನೇ!

ಸೋಮಶೇಖರ:—ಅಯ್ಯಾ, ಇವರನ್ನು ಬರಹೇಳಿದರೋ, ಮತ್ತ್ಯಾರನ್ನಾದರೂ ಬರಹೇಳಿದರೊ? ಹೆಸರನ್ನು ಸರಿಯಾಗಿ ಕೇಳಿ, ತಿಳಿದುಕೊಂಡು ಬಂದಿರುವಿಯಾ?

ಜವಾನ:—ಸ್ವಾಮಿ, ರಾಕಾಚಂದ್ರನನ್ನು ನವ್ಮೊಡನೆ ಈಗಲೆ ಕರೆದುಕೊಂಡು ಬರುವಂತೆ ಅಪ್ಪಣೆ ಮಾಡಿರುತ್ತಾರೆ.

ರಾಕಾಚಂದ್ರ:—ಆಗಲಿ, ಬರುವೆನು ಇದರಲ್ಲಿ ಏನೋ ತಪ್ಪಿ ರಬೇಕೆಂದು ತೋರುತ್ತೆ. ಅಲ್ಲೇ ಹೋಗಿ ವಿಚಾರಿಸೋಣ, ನಡೆ.

ಇವರಲ್ಲಿ ಸಂಭಾಷಣೆಯು ನಡೆಯುತ್ತಿರುವಾಗ್ಗೆ ಮತ್ತೊಬ್ಬ ಜವಾನನು ಓಡಿ ಬಂದು:— "ಸ್ವಾಮಿ, ದೇವಿದಾಸನಿಂದ ಕೊಡ ಲ್ಪಟ್ಟ ಪತ್ರವೊಂದು ತಮ್ಮಲ್ಲಿರುವುದಂತೆ. ನಿಜವೊ?

ರಾಕಾಚಂದ್ರ:—ಹೌದು. ಇರುವದು. ಅದನ್ನು ಚಿಂತಾಸಾಗ ರನಿಗೆ ಕೊಡಬೇಕೆಂದು ಹೇಳಿರುವನು.

ಜವಾನ:—ಅದನ್ನು ತೆಗೆದುಕೊಂಡು ಬರಹೇಳಿರುವರು.

ರಾಕಾಚಂದ್ರನು ಕೋಣೆಯೊಳಕ್ಕೆ ಹೋಗಿ ಪತ್ರವೊಂದನ್ನು

ತೆಗೆದುಕೊಂಡು ಬಂದು ಅದನ್ನು ಅವನಿಗೆ ಕೊಟ್ಟನು. ಕೂಡಲೆ ಇಬ್ಬರೂ ಆತನನ್ನು ಕರೆದುಕೊಂಡು ಹೊರಟರು. ಸೋಮಶೇಖರರಾಯರು ಎಷ್ಟು ಕೇಳಿಕೊಂಡರೂ ಅವರು ಉತ್ತರವನ್ನೇ ಕೊಡಲಿಲ್ಲ. ಎಲ್ಲೆಲ್ಲಿ ನಡೆಯುತ್ತಿದ್ದ ಕೆಲಸಗಳು ಅಲ್ಲಲ್ಲಿಯೇ ನಿಲ್ಲಿಸಲ್ಪಟ್ಟವು. ವಾದ್ಯ ಘೋಷಕ್ಕೆ ಬದಲಾಗಿ ಮನೆಯಲ್ಲೆಲ್ಲ ಆರ್ತನಾದವು ಮೊದಲಾಯಿತು. ಯಾರನ್ನು ಯಾರೂ ಸಮಾಧಾನಪಡಿಸುವಂತಿಲ್ಲ. ಶಾಂತಶೀಲನಂತೂ ದಿಕ್ಕು ತೋರದೆ ಹಿಂದು ಮಾಡಿಲಿಯಲ್ಲಿ ಕುಳಿತು ಬಿಟ್ಟನು. ಈ ಸಮಾಚಾರವನ್ನು ಕೇಳಿ ತಿಮ್ಮಪ್ಪನಾಯಕರು ಠಾಣೆಗೆ ಓಡಿ ಹೋದರು ಇನಸ್ಪೆಕ್ಟರರಲ್ಲಿ ಒತ್ತಾಯವಾಗಿ ಹೇಳಿಕೊಂಡರು. ಏನು ಪ್ರಯೋಜನವೂ ಕಾಣದೆ ಹಿಂತಿರುಗಿದರು ಗೌರೀಪೂಜೆಯನ್ನು ಮಾಡುತ್ತಿದ್ದ ಚಂಚಲೆಗೆ ಈ ವಿಚಾರ ತಿಳಿಯಲು ದೊಪ್ಪನೆ ನೆಲದ ಮೇಲೆ ಬಿದ್ದು ಮೂರ್ಛಿತಳಾದಳು ಅಲ್ಲಿದ್ದವರು ಶೈತ್ಯೋಪಚಾರ ಮಾಡಿದ ಮೇಲೆ ಎಚ್ಚರಿಕೆಯಾಯಿತು. ರೋದನಕ್ಕೆ ಷುರುವಾಯಿತು ಅದು ನಿಲ್ಲಲೇ ಇಲ್ಲ

---

## ಪರಿಚ್ಛೇದ ೩

ಇಂದು ನ್ಯಾಯಾಧೀಶ ಮಹೇಂದ್ರನು ತನ್ನ ಕೋಣೆಯಲ್ಲಿ ಮಂಚದ ಮೇಲೆ ಕುಳಿತಿದ್ದಾನೆ. ಆತನ ಭಾರ್ಯೆಯಾದ ಮಂಥರೆಯು ಪಕ್ಕದಲ್ಲಿಯೇ ಕುಳಿತುಕೊಂಡು ತನ್ನ ಸ್ವಾಮಿಗೆ ತಾಂಬೂಲವನ್ನು ಮಡಿಚಿಕೊಡುತ್ತಿದ್ದಾಳೆ ಇಬ್ಬರ ಮುಖದಲ್ಲಿಯೂ ಉಲ್ಲಾಸವು ತಲೆದೋರುತ್ತಿದೆ ಈ ದಿನ ತನ್ನ ಭಾರ್ಯೆಯ ಹುಟ್ಟಿದ ಹಬ್ಬವೆಂದು ಆಕೆಯ ಮನಸ್ಸಿಗೊಪ್ಪುವ ಆಭರಣಗಳನ್ನು ತಂದು ಕೊಟ್ಟಿರುವನಲ್ಲದೆ, ಆಕೆಯ ಹೇಳಿಕೆಯಂತೆ ಬೇಕು-ಬೇಕಾದವರಿಗೆ ಉಡುಗೆರೆಗಳನ್ನು ಕೊಟ್ಟು ಸತ್ಕರಿಸಿದ್ದಾನೆ ಈಗ ತಾನೆ ಇಬ್ಬರೂ ಊಟ

ಮಾಡಿ ಬಂದು ಕುಳಿತುಕೊಂಡಿದ್ದಾರೆ ಹೀಗೆ ಇಬ್ಬರೂ ಮೌನವಾಗಿ ಕುಳಿತುಕೊಂಡಿರುವಾಗ್ಗೆ ಮಂಥರೆಯೇ ಮೌನವನ್ನು ಭಂಗ ಮಾಡಿ ಗಂಡನನ್ನು ಕುರಿತು:

ಮಂಥರೆ:—ಪ್ರಾಣಪ್ರಿಯ, ಇಷ್ಟು ಮೌನದಿಂದಿರುವುದಕ್ಕೆ ಕಾರಣವೇನು? ಈ ಸಂತೋಷ ಸಮಯದಲ್ಲಿಯೂ ತಮ್ಮ ಮುಖವು ಆಗಾಗ ಗಂಭೀರ ಮುದ್ರೆಯನ್ನು ತಾಳುತ್ತಿರುವುದಲ್ಲ? ಅಕ್ಕನ ನೆನಪೇನಾದರೂ ಉಂಟಾಯಿತ್ತೆ? ಅದಕ್ಕಾಗಿ ನೀವು ಚಿಂತಿಸುತ್ತ ಕುಳಿತರೆ, ಸತ್ತವರು ಎದ್ದು ಬರುವರೆ? ಅವರ ನೆನಪು ನಿಮಗಾಗದಂತೆ ಮಾಡಿ ನಿಮ್ಮ ಮನಸ್ಸಿಗೆ ಸಂತೋಷವನ್ನುಂಟುಮಾಡಲು, ನಾನು ಸಿದ್ಧಳಾಗಿಲ್ಲವೆ? ನಿಮ್ಮ ಉದ್ವೇಗವೇನೆಂಬುದನ್ನು ಅರ್ಧಾಂಗಿಯಾದ ನನ್ನಲ್ಲಿ ತಿಳಿಸಬಾರದೆ?

ಮಹೇಂದ್ರ: ಪ್ರಿಯೆ, ನನಗೆ ಯಾವ ವ್ಯಸನವೂ ಇಲ್ಲದೆ, ಹರ್ಷಚಿತ್ತನಾಗಿಯೇ ಇರುವೆನಲ್ಲ! ಇಲ್ಲದ ಕಲ್ಪನೆಗಳನ್ನು ಮಾಡಿಕೊಂಡು ಮನಸ್ಸನ್ನೇಕೆ ನೋಯಿಸಿಕೊಳ್ಳುವೆ? ನೀನು ಸುಖವಾಗಿರುವುದನ್ನು ನೋಡಬೇಕೆಂದೇ ನಾನು ಪ್ರಯತ್ನ ಪಡುತ್ತಿರುವುದು. ಅದರಲ್ಲೂ ಈ ನಿನ್ನ ಜನ್ಮ ದಿನದ ಸಮಾರಂಭದ ವೇಳೆಯಲ್ಲಿ ನನ್ನ ಚಿಂತೆಗೆ ಕಾರಣ ತಾನೆ ಏನಿರುವುದು?

ಮಂಥರೆ—ಹೃದಯೇಶ್ವರ, ತಾವೇನೆಂದರೂ ನನ್ನ ಮನಸ್ಸಿಗೆ ನೆಮ್ಮದಿಯಾಗಲಾರದು. ನೀವು ನಿಮ್ಮ ಮನೋಭಿಪ್ರಾಯಗಳನ್ನು ನನ್ನಲ್ಲಿ ಮರೆಮಾಚದೆ ತಿಳಿಸುತ್ತಿಲ್ಲವೆಂಬ ಅಂಶವು ನಿಮ್ಮ ಅಂತರಾತ್ಮನಿಗೊಬ್ಬನಿಗೆ ನನಗೊಬ್ಬಳಿಗಲ್ಲದೆ ಮತ್ತಾರಿಗೂ ತಿಳಿಯದು. ನೀವು ಮಲಗಿ ನಿದ್ರೆ ಮಾಡುತ್ತಿರುವಾಗ ಕೆಟ್ಟ ಕನಸುಗಳನ್ನು ಕಂಡವರಂತೆ ಹಿಂದೊಂದು ಬಾರಿ ಬೆಚ್ಚಿ ಬೀಳುವಿರಿ ಹಿಂದೊಂದು ಬಾರಿ ವಿಕಾರ ಧ್ವನಿಯಿಂದ ಕೂಗುವಿರಿ. ಆ ನಿಮ್ಮ ಸ್ಥಿತಿಯನ್ನು ನೋಡಿದರೆ, ನನ್ನ ಮನಸ್ಸೇ ಹೌಹಾರಿ ಹೋಗುವುದು. ಪ್ರಾಣಪ್ರಿಯಳಾದ ನನ್ನಲ್ಲಿ ನಿಮ್ಮ ಮನಸ್ಸಿನ ಕ್ಲೇಶಗಳನ್ನು ಬೈತಿಡುವುದು ಯೋಗ್ಯವಲ್ಲ.

ಮಹೇಂದ್ರ:—ಹೃದಯೇಶ್ವರಿ, ಹೆಂಗಸಿನ ಸ್ವಭಾವಕ್ಕನುಗುಣವಾದ ಭಯುಗಳೇ ನಿನ್ನಲ್ಲಿಯೂ ಉಂಟಾಗಿರುವುವು. ಇದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ನನ್ನ ಮಾತನ್ನು ನೀನು ನಂಬುವಿಯಾದರೆ ಈ ಕುಕಲ್ಪನೆಗಳನ್ನು ನಿನ್ನ ಮನಸ್ಸಿನಿಂದ ದೂರ ಮಾಡು.

ಇವರು ಮಾತನಾಡುತ್ತಿರುವಾಗ್ಗೆ ಜವಾನನು ಬಂದು: "ಸ್ವಾಮಿ, ಪೋಲೀಸ ಠಾಣೆಯ ಜಮಾದಾರರು ತಮ್ಮನ್ನು ನೋಡಬೇಕೆಂದು ಬಂದಿರುವರು. ಕಾರ್ಯವು ವಿಶೇಷದ್ದಿರುವುದರಿಂದ ತಮ್ಮ ದರ್ಶನವು ಆಗಿಯೇ ತೀರಬೇಕೆಂದು ಹೇಳುತ್ತಿರುವರು" ಎಂದನು.

ಮಹೇಂದ್ರ:—ಅಷ್ಟು ಅವಸರದ ಕೆಲಸವೇನೊ ನೋಡೋಣ, ಒಳಕ್ಕೆ ಬರ ಮಾಡು. ಮುಂಧರೆಯನ್ನು ಕುರಿತು:—"ಪ್ರಿಯೆ, ಕುಳಿತುಕೋ. ವಿಚಾರವೇನೆಂಬದನ್ನು ತಿಳಿಯೋಣ" ಎಂದು ಹೇಳಿ, ಆಕೆಯನ್ನು ಅಲ್ಲಿಯೇ ಕೂಡಿಸಿಕೊಂಡನು

ಜಮಾದಾರನು ಬಂದು ನ್ಯಾಯಾಧೀಶನಿಗೆ ವಂದನೆಯನ್ನು ಮಾಡಿದನು

ಮಹೇಂದ್ರ:—ಜಮಾದಾರ್, ಈಗ ಬಂದ ವಿಚಾರವೇನು?

ಜಮಾದಾರ್:—ಪ್ರಭು, ರಾಕಾಚಂದ್ರನೆಂಬೊಬ್ಬ ಯುವಕನು ರಾಜದ್ರೋಹಿಯೆಂದೆಣಿಸಲ್ಪಟ್ಟಿರುವನು. ಆತನನ್ನು ಸೆರೆ ಹಿಡಿದು ತಂದಿರುವೆವು. ರಾಜನಿಗೆ ವರದಿ ಕಳುಹಲು, ಇನ್ನೆರಡು ಗಂಟೆಗಳೊಳಗಾಗಿ ಆತನ ವಿಚಾರಣೆ ಮಾಡಿ, ದ್ರೋಹಿಯೆಂದು ತಿಳಿದು ಬಂದರೆ, ತಕ್ಕ ಶಿಕ್ಷೆಯನ್ನು ವಿಧಿಸಬೇಕೆಂದು ತಮಗೆ ತಿಳಿಸುವಂತೆ ಆಜ್ಞೆ ಮಾಡಿರುವರು ಆದ್ದರಿಂದ ಇಲ್ಲಿಗೆ ಬಂದಿರುವೆನು.

ಮಹೇಂದ್ರ:—ಸರಿ. ಈಗಲೇ ನ್ಯಾಯಸ್ಥಾನಕ್ಕೆ ಬರುವೆನು. ಅಪರಾಧಿಯನ್ನು ಕರೆದುಕೊಂಡು ಬನ್ನಿ.

"ಆಜ್ಞೆಯಾದಂತೆ ಮಾಡುವೆನು" ಎಂದು ಹೇಳುತ್ತ, ಜಮಾದಾರನು ಪುನಃ ವಂದನೆಯನ್ನು ಮಾಡಿ ಹೊರಟು ಹೋದನು.

ಮಹೇಂದ್ರ:-ಪ್ರಿಯೆ, ನೋಡಿದೆಯಾ, ದೇಶದಲ್ಲಿ ರಾಜದ್ರೋ

ಹಿಗಳ ಸಂಖ್ಯೆಯು ಎಷ್ಟು ಹೆಚ್ಚುತ್ತಿರುವುದು?

ಮಂಥರೆ:—ಸ್ವಾಮಿನ್, ರಾಜದ್ರೋಹಿಗಳಿಗೆ ತಾವು ವಿಧಿಸುವ ಶಿಕ್ಷೆಯೇನು?

ಮಹೇಂದ್ರ:-ಶಿಕ್ಷೆಯೆ? ಮರಣದಂಡನೆ ಇಲ್ಲವೆ ಕರಿ ನೀರು.

ಮಂಥರೆಯು ಮೈ ನಡುಗಿತು. ಮುಖವು ಬೆವರೇರಿತು ಆಕೆಯು ಅಳುವುದಕ್ಕೆ ಪ್ರಾರಂಭ ಮಾಡಿದಳು. ಇದನ್ನು ನೋಡಿ ಮಹೇಂದ್ರನು: "ಮಂಥರೆ, ಇದೇನು? ಯಾತಕ್ಕಾಗಿ ಅಳುತ್ತಿರುವೆ" ಎಂದು ಕೇಳಿದನು.

ಮಂಥರೆ:—ಪ್ರಭೋ, ಇಂಥ ಕಠಿಣ ಶಿಕ್ಷೆಯನ್ನು ವಿಧಿಸುವ ನೀವು ಎಷ್ಟು ಕಠಿಣಾತ್ಮರು ಈ ವರೆವಿಗೆ ಎಷ್ಟು ಪ್ರಾಣಿಗಳ ಅಂತವನ್ನು ಮಾಡಿರುವಿರಿ?

ಮಹೇಂದ್ರ:—ಇದಕ್ಕಾಗಿಯೊ ನೀನು ಭಯಪಟ್ಟು ಅಳುತ್ತಿರುವುದು? ಹುಚ್ಚಿ, ಸಾಕು ಮಾಡು ನಿನ್ನೀ ಅಳುವನ್ನು. ರಾಜನ ವಿಷಯದಲ್ಲಿ ದ್ರೋಹವನ್ನೆಳಸುವವರಿಗೆ ಈ ಶಿಕ್ಷೆಯೇನೂ ಹೆಚ್ಚಿನದಲ್ಲ. ಇದಕ್ಕೂ ಹೆಚ್ಚಿನ ಶಿಕ್ಷೆಯು ಇದ್ದಿದ್ದರೆ, ಅದನ್ನು ಅನುಭವಿಸುವುದಕ್ಕೂ ಅಂಥವರು ಅರ್ಹರೇ ಆಗಿರುವರು

ಮಂಥರೆ:—ಪ್ರಿಯ, ಈ ಶಿಕ್ಷೆಯನ್ನು ಎಲ್ಲಾ ರಾಜದ್ರೋಹಿಗಳಿಗೂ ವಿಧಿಸುವರೆ?

ಈ ಮಾತನ್ನು ಕೇಳುತ್ತಲೆ ಮಹೇಂದ್ರನ ಮುಖವು ಸ್ವಲ್ಪ ಕಪ್ಪಿಟ್ಟಿತು. ಎದೆಯು ನಡುಗಿತು. (ಇದರ ಕಾರಣವು ಮುಂದೆ ಪಾಠಕ ಮಹಾಶಯರಿಗೆ ತಿಳಿಯುವುದು) ಆದರೂ ತನ್ನ ಈ ಸ್ಥಿತಿಯನ್ನು ಹೆಂಡತಿಗೆ ತೋರಗೊಡದೆ: "ಮಂಥರೆ, ರಾಜದ್ರೋಹಿಗಳೆಲ್ಲರಿಗೂ ಇದೇ ಶಿಕ್ಷೆಯಲ್ಲದೆ ಮತ್ತೆ ಬೇರೆ ಇರುವುದೇ?" ಎಂದು ಕೇಳಿದನು.

ಮಂಥರೆ:—ಏನಾದರೂ ಆಗಲಿ, ಈಗ ತಾವು ನನ್ನ ಹಿಂದು ಇಷ್ಟಾರ್ಥವನ್ನು ನೆರವೇರಿಸಿಕೊಡಬೇಕು. ಈ ದಿನದಂಥ ಸಂತೋಷ

ಸಮಯದಲ್ಲಿ ತಾವು ಆಗುವುದಿಲ್ಲವೆಂದು ಹೇಳಕೂಡದು.

ಮಹೇಂದ್ರ:—ನಿನ್ನ ಯಾವ ಬಯಕೆಯನ್ನು ತಾನೆ ನಾನು ನೆರವೇರಿಸದಿರುವೆನು ಹೇಳು? ಈಗಿನ ನಿನ್ನ ಇಷ್ಟಾರ್ಥವೇನೆಂಬುದನ್ನು ತಿಳಿಸು

ಮಂಥರೆ:—ಇನ್ನೆರಡು ಘಳಿಗೆಯೊಳಗಾಗಿ ತಮ್ಮ ಮುಂದೆ ನ್ಯಾಯಸ್ಥಾನದಲ್ಲಿ ನಿಲ್ಲಿಸಲ್ಪಡುವವನ ವಿಷಯದಲ್ಲಿ ದಯಾಶೂನ್ಯರಾಗದಿರಿ, ಎಂಬುದೊಂದೇ ನನ್ನ ಪ್ರಾರ್ಥನೆ. ಈ ನನ್ನ ಹುಟ್ಟಿದ ಹಬ್ಬದ ದಿನ ನನ್ನ ಸ್ವಾಮಿಯಾದ ತಾವು ಒಬ್ಬ ಬ್ರಾಹ್ಮಣ ಯುವಕನ ಪ್ರಾಣವನ್ನು ಮಾತ್ರ ತೆಗೆಯದಿರಿ.

ಮಹೇಂದ್ರ:—ಇಷ್ಟೇ ಅಹುದಲ್ಲವೊ ನಿನ್ನ ಪ್ರಾರ್ಥನೆ ಆಗಲಿ. ಸಾಧ್ಯವಾದ ಮಟ್ಟಿಗೂ ಅದನ್ನು ಸಲ್ಲಿಸುವೆನು

ಎಂದು ಹೇಳಿದವನೇ ಬೇರೆ ಕೋಣೆಗೆ ಹೋಗಿ ತನ್ನ ಉಡುಪನ್ನು ಧರಿಸಿಕೊಂಡು ನ್ಯಾಯಸ್ಥಾನದ ಕಡೆ ಹೊರಟನು. ಎಂದಿನಂತೆ ಈ ದಿನ ಈತನ ಮನಸ್ಸು ನೆಮ್ಮದಿಯಿದ್ದಂತೆ ತೋರಲಿಲ್ಲ. ಯಾವ ದಿನವೂ ಈತನು ಗಾಡಿಯಲ್ಲಿ ಕುಳಿತುಕೊಂಡಲ್ಲದೆ, ಕಾಲುನಡಿಗೆಯಿಂದ ನ್ಯಾಯಸ್ಥಾನಕ್ಕೆ ಹೋದವನಲ್ಲ. ಯಾವುದೋ ಅಗಾಧವಾದ ಮನಃಕ್ಲೇಶವು ಈತನಿಗೆ ಈ ಅಸ್ವಸ್ಥತೆಯನ್ನುಂಟುಮಾಡಿದಂತೆ ಭಾಸವಾಗುತ್ತಿತ್ತು. ದಾರಿಯಲ್ಲಿ ಹೋಗುತ್ತಿರುವಾಗ ಜನಗಳು ಮಾಡುತ್ತಿರುವ ವಂದನೆಗಳನ್ನು ಸ್ವೀಕರಿಸದೆಯೂ ಪ್ರತಿ ವಂದನೆಗಳನ್ನು ಮಾಡದೆಯೂ ಹೋಗುತ್ತಿದ್ದಾನೆ ಇದರ ಕಾರಣವು ಮುಂದೆ ಸ್ವಲ್ಪದರಲ್ಲಿಯೆ ನಮ್ಮ ವಾಚಕರ ಗಮನಕ್ಕೆ ಬರುವುದು

ಯಥಾಕಾಲದಲ್ಲಿ ಮಹೇಂದ್ರನು ನ್ಯಾಯಸ್ಥಾನಕ್ಕೆ ಬಂದನು. ಅಪರಾಧಿಯೆಂದೆಣಿಸಲ್ಪಟ್ಟ ರಾಕಾಚಂದ್ರನನ್ನು ತಂದು ಅವನ ಮುಂದೆ ನಿಲ್ಲಿಸಲ್ಪಟ್ಟನು.

ನ್ಯಾಯಾಧೀಶ:—ಇನ್‌ಸ್ಪೆಕ್ಟರೆ, ಈತನು ರಾಜದ್ರೋಹಿಯೆಂ

ದು ಯಾವ ಆಧಾರದ ಮೇಲೆ ಹೇಳುವಿರಿ?

ಇನ್‌ಸ್ಪೆಕ್ಟರ:—ಈತನಲ್ಲಿದ್ದ ಪತ್ರದಿಂದ.

ನ್ಯಾಯಾಧೀಶ:—ಯಾವ ಪತ್ರವು?

ಇನ್‌ಸ್ಪೆಕ್ಟರು ಪತ್ರವನ್ನು ಮುಂದಿಟ್ಟರು. ಮೇಲಿನ ವಿಳಾಸವನ್ನು ನೋಡುತ್ತಲೆ ನ್ಯಾಯಾಧೀಶನ ಕೈಗಳು ನಡುಗುವುದಕ್ಕೆ ಪ್ರಾರಂಭವಾದವು. ವಿಳಾಸವು ಚಿಂತಾಸಾಗರನೆಂದಿತ್ತು. ತನ್ನ ಈ ವರ್ತನವು ನ್ಯಾಯಸ್ಥಾನದಲ್ಲಿದ್ದವರಿಗೆ ಗೊತ್ತಾದರೆ ತನ್ನಲ್ಲಿ ಸಂಶಯವುಂಟಾಗುವುದೆಂದು ತಿಳಿದು, ಅದಕ್ಕೆ ಆಸ್ಪದಕೊಡಬಾರದೆಂದು ಮನಸ್ಸನ್ನು ಗಟ್ಟಿಮಾಡಿದನು. ಅಪರಾಧಿಯನ್ನು ಕುರಿತು: "ಈ ಪತ್ರವನ್ನು ನಿನಗೆ ಕೊಟ್ಟವರಾರು?" ಎಂದು ಪ್ರಶ್ನೆ ಮಾಡಿದನು.

ಅಪರಾಧಿ:—ದೇವಿದಾಸನೇ ಕೊಟ್ಟನು.

ನ್ಯಾಯಾಧೀಶ:—ನಿನ್ನ ಕೈಲಿ ಕೊಡಲು ಕಾರಣವೇನು?

ಅಪರಾಧಿ:—ನಾನು ಸುವರ್ಣಪುರಕ್ಕೆ ಕಾರ್ಯಗೌರವದಿಂದ ಹೋಗಿದ್ದೆನು. ನನ್ನ ಮಿತ್ರನಾದ ಗೋವಿಂದದಾಸನ ಮನೆಯಲ್ಲಿ ಮೂರು ದಿನವಿದ್ದೆನು ಆ ಅವಧಿಯಲ್ಲಿ ದೇವಿದಾಸನೂ ಅಲ್ಲಿಗೆ ಬಂದಿದ್ದನು ನನ್ನ ಮಿತ್ರನೊಡನೆ ಮಾತನಾಡುತ್ತಾ ಇದ್ದಾಗ ನಾನು ಸೋಮಪುರದಿಂದ ಬಂದಿರುವೆನೆಂದು ಆತನು ತಿಳಿದು, ನನ್ನನ್ನು ಕರೆಸಿಕೊಂಡು:-ಒಂದು ಪತ್ರವನ್ನು ಕೊಡುವೆನು. ಅದನ್ನು ವಿಳಾಸದಾರರಿಗೆ ತಲ್ಪಿಸುವುದು, ಎಂದು ಹೇಳಿದನು. ಆಗಲೆಂದು ಒಪ್ಪಿ ಪತ್ರವನ್ನು ತಂದೆನು. ಎಷ್ಟು ಹುಡುಕಿದರೂ ಯಾರನ್ನು ಕೇಳಿದರೂ ವಿಳಾಸದಾರನಾದ ಚಿಂತಾಸಾಗರನಾರೆಂಬುದು ಗೊತ್ತಾಗಲಿಲ್ಲ ನನ್ನ ಮಿತ್ರನಿಗೆ ಈ ಸಂಗತಿಯನ್ನು ತಿಳಿಸಿ ಪತ್ರವನ್ನು ಆತನಿಗೆ ಕಳುಹಿಸಬೇಕೆಂದಿರುವಲ್ಲಿ ನನಗೆ ಈ ಅವಸ್ಥೆಯುಂಟಾಯಿತು.

ನ್ಯಾಯಾಧೀಶ:-ಖಂಡಿತವಾಗಿಯೂ ದೇವಿದಾಸನೇ ಇದನ್ನು ಕೊಟ್ಟನೇ?

ಅಪರಾಧಿ: ಸುಳ್ಳು ಹೇಳುವುದರಿಂದ ಪ್ರಯೋಜನವೇನು?

ನ್ಯಾಯಾಧೀಶ:—ಮತ್ತೇನನ್ನು ಹೇಳಿದನು?

ಅಪರಾಧಿ:—ಮತ್ತ್ಯಾವ ವಿಚಾರವನ್ನೂ ಹೇಳಲಿಲ್ಲ.

ನ್ಯಾಯಾಧೀಶ:-ಚಿಂತಾಸಾಗರನಾರೆಂಬುದನ್ನು ತಿಳಿದಿರುವೆಯಾ?

ಅಪರಾಧಿ:—ದೇವಿದಾಸನು ಆತನ ಚಹರೆಯನ್ನು ಹೇಳಿದ್ದನು. ಅದನ್ನು ಮರೆತುಬಿಟ್ಟೆ. ನನ್ನ ಮಿತ್ರನಿಗೆ ಬರೆದು ತಿಳಿದುಕೊಳ್ಳುವೆನು.

ನ್ಯಾಯಾಧೀಶ:--ತಿಳಿದುಕೊಳ್ಳಬೇಕೆಂಬ ಅಭಿಪ್ರಾಯವುಂಟೆ?

ಅಪರಾಧಿ:—ಇರುವುದು.

ನ್ಯಾಯಾಧೀಶ:- ಏತಕ್ಕಾಗಿ?

ಅಪರಾಧಿ:--ಆತನು ರಾಜದ್ರೋಹಿಯೆಂದು ದೃಢಪಡಿಸಲು.

ಈ ಮಾತನ್ನು ಕೇಳುತ್ತಲೆ ನ್ಯಾಯಾಧೀಶ ಮಹೇಂದ್ರನ ಪ್ರಾಣವೇ ಹೋದಂತಾಯಿತು. ತಾನು ಎಲ್ಲಿ ಕುಳಿತಿರುವೆನೆಂಬ ಭಾವವೂ ಇಲ್ಲವಾಯಿತು. ಅಪರಾಧಿಯನ್ನು ಕುರಿತು:-"ರಾಕಾಚಂದ್ರ, ಚಿಂತಾಸಾಗರನನ್ನು ಹುಡುಕುವೆಯಾ? ನೀನು ರಾಜದ್ರೋಹಿಯಲ್ಲವೆ? ದೇವಿದಾಸನು ನಿನಗೆ ಕಾಗದವನ್ನು ಕೊಡಲು ಕಾರಣವೇನು? ಚಿಂತಾಸಾಗರನೊಂದಿಗೆ ಸೇರಿ ಪಿತೂರಿಯನ್ನು ನಡೆಸುತ್ತಿರುವ ನೀನು ರಾಜದ್ರೋಹಿಯೇ ಆಗಿರುವೆ. ಆದ್ದರಿಂದ ನಿನಗೆ ಜೀವಮಾನಾಂತ ಜೈಲು ವಾಸವನ್ನು ವಿಧಿಸುವೆನು, ಹೋಗು" ಎಂದು ಹೇಳುತ್ತಲೆ ರಾಕಾಚಂದ್ರನನ್ನು ಅಲ್ಲಿಂದ ಕರೆದುಕೊಂಡು ಹೋದರು. ಮಹೇಂದ್ರನು ಎಲ್ಲರನ್ನೂ ಬೀಳ್ಕೊಟ್ಟು, ಮತ್ತೊಂದು ಕೋಣೆಯೊಳಕ್ಕೆ ಹೋಗಿ ಕುಳಿತುಕೊಂಡನು. ತನ್ನಲ್ಲೀ ತಾನು ಈ ರೀತಿ ಮಾತನಾಡಿಕೊಂಡನು: "ದೇವಿದಾಸ, ಎಂಥ ಅವಸ್ಥೆಯನ್ನು ನಿನ್ನ ಪ್ರಾಣಾಪ್ತನಿಗೆ ತಂದೊಡ್ಡಿದ್ದೆ ಅದರೇನು? ದೇವರು ದೊಡ್ಡವನು. ಚಿಂತಾಸಾಗರನು ನಾನೇ ಎಂಬುದು ರಾಕಾಚಂದ್ರನಿಗೆ ತಿಳಿದಿದ್ದ ಭಾಗದಲ್ಲಿ ಇಲ್ಲವೆ ನೀನೇ ಹೇಳಿದ್ದ ಭಾಗದಲ್ಲಿ ಈ ಕಾಲಕ್ಕೆ ನಿನ್ನ ಮಿತ್ರನು ಇಹ

ಲೋಕದ ವ್ಯಾಪಾರವನ್ನು ತ್ಯಜಿಸಿ, ರಾಜದ್ರೋಹಿಯೆಂಬ ಕಲಂಕ ವನ್ನು ತಲೆಯ ಮೇಲೆ ಹೊತ್ತುಕೊಂಡು ಹೊರಟು ಹೋಗುತ್ತಿದ್ದ ನಲ್ಲವೆ? ಪ್ರಾಣೇಶ್ವರಿ ಮಂಥರೆಯು ಏನೆಂದು ಪ್ರಾರ್ಥಿಸಿದ್ದಳು? ಈ ದಿನ ವಿಚಾರ ಮಾಡುವ ಅಪರಾಧಿಯ ವಿಷಯದಲ್ಲಿ ದಯಾಶೂನ್ಯ ನಾಗಿರಬೇಡೆಂದಲ್ಲವೆ? ನಿಜ. ನಾನೂ ಹಾಗೆಯೇ ಇರಬೇಕೆಂದಿದ್ದೆ. ಆದರೇನು? ರಾಕಾಚಂದ್ರನು ನನ್ನ ಪತ್ರಿಯನ್ನು ಹಚ್ಚಬೇಕೆಂದೂ, ನಾನು ರಾಜದ್ರೋಹಿಯೆಂಬ ವಿಷಯವನ್ನು ದೃಢಪಡಿಸಬೇಕೆಂದೂ ಸಂಕಲ್ಪ ಮಾಡಿಕೊಂಡಿದ್ದನಲ್ಲವೆ? ಅವನ ಸಂಕಲ್ಪವು ಈಡೇರುವು ದಕ್ಕೆ ಅವಕಾಶವನ್ನು ಕೊಟ್ಟದ್ದಿದ್ದರೆ, ನಾನು ನನ್ನ ಮಂಥರೆಗೆ ಭೆಟ್ಟಿ ಯಾಗುವ ಸಂಭವವೇ ಇರಲಿಲ್ಲವಲ್ಲ? ಒಬ್ಬನ ವಿಷಯದಲ್ಲಿ ದಯಾ ಶೂನ್ಯನಾಗಿದ್ದರೂ, ಮತ್ತೊಬ್ಬಳ ವಿಚಾರದಲ್ಲಿ ಪೂರ್ಣ ದಯಾವಂ ತನೇ ಆದೆನಲ್ಲವೆ? ಇದರಲ್ಲಿ ಯಾವ ದೋಷವೂ ಇರುವುದಿಲ್ಲ. ಇನ್ನು ರಾಕಾಚಂದ್ರನನ್ನು ಸೋಮಪುರದಲ್ಲಿ ಸೆರೆಯಿಡದಂತೆ ಮಾಡು ವೆನು. ಅವನ ಸಂಕಲ್ಪವನ್ನು ಮಣ್ಣುಗೂಡಿಸಿಯೇ ತೀರುವೆನು. ಮಿತ್ರನಾದ ದೇವಿದಾಸನ ಪಕ್ಷವನ್ನು ಪ್ರಬಲಪಡಿಸುವೆನು ಅವನ ರಾಜ್ಯವು ಅವನಿಗೆ ಪುನಃ ಸೇರುವಂತೆ ಮಾಡುವೆನು. ಇದಕ್ಕಾಗಿ ನನ್ನ ದೇಹವನ್ನಾದರೂ ಬಲಿಗೊಡುವೆನು. ಅವಿವೇಕಿ, ರಾಕಾ ಚಂದ್ರ, ಚಿಂತಾಸಾಗರನ ಸಾಮರ್ಥ್ಯವು ನಿನಗೆ ಹೇಗೆ ತಾನೆ ತಿಳಿ ಯುವುದು? ನಿನ್ನ ಆಯುಷ್ಯವನ್ನೆಲ್ಲ ನರಕವಾಸದಲ್ಲಿಯೇ ಕಳೆಯು ವಂತೆ ಮಾಡುವೆನು. ಅಬ್ಬಬ್ಬ! ಸ್ವಲ್ಪದರಲ್ಲಿ ಕಾಳ್ಕಿಚ್ಚಿನಲ್ಲಿ ಬಿದ್ದು ಬೆಂದು ಹೋಗುತ್ತಿದ್ದೆನಲ್ಲ! ಮೋಸದಿಂದಲೆ ಈ ದೇಹವನ್ನು ಬೆಳಸಿ ಇಂಥ ದೊಡ್ಡ ಪದವಿಯನ್ನೇರಿ, ಮಂಥರೆಗ ಮಂಕುಬೂದಿಯನ್ನು ಹಚ್ಚಿ ಮದುವೆ ಮಾಡಿಕೊಂಡು ಸುಖಸಾಮ್ರಾಜ್ಯವನ್ನು ಅನುಭವಿ ಸುತ್ತಿದ್ದ ನನಗೆ, ಕೊಂಚದರಲ್ಲಿ ಅಧೋಗತಿಯು ಪ್ರಾಪ್ತವಾಗುತ್ತಿ ದ್ದಿತಲ್ಲ!! ನನ್ನ ಹೆಸರು ಚಿಂತಾಸಾಗರನೇ ಆಗಿದ್ದ ಭಾಗದಲ್ಲಿ ಈ ಸೋಮಪುರದರಸನನ್ನೂ, ಅವನ ಅನುಯಾಯಿಗಳನ್ನೂ ಈ ನನ್ನ

ಮಹಾಸಾಗರದಲ್ಲಿ ಅದ್ದುವೆನು. ಏಳಲು ಪ್ರಯತ್ನಪಟ್ಟರೆ ಪಾತಾಳವನ್ನು ಮುಟ್ಟುವ ತನಕ ತುಳಿದು ಬಿಡುವೆನು. ಇದು ಸತ್ಯ. ಈ ನನ್ನ ಪ್ರತಿಜ್ಞೆಯು ಎಂದಿಗೂ ಸುಳ್ಳಾಗಲಾರದು. ಖಂಡಿತವಾಗಿಯೂ ನಿನ್ನ ಪ್ರತಿಜ್ಞೆಯನ್ನು ಆಗಗೊಡಲಾರೆನು. ಶೀಘ್ರದಲ್ಲಿಯೇ ನಿನ್ನ ಅಧಃಪತನವಾಗುವುದು. ಇದರಲ್ಲಿ ಯಾವ ಸಂಶಯವೂ ಇಲ್ಲ.

"ಚಿಂತಾಸಾಗರ! ಎಚ್ಚರಿಕೆಯಿಂದಿರು" ಎಂದು ಯಾರೋ ಕೂಗಿ ಹೇಳಿದಂತೆ ಕೇಳಿಸಿತು ಕುಳಿತಿದ್ದವನು ಚಟ್ಟನೆ ಪೀಠದಿಂದೆದ್ದನು. ಕೊಠಡಿಯನ್ನೆಲ್ಲಾ ಶೋಧಿಸಿದನು. ಯಾರೂ ಕಾಣಿಸಲಿಲ್ಲ ಕಿಟಕಿಯಿಂದ ಆಚೆಗೆ ಯಾರಿರುವರೆಂದು ನೋಡಿದನು. ಓರ್ವ ಸಂನ್ಯಾಸಿನಿಯು ಜಾಗ್ರತೆಯಾಗಿ ಹೋಗುತ್ತಿದ್ದಂತೆ ಕಂಡಿತು. ಕೂಡಲೆ ಸೇವಕನನ್ನು ಕೂಗಿ, ಸಂನ್ಯಾಸಿನಿಯನ್ನು ಹಿಡಿದು ತರುವಂತೆ ಹೇಳಿದನು. ಸೇವಕನು ಎಷ್ಟು ಹುಡುಕಿದರೂ ಯಾರೂ ಕಾಣಲಿಲ್ಲವೆಂದು ಹೇಳಿದನು. ಮಹೇಂದ್ರನು ಹುಚ್ಚನಾದನು. ತನ್ನ ಮೋಸವೆಲ್ಲವೂ ಹೊರಬಿದ್ದಿತೆಂದು ವ್ಯಸನಪಟ್ಟನು. ಮಾಡುತ್ತಾನೇನು? ನಿರ್ವಾಹವಿಲ್ಲದೆ ಮನೆಯ ಕಡೆ ಹೊರಟು ಹೋದನು

## ಪರಿಚ್ಛೇದ ೪

ವಾಚಕವೃಂದ, ಇನ್ನು ಮದುವೆಯ ಮನೆಯಲ್ಲಿ ಏನಾಗುತ್ತಿದೆಯೆಂಬುದನ್ನು ನೋಡೋಣ ಬನ್ನಿ.

ಪ್ರಿಯಕರ ರಾಕಾಚಂದ್ರನನ್ನು ಪೋಲೀಸಿನವರು ಹಿಡಿದುಕೊಂಡು ಹೋದರೆಂಬ ಸಮಾಚಾರವನ್ನು ಕೇಳುತ್ತಲೇ ಮೂರ್ಛೆ ಹೋದ ಚಂಚಲೆಗೆ, ಶೈತ್ಯೋಪಚಾರವನ್ನು ಮಾಡಿ ಎಬ್ಬಿಸಿದರೆಂದು ಹಿಂದೆ ಹೇಳಿದ್ದೆವಲ್ಲವೆ? ಎಚ್ಚರಿಕೆಯಾಗುತ್ತಲೆ ಕೋಣೆಯಲ್ಲಿದ್ದ ಸಖಿಯರೆಲ್ಲರನ್ನೂ ಹೊರಕ್ಕೆ ಹೋಗುವಂತೆ ಹೇಳಿ, ತನ್ನ ಸ್ವಾಮಿಯನ್ನು ಸೇರುವವರೆವಿಗೂ ಈ ಮನೆಯ ಹೊಸ್ತಿಲವನ್ನು ಮೆಟ್ಟುವ

ದಿಲ್ಲವೆಂದೂ, ತನ್ನ ಬಂಧು-ಬಾಂಧವರ ಮುಖಾವಲೋಕನವನ್ನು ಮಾಡುವದಿಲ್ಲವೆಂದೂ ಪ್ರತಿಜ್ಞೆ ಮಾಡಿದವಳಾಗಿ, ಯಾರಿಗೂ ತಿಳಿಯುದಂತೆ ಮನೆಯಿಂದ ಕಾಲ್ತೆಗೆದಳು ಸ್ವಲ್ಪ ಹೊತ್ತಾದ ಮೇಲೆ ಚಂಚಲೆಯು ಇಲ್ಲದ ಹಾಗಾಗಿರುವಳೆಂಬ ಸುದ್ದಿಯು ಮನೆಯಲ್ಲೆಲ್ಲಾ ಹರಡಿತು. ಚಂಚಲೆಯ ತಂದೆ-ತಾಯಿಗಳಿಗೆ ವ್ರಣದ ಮೇಲೆ ಬರೆ ಕೊಟ್ಟಂತಾಯಿತು! ಮದುವೆಯು ನಿಂತು ಹೋದರೂ ಚಿಂತೆಯಿಲ್ಲ ಮಗಳು ಜೀವಂತಳಾಗಿದ್ದರೆ, ಮತ್ತೊಬ್ಬನಿಗೆ ಕೊಟ್ಟು ಲಗ್ನ ಮಾಡಬಹುದೆಂದು ಯೋಚಿಸಿದ್ದರು. ಈಗ ಇದ್ದ ಒಬ್ಬ ಮಗಳೂ ಇಲ್ಲದ ಹಾಗಾಗಲು, ಅವರ ಜೀವಗಳೇ ಹಾರಿ ಹೋದಂತಾಯಿತು. ಏನು ಮಾಡಬೇಕೆಂದು ಯಾರಿಗೂ ತೋಚಲಿಲ್ಲ. ಕೆರೆ, ಕೊಳ, ಬಾವಿಗಳನ್ನೂ, ಊರಲ್ಲಿದ್ದ ಇನ್ನೂ ಅನೇಕ ಕೂಟಗಳನ್ನೂ, ಸಾನಂದ ನದಿಯನ್ನೂ ಶೋಧಿಸಿ ನೋಡಿದರು; ಆದರೆ ಯಾವ ಪ್ರಯೋಜನವೂ ಆಗಲಿಲ್ಲ.

ಚಂಚಲೆಯಾದರೋ ಮನೆಯಿಂದ ಹೊರಟವಳು ನೆಟ್ಟಗೆ ಸಾನಂದ ನದಿಯ ತೀರವನ್ನು ಸೇರಿ, ಜೊತೆಯಲ್ಲಿ ತಂದಿದ್ದ ಸಂನ್ಯಾಸಿನಿಯ ಉಡುಪನ್ನು ಧರಿಸಿಕೊಂಡು ಪ್ರಿಯನಾದ ರಾಕಾಚಂದ್ರನ ಸ್ಥಿತಿಯು ಏನಾಗಿದೆಯೊ ನೋಡೋಣವೆಂದು ಪೋಲೀಸ್ ಠಾಣೆಯ ಕಡೆಗೆ ಹೊರಟಳು. ಇವಳು ಹೋಗುವಾಗ್ಗೆ ಪ್ರಿಯಕರನನ್ನು ಕೈತೋಳಗಳಿಂದ ಬಂಧಿಸಿ, ನ್ಯಾಯಸ್ಥಾನಕ್ಕೆ ಒಯ್ಯುತ್ತಿದ್ದರು ಇದನ್ನು ನೋಡಿ ಮನಸ್ಸಿಗೆ ಬಹಳವಾಗಿ ವ್ಯಥೆಯುಂಟಾದರೂ ಅದನ್ನು ಹೊರಗೆಡಹದೆ, ಮನಸ್ಸನ್ನು ಗಟ್ಟಿಮಾಡಿಕೊಂಡು ನ್ಯಾಯಸ್ಥಾನದ ಬಳಿಗೆ ತಾನೂ ಹೋದಳು ಅಲ್ಲಿ ನಡೆದದ್ದನ್ನೆಲ್ಲಾ ತಿಳಿದುಕೊಂಡಳು. ರಾಕಾಚಂದ್ರನು ಮೋಸಗಾರರ ಬಲೆಗೆ ಬಿದ್ದಿರುವನೆಂದು ನಿರ್ಧರಿಸಿದಳು ತನ್ನ ಸಾಹಸ-ಯುಕ್ತಿಗಳಿಂದ ಅವನನ್ನು ಸೆರೆಮನೆಯಿಂದ ಬಿಡಿಸಿ, ಆತನ ವಿಚಾರದಲ್ಲಿ ದ್ರೋಹವನ್ನೆಸಗಿದವರ ವಿಷಯದಲ್ಲಿ 'ಸೇಡ'ನ್ನು ತೀರಿಸಿಕೊಳ್ಳುವೆನೆಂದು ಶಪಥ ಮಾಡಿಕೊಂಡಳು ನ್ಯಾ-

ಯಾಧೀಶ ಮಹೇಂದ್ರನು ತನ್ನ ಸ್ವಾಮಿಯು ವಿಚಾರದಲ್ಲಿ ಏತಕ್ಕಾಗಿ ಹೀಗೆ ನಿಷ್ಠುರನಾದನೆಂದೂ, ತನ್ನ ಕೆಲಸವಾಗುತ್ತಲೆ ನೆಟ್ಟಗೆ ಮನೆಗೆ ಹೋಗದೆ, ವ್ಯಸನದಿಂದ ಮತ್ತೊಂದು ಕೋಣೆಗೆ ಹೋದ ಕಾರಣವನ್ನು ತಿಳಿಯಬೇಕೆಂದೂ ಆ ಕೋಣೆಯ ಹೊರಭಾಗದಲ್ಲಿಯೆ ನಿಂತುಕೊಂಡು, ಈತನಾಡಿಕೊಳ್ಳುತ್ತಿದ್ದ ಮಾತುಗಳನ್ನು ಆಲಿಸಿ ಕೇಳಿದಳು. ಇದರಿಂದ ಅವಳ ಸಂಶಯಗಳೂ ದೂರಾದವು. ಮಹೇಂದ್ರನಿಗೆ ಕೇಳುವಂತೆ ಎಚ್ಚರಿಕೆಯನ್ನು ಕೊಟ್ಟವರು ಮತ್ತಾರೂ ಅಲ್ಲದೆ, ಸಂನ್ಯಾಸಿನಿ ವೇಷದಲ್ಲಿದ್ದ ಚಂಚಲೆಯೇ ಎಂಬುದನ್ನು ನಮ್ಮ ವಾಚಕ ಮಹಾಶಯರಿಗೆ ಹೇಳಬೇಕಾದ್ದಿಲ್ಲ

## ಪರಿಚ್ಛೇದ ೫

ಸ್ವಾನಂದ ನದಿಯ ಮೇಲೆ ಒಂದು ದೋಣಿಯು ಪಕ್ಷಿಯಂತೆ ಅತಿ ವೇಗವಾಗಿ ಹೋಗುತ್ತಾ ಇದೆ ನಾವಿಕರು ತಮ್ಮ ಶಕ್ತಿಯನ್ನೆಲ್ಲ ಬಿಟ್ಟು, ಹುಟ್ಟು ಹಾಕುತ್ತ ದೋಣಿಯನ್ನು ಅತಿ ಜಾಗ್ರತೆಯಾಗಿ ನಡೆಸುತ್ತಿದ್ದಾರೆ ಇವರಲ್ಲದೆ ದೋಣಿಯ ಮಧ್ಯಭಾಗದಲ್ಲಿ ತೋಳುಗಳಿಂದ ಬಂಧಿಸಲ್ಪಟ್ಟ ಒಬ್ಬ ಕೈದಿಯೂ, ಅವನನ್ನು ಸುತ್ತುವರಿದು ನಾಲ್ಕು ಜನ ಆಯುಧ ಪಾಣಿಗಳಾದ ಯೋಧರೂ ಕುಳಿತಿದ್ದಾರೆ. ಆ ಬಂಧಿಸಲ್ಪಟ್ಟ ವ್ಯಕ್ತಿಯೇ ನಮ್ಮ ಪೂರ್ವಪರಿಚಿತ ರಾಕಾಚಂದ್ರನು. ತನ್ನ ಸುತ್ತಲೂ ಕುಳಿತಿದ್ದವರನ್ನು ಕುರಿತು:—"ನನ್ನನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿರುವಿರಿ?" ಎಂದು ಕೇಳಿದನು.

ಯೋಧ:—ಯಾವುದನ್ನೂ ಹೇಳಕೂಡದೆಂದು ನಮಗೆ ಆಜ್ಞೆಯಾಗಿರುವುದು

ಇದನ್ನು ಕೇಳುತ್ತಲೇ ರಾಕಾಚಂದ್ರನು ಸುಮ್ಮನಾದನು. ಇವರನ್ನು ಇನ್ನು ಮುಂದೆ ಪ್ರಶ್ನೆ ಮಾಡುವುದರಿಂದ ಯಾವ ಪ್ರಯೋ

ಜನವೂ ಇಲ್ಲವೆಂದು ತಿಳಿದನು ನಾನಾಬಗೆಯ ವಿಚಾರ ತರಂಗಗಳು ಹಿಂದಾಗುತ್ತಲೊಂದು ಇವನ ಮನಸ್ಸಿನಲ್ಲಿ ಏಳಲಾರಂಭಿಸಿದವು. ತನ್ನನ್ನು ಯಾವುದೋ ಗುಪ್ತಸ್ಥಳದಲ್ಲಿ ಸೆರೆಯಿಡುವರೆಂದು ತೋರಿತು. ತನ್ನ ಬಿಡುಗಡೆಗೆ ಇನ್ನು ಯಾವ ಮಾರ್ಗವೂ ಇಲ್ಲವೆಂದು ತಿಳಿದನು. ಚಂಚಲೆಯ ಹಂಬಲವನ್ನು ಬಿಡುವುದೇ ಯೋಗ್ಯವೆಂದೆನಿಸಿತು. ತನ್ನ ತಂದೆಯ ಹೆಸರು ಜ್ಞಾಪಕಕ್ಕೆ ಬರುತ್ತಲೆ ಕಣ್ಣಿನಲ್ಲಿ ಪಳಪಳನೆ ನೀರು ಸುರಿಯುವುದಕ್ಕೆ ಆರಂಭವಾಯ್ತು. ತಾಯಿಯಿಲ್ಲದ ತನ್ನನ್ನು ಬಾಲ್ಯಾರಭ್ಯ ಸಾಕಿ, ದರಿದ್ರ ದೋಷವನ್ನು ಮರೆತು, ತನ್ನನ್ನು ಮುಂದಕ್ಕೆ ತಂದ ತಂದೆಯ ಗತಿಯೇನೆಂದು ಚಿಂತಿಸಿದನು. ತನ್ನ ವಿಷಯದಲ್ಲಿ ದ್ರೋಹ ಮಾಡಿದವರ 'ಸೇಡ'ನ್ನು ತೀರಿಸಿಕೊಳ್ಳಲು, ಕೊಂಚಕಾಲ ಅವಧಿಯನ್ನು ಕಲ್ಪಿಸಿಕೊಡಬೇಕೆಂದು ಪರಮಾತ್ಮನನ್ನು ಮನಸಾ ಪ್ರಾರ್ಥಿಸಿಕೊಂಡನು. ಪುನಃ ತನ್ನ ಜೊತೆಯಲ್ಲಿ ಕುಳಿತಿದ್ದವರನ್ನು ಕುರಿತು:—"ಎಲೈ ಸ್ನೇಹಿತರೆ, ನಿಮ್ಮನ್ನು ಅಂಗಲಾಚಿ ಬೇಡಿಕೊಳ್ಳುವೆನು. ದಯವಿಟ್ಟು ನನ್ನನ್ನು ಎಲ್ಲಿಗೆ ಹಿಯ್ಯುತ್ತಿರುವಿರೆಂಬುದನ್ನು ತಿಳಿಸಿ. ನಾನು ಓಡಿಹೋಗಲು ಪ್ರಯತ್ನಪಡುವವನಲ್ಲ. ನನ್ನ ದುರದೃಷ್ಟ ವಶದಿಂದ ನನ್ನ ದ್ರೋಹಿಗಳ ಬಲೆಗೆ ಬಿದ್ದಿರುವೆನು" ಎಂದು ಕೇಳಿದನು. ಅಲ್ಲಿದ್ದವರಲ್ಲೊಬ್ಬನಿಗೆ ಸ್ವಲ್ಪ ಮರುಕ ಹುಟ್ಟಿದಂತೆ ಕಾಣಿಸಿತು. ತನ್ನ ತಲೆಯನ್ನು ಕೆರೆದುಕೊಳ್ಳುತ್ತ:— "ನಮ್ಮ ಸಂಗಡ ಬರುತ್ತಿದ್ದು, ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುವಿರೆಂದು ಕೇಳುತ್ತಿರುವೆಯಲ್ಲ? ನೀನು ಸೋಮಪುರದವನೇ ಆಗಿರುವ ಭಾಗದಲ್ಲಿ ನಾವು ಹೋಗುತ್ತಿರುವ ಪ್ರದೇಶವು ನಿನಗೆ ತಿಳಿಯಲೇಬೇಕಲ್ಲವೆ?' ಎಂದು ಹೇಳಿದನು.

ಬಂದಿ:–ನನಗೆ ಖಂಡಿತವಾಗಿಯೂ ತಿಳಿಯದು. ದಯವಿಟ್ಟು ಅದನ್ನು ತಿಳಿಸು. ಈ ಅಸಹಾಯಕನ ಮೇಲೆ ಮರುಕವಿಡು.

ಯೋಧ:—ಆದರೆ ನಮಗೆ ಅಪ್ಪಣೆಯಿಲ್ಲವಲ್ಲ!

ಬಂದಿ:–ಇನ್ನು ಐದು ನಿಮಿಷಗಳೊ, ಹತ್ತು ನಿಮಿಷಗಳೊ,

ಅರ್ಧಗಂಟೆಯೊ ಇಲ್ಲವೆ ಒಂದು ಗಂಟೆಯ ಅವಧಿಯಲ್ಲಿ ತಾನಾಗಿ ತಿಳಿಯುವ ವಿಷಯವನ್ನು ಈಗ ಹೇಳಲು ನಿಮಗೆ ಯಾವ ಅಭ್ಯಂತರವೂ ಇಲ್ಲವಲ್ಲ! ನನಗೆ ತಪ್ಪಿಸಿಕೊಂಡು ಹೋಗುವ ಅಭಿಲಾಷೆಯಿಲ್ಲ ಅದಿದ್ದರೂ ಹಾಗೆ ಹೋಗುವುದು ಅಸಾಧ್ಯವೆಂದು ನಿಮಗೆ ತಿಳಿದೇ ಇದೆ

ಯೋಧ:—ನಿನ್ನ ಸುತ್ತಲೂ ನೋಡು

ರಾಕಾಚಂದ್ರನು ಎದ್ದು ನೋಡಿದನು ಮುಂದೆ ಸುಮಾರು ೨೦೦ ೩೦೦ ಗಜ ದೂರದಲ್ಲಿ ಒಂದು ಎತ್ತರವಾದ ಬಂಡೆಯ ಮೇಲೆ ಕಾಣುವ ಮನೆಯು ಗೋಚರವಾಯ್ತು ಇದನ್ನು ನೋಡುತ್ತಲೆ ಕಣ್ಣುಗಳಿಗೆ ಮಂಜು ಕವಿದಂತಾಯ್ತು. "ಪ್ರಭೋ, ಇದೇನು? ನನ್ನನ್ನು ಈ ನರಕ ಕೂಪವಲ್ಲಿ ಸೆರೆಯಿಡಬೇಕೆಂದು ನಿನ್ನ ಅಭಿಲಾಷೆಯಿತ್ತೇ? ಜವನ ದಾಡೆಯೆಂದು ಪ್ರಸಿದ್ಧಿಗೊಂಡಿರುವ ಇಲ್ಲಿಯೇ ನನ್ನನ್ನು ಸೆರೆಯಿಡುವುದೇ? ಪರಮಾತ್ಮಾ! ನಿನ್ನ ಇಚ್ಛೆಯಿದ್ದಂತಾಗಲಿ'' ಎಂದು ಹಲುಬಿಕೊಂಡನು.

ಕೊಂಚ ಕಾಲದಲ್ಲಿಯೇ ಇವನನ್ನು ದೋಣಿಯಿಂದಿಳಿಸಿ, ಜವನ ದಾಡೆಯ ಒಂದು ಕತ್ತಲೆ ಕೋಣೆಗೆ ತೆಗೆದುಕೊಂಡು ಹೋಗಿ ಸೆರೆಯಲ್ಲಿಟ್ಟರು. ಯಾವ ರಾಕಾಚಂದ್ರನು ಚಂಚಲೆಯನ್ನು ಹೊಂದಿ ಆನಂದಸಾಗರದಲ್ಲಿ ಈಜಾಡುವೆನೆಂದು ಈಗ ಸ್ವಲ್ಪ ಕಾಲದ ಹಿಂದೆ ನಲಿಯುತ್ತಿದ್ದನೊ, ಅವನೇ ಈಗ ಆ ದುರ್ಗಂಧಮಯವಾದ ಸೆರೆಮನೆಯ ಸೋಬತಿಯಾದನು.

ಅಹಾ! ಕಾಲಮಹಿಮೆಯನ್ನೇನೆಂದು ಹೇಳೋಣ. ಒಂದು ಕ್ಷಣದಲ್ಲಿ ಉಪ್ಪರಿಗೆಯ ಮೇಲಿದ್ದವನು ಮತ್ತೊಂದು ಕ್ಷಣದಲ್ಲಿ ಕೆಸರಿನಲ್ಲಿಳಿಯುವನು. ಈಗ ಧನಿಕನಾಗಿರುವವನು ಮರುಕ್ಷಣದಲ್ಲಿ ಭಿಕ್ಷುಕನಾಗುವನು ಭಿಕ್ಷುವು ಶ್ರೀಮಂತನಾಗುವನು. ಇದೇನು ಪ್ರಾಣಿಗಳ ದುರದೃಷ್ಟವೋ? ಅದೃಷ್ಟವೊ? ದೈವಲೀಲೆಯೋ? ಹೇಳಲಾಗದು.

---

# ಪರಿಚ್ಛೇದ ೬

ರಾಕಾಚಂದ್ರನು ಕಾರಾಗೃಹವಾಸಿಯಾದನೆಂಬ ವರ್ತಮಾನವು ಸೋಮಪುರದಲ್ಲಿರುವ ಆಬಾಲವೃದ್ಧರಿಗೂ ಕ್ಷಣಕಾಲದಲ್ಲಿ ತಿಳಿದು ಹೋಯಿತು. ತನ್ನ ದಾರಿಯಲ್ಲಿದ್ದ ಕಂಟಕವು ಸಮೂಲವಾಗಿ ನಾಶವಾಯಿತೆಂದು ಭೀಷಣನು ಸಂತೋಷಿಸಿದನು. ಇನ್ನು ಮುಂದೆ ತಾನೆ ಅವನ ಸ್ಥಾನದಲ್ಲಿಡಲ್ಪಡುವೆನೆಂಬ ಆಶೆಯು ಬಲವತ್ತರವಾಯ್ತು. ತಿಮ್ಮಪ್ಪನಾಯಕರು ಈ ದಿನ ಹೇಳಿ ಕಳುಹಿಸುವರು-ನಾಳೆ ಹೇಳಿ ಕಳುಹಿಸುವರು ಎಂದು ಯೋಚಿಸುತ್ತಿದ್ದನು. ನಿಜ ಅಧರ್ಮಿಗಳಿಗೆ ಏಳಿಗೆಯು ಬಹು ಬೇಗ ಆಗುವುದು; ಹಾಗು ಅಷ್ಟೇ ಜಾಗ್ರತೆಯಾಗಿ ಅವರ ನಾಶವೂ ಆಗುವುದು ಅದರಲ್ಲೂ ಈ ಕಲಿಯುಗದಲ್ಲಿ ದುಷ್ಕರ್ಮಕ್ಕೆ ಫಲವು ದೋಸೆಯನ್ನು ಮಗುಚಿ ಹಾಕಿದಂತೆ ಶೀಘ್ರವೇ ತಲೆದೋರುವುದು; ಆದರೆ ಅವರ ಕಿರುಕುಳವನ್ನು ಸಹಿಸುವುದು ಮಾತ್ರ ಸಜ್ಜನರಿಗೆ ಕಷ್ಟವಾಗುವುದು ಆಗಲಿ. ದುಷ್ಟ ಭೀಷಣನ ಏಳಿಗೆಯು ಯಾವ ರೀತಿ ಆಯಿತೆಂಬುದನ್ನು ನೋಡೋಣ.

ಅವನ ಮನಸ್ಸಿನಂತೆ ತಿಮ್ಮಪ್ಪನಾಯಕರು ಭೀಷಣನನ್ನು ರಾಕಾಚಂದ್ರನ ಸ್ಥಾನಕ್ಕೆ ಬಡತಿ ಮಾಡಿದರು ಇದರಿಂದ ಇವನಿಗೆ ಸ್ವರ್ಗವು ಮೂರು ಬೆರಳೇ ಉಳಿದಂತೆ ತೋರಿತು ಕಾರ್ಖಾನೆಯಲ್ಲಿದ್ದ ಇತರ ಹುದ್ದೇದಾರರಿಗೆ ಇವನಿಂದ ತೊಂದರೆಗಳು ಹೆಚ್ಚಾಗುತ್ತ ಬಂದವು. ತಿಮ್ಮಪ್ಪನಾಯಕರ ಬಳಿ ಒಬ್ಬೊಬ್ಬ ನೌಕರನ ಮೇಲೆ ದೂರು ಹೇಳುವುದಕ್ಕೆ ಪ್ರಾರಂಭವಾಯ್ತು. ಒಬ್ಬನ ಹಿಂದೊಬ್ಬನು ಕೆಲಸದಿಂದ ನಿವೃತ್ತಿಮಾಡಲ್ಪಟ್ಟನು. ಅವನ ಸ್ಥಾನದಲ್ಲಿ ತನ್ನ ಕಡೆಯವನನ್ನೇ ನೇಮಿಸಿಕೊಳ್ಳಲು ತನ್ನ ಯಜಮಾನನ ಸಮ್ಮತಿಯನ್ನು ಪಡೆಯುತ್ತಿದ್ದನು. ಇದರಿಂದಂತೂ ಕಾರ್ಖಾನೆಯ ಕಾರ್ಯವು ಕೆಡುತ್ತ ಬಂದಿತು. ಸ್ವಾರ್ಥಾಭಿಲಾಷೆಯು ಭೀಷಣನಿಗೆ ಮಿತಿಮೀ

ರುತ್ತ ಹೋಯಿತು ಇದಾಯಕ್ಕೆ ಬದಲಾಗಿ ನಷ್ಟವು ಕಾಲೂರುವು ದಕ್ಕೆ ಮೊದಲಾಯಿತು. ತಿಮ್ಮನಾಯಕರ ಉದಾಸೀನವೂ ಇದಕ್ಕೆ ಅನುಕೂಲವಾಯ್ತು. ಕೊನೆಗೆ ಕಾರ್ಖಾನೆಯ ಅಧಿಕಾರವನ್ನೆಲ್ಲಾ ಭೀಷಣನಿಗೇ ಒಪ್ಪಿಸಿ ಬಿಟ್ಟರು. ಅಲ್ಪ-ಸ್ವಲ್ಪ ದ್ರವ್ಯವನ್ನು ಕೊಟ್ಟು ಅದನ್ನು ತಾನೇ ಕೊಂಡುಕೊಂಡನು. ಇದರಿಂದ ಭೀಷಣನ ಏಳಿಗೆಯು ಹಾಲುಕ್ಕಿದಂತೆ ಉಕ್ಕುವುದಕ್ಕೆ ತೊಡಗಿತು! ಇತ್ತೀಚೆಗೆ ಭೀಷಣನು ಸೋಮಪುರದಲ್ಲಿ ಒಬ್ಬ ಗಣ್ಯ ಮನುಷ್ಯನೇ ಆದನು.

ಇನ್ನು ವಿಕ್ರಮನು ಏನಾದನೆಂದು ನೋಡೋಣ. ರಾಕಾ ಚಂದ್ರನು ಇಲ್ಲದಂತಾದರೆ ಚಂಚಲೆಯು ತನ್ನವಳಾಗುವಳೆಂದು ಯೋಚಿಸಿದ್ದ ವಿಕ್ರಮನಿಗೆ, ಆಶೆಯು ನಿರಾಶೆಯಾಯ್ತು. ಚಂಚಲೆಯು ಏನಾದಳೆಂದು ಯಾರೂ ಹೇಳರು. ಅವಳ ಶೋಧನಕ್ಕಾಗಿ ತಾನೂ ಪ್ರಯಾಸಪಟ್ಟನು ಎಲ್ಲವೂ ವಿಫಲವಾದವು ಇನ್ನು ಸೋಮ ಪುರದಲ್ಲಿರುವುದು ಯೋಗ್ಯವಲ್ಲವೆಂದು ಸುವರ್ಣಪುರಕ್ಕೆ ಹೋಗಿ ತನ್ನ ಪುರೋಭಿವೃದ್ಧಿಯನ್ನು ಕುರಿತು ಯೋಚಿಸಬೇಕೆಂದು ಸಂಕಲ್ಪ ಮಾಡಿಕೊಂಡನು ಆ ಕಾಲಕ್ಕೆ ಸರಿಯಾಗಿ ಮಧುಪ್ರಿಯನು ಅಲ್ಲಿಗೆ ಬಂದನು

ವಿಕ್ರಮ:—ಮಧುಪ್ರಿಯಾ, ಬಾ, ಕುಳಿತುಕೋ ಸಮಾಚಾರ ವೇನು?

ಮಧುಪ್ರಿಯ:—ವಿಕ್ರಮ, ಏನೆಂದು ಹೇಳಲಿ? ನಿನ್ನ ಮತ್ತು ಭೀಷಣರ ಸಂಧಾನವು ನೆರವೇರಿತು. ಅದೊಂದು ವಿಚಾರವಲ್ಲದೆ ಮತ್ತೇನೂ ಇಲ್ಲ.

ವಿಕ್ರಮ(ಹೆದರಿದವನಂತೆ):—ನೀನು ಹೇಳುತ್ತಿರುವುದೇನು? ನನಗೊಂದೂ ಅರ್ಥವಾಗುತ್ತಿಲ್ಲವಲ್ಲ?

ಮಧುಪ್ರಿಯ:—ಹೇಗೆ ತಾನೆ ಅರ್ಥವಾಗುವುದು? ವಿಕ್ರಮ, ನಿರ್ದೋಷಿಯಾದ ರಾಕಾಚಂದ್ರನು ರಾಜದ್ರೋಹಿಯಾದನು. ಸದ್ಗು ಣಿಯೂ, ಸದಾಚಾರ ಸಂಪನ್ನನೂ, ಕೇವಲ ದರಿದ್ರನೂ ಆದ ಶಾಂತ

ಶೀಲನಿಗೆ ಪುತ್ರಶೋಕ ಪ್ರಾಪ್ತವಾಗಿ ಆಹಾರ-ನಿದ್ರೆಗಳಿಲ್ಲದೆ ಹಾಸಿಗೆ ಹಿಡಿಯುವಂತಾಯ್ತು. ಜಮೀನ್ದಾರ ಸೋಮಶೇಖರರಾಯರ ಮನೆಯ ಮದುವೆಯು ನಿಂತು ಹೋದದ್ದಲ್ಲದೆ, ವಧುವೂ ಕಾಣದಂತಾದಳು. ಇನ್ನೇನು ತಾನೆ ಆಗಬೇಕೊ ತಿಳಿಯದು!

ವಿಕ್ರಮ:—ಏನು? ಈ ಅನರ್ಥಗಳು ನನ್ನಿಂದಾಯ್ತೆಂದು ನಿನ್ನ ಅಭಿಪ್ರಾಯವೋ?

ಮಧುಪ್ರಿಯ:—ಛಿ-ಛಿ, ನಾನು ನಿನ್ನೊಬ್ಬನಿಂದಾಯ್ತೆಂದು ಹೇಳಿದೆನೆ? ನಿನ್ನ ಸಹಪಾಠಿ, ಸಹವಾಸಿ, ಅವಿವೇಕಿ ಭೀಷಣನೂ ಇದಕ್ಕೆ ನೆರವಾದನಲ್ಲವೆ?

ವಿಕ್ರಮ:—ಮಧುಪ್ರಿಯ, ಮದ್ಯದ ಅಮಲು ನಿನಗೆ ಇಳಿದಂತೆ ತೋರುವುದಿಲ್ಲ. ಅದಕ್ಕಾಗಿಯೇ ನೀನು ಈ ರೀತಿ ಹರಟುತ್ತಿರುವೆ?

ಮಧುಪ್ರಿಯ:—ಸತ್ಯವಾದದ್ದನ್ನೇ ಹೇಳಿದೆನು. ಮದ್ಯದ ಅಮಲಿನಲ್ಲಿ ನಾನು ನಲಿಯುತ್ತಿದ್ದುದರಿಂದಲೇ ನಿಮ್ಮಗಳ ಸಂಧಾನವು ನಿರ್ವಿಘ್ನವಾಗಿ ನೆರವೇರಿತು. ಇಲ್ಲದಿದ್ದರೆ, ಇಷ್ಟು ಅನರ್ಥಗಳು ಆಗುತ್ತಿದ್ದವೆಂದು ತಿಳಿದೆಯಾ?

ವಿಕ್ರಮ:--ಇಲ್ಲದ ಅಪವಾದವನ್ನು ನಮ್ಮ ತಲೆಯ ಮೇಲೇಕೆ ಹೊರಿಸುವೆ?

ಮಧುಪ್ರಿಯ:—ಇಲ್ಲದ ರಾಜದ್ರೋಹವನ್ನು ರಾಕಾಚಂದ್ರನ ಮೇಲೆ ಹೊರಿಸಿದ ನಿಮಗೆ, ನಾನು ಹೊರಿಸುವ ಅಪವಾದವು ತಪ್ಪೆಂದು ತೋರಿದರೆ ಆಶ್ಚರ್ಯವೇನು?

ವಿಕ್ರಮ:—ನಿನ್ನನ್ನು ಯಮಲೋಕಕ್ಕಟ್ಟಿದರೆ ಏನು ಮಾಡುವೆ? ಆಗಲೂ ನಾವೇ ರಾಕಾಚಂದ್ರನ ನಾಶಕ್ಕೆ ಕಾರಣವೆಂದು ಹೇಳಲು ಶಕ್ತನಾಗುವಿಯಾ?

ಮಧುಪ್ರಿಯ:-ರಾಕಾಚಂದ್ರನ ಸುಖದ ಬಾಗಿಲಿಗೆ ಮುಳ್ಳನ್ನು ಹಾಕಿದ್ದರಿಂದ ನಿನಗಷ್ಟು ಪ್ರಯೋಜನವಾಯಿತ್ತೇ, ಅಷ್ಟೇ

ಪ್ರಯೋಜನವು ನನ್ನ ಮರಣದಿಂದಲೂ ನಿನಗುಂಟಾಗುವುದು ನಾನು ಸತ್ತರೆ ನಿಮ್ಮ ಮನಸ್ಸಿಗೆಳೂ ಸತ್ತವೇನು? ನಿಮ್ಮ ಮನಸ್ಸೇ ನಿಮ್ಮ ತಪ್ಪಿತವನ್ನು ಎತ್ತಿ ಹಾಕಿ ನಿಮ್ಮನ್ನು ಸಂಕಟಕ್ಕೆ ಗುರಿಮಾಡುವುದು.

ವಿಕ್ರಮ:—ಮಧುಪ್ರಿಯ, ಹೋಗಲಿ ಬಿಡು. ನಾನೇ ದೋಷಿಯೋ, ನೀನೇ ದೋಷಿಯೋ, ರಾಕಾಚಂದ್ರನೇ ದೋಷಿಯೋ? ಯಾರು ದೋಷಿಯೆಂದು ನಿರ್ಧರಿಸಲು ಯಾರಿಗೂ ಬೇಕಿಲ್ಲ ಬಾ, ಈ ಒಂದು ಬಟ್ಟಲು ಮದ್ಯವನ್ನು ಕುಡಿ. ಹೊಸದಾಗಿ ಬಂದಿರುವುದು. ಬಹು ರುಚಿಯಾಗಿರುವುದು, ಎಂದು ಹೇಳುತ್ತ ಒಂದು ಬಟ್ಟಲು ಮದ್ಯವನ್ನು ಕೊಟ್ಟನು. ಮಧುಪ್ರಿಯನು ಸಂತೋಷದಿಂದ ಅದನ್ನು ಪಾನ ಮಾಡಿದನು ಪುನಃ ಮತ್ತೊಂದು ಬಟ್ಟಲು ಮದ್ಯವು ಕೊಡಲ್ಪಟ್ಟಿತು. ಆ ಬಟ್ಟಲೂ ಬರಿದಾಯ್ತು. ಹೀಗೆ ನಾಲ್ಕಾರು ಬಟ್ಟಲುಗಳ ಮದ್ಯ ಸೇವನೆಯಿಂದ ಮಧುಪ್ರಿಯನಿಗೆ ಬುದ್ಧಿಯು ವಿಕಲ್ಪವಾಯಿತು. ಕೂಡಲೆ ವಿಕ್ರಮನು ತನ್ನ ಆಳಿನೊಂದಿಗೆ ಅವನನ್ನು ಮನೆಗೆ ಕಳ್ಪಿಸಿದನು. ಅವನು ಹೋಗುತ್ತಲೇ ವಿಕ್ರಮನು ಒಂದು ನಿಟ್ಟುಸಿರನ್ನು ಬಿಟ್ಟನು. ಮನಸ್ಸಿಗೆ ಸ್ವಲ್ಪ ನೆಮ್ಮದಿಯಾದಂತಾಯ್ತು. ಆಗ ತನ್ನಲ್ಲಿ ತಾನು ಈ ರೀತಿ ಆಲೋಚಿಸಿಕೊಂಡನು:—"ಭೀಷಣನ ಮತ್ತು ನನ್ನ ಸಂಚು ಯಾರಿಗೂ ತಿಳಿದಿಲ್ಲವೆಂದು ನಂಬಿದ್ದೆನು. ಆ ನನ್ನ ನಂಬಿಕೆಯು ಮಧುಪ್ರಿಯನ ಹೇಳಿಕೆಯಿಂದ ತಪ್ಪಾಯಿತು. ನನ್ನೊಡನೆ ಹೇಳಿದಂತೆ ಮಧುಪ್ರಿಯನು ಇದನ್ನು ಇತರರಲ್ಲಿಯೂ ಹೇಳುವನು. ಇವನ ಬಾಯನ್ನು ತಡೆಗಟ್ಟಲು ನನ್ನಿಂದ ಸಾಧ್ಯವಿಲ್ಲ ಹಾಗಾದರೆ ಮುಂದೆ ನನ್ನ ಗತಿಯೇನು? ನಾನು ಕಾರಾಗೃಹವಾಸವನ್ನನುಭವಿಸಬೇಕಲ್ಲವೇ? ಅದು ನನ್ನಿಂದಾಗದು. ಅದನ್ನು ನೆನಸಿಕೊಂಡ ಮಾತ್ರಕ್ಕೇ ನನ್ನ ಪ್ರಾಣವಾಯುವೇ ಹಾರಿಹೋದಂತಾಗುವುದು. ಆದರೆ ಇದಕ್ಕೇನುಪಾಯ? ನನ್ನ ಮೊದಲಿನ ನಿರ್ಧಾರವೇ ಸಮಂಜಸವಾಗಿ ಕಾಣುತ್ತೆ. ಸೋಮಪುರವನ್ನು ಬಿಡಬೇಕು; ಸುವರ್ಣಪುರಕ್ಕೆ ಹೋಗೆ

ಬೇಕು. ಅಲ್ಲಿ ನನ್ನ ನಿಜವಾದ ಹೆಸರನ್ನು ಬದಲಾಯಿಸಿಕೊಳ್ಳಬೇಕು ಯಾವ ವಿಧದಿಂದಲಾದರೂ ಉತ್ತಮ ಪದವಿಯನ್ನು ಹೊಂದಬೇಕು ಇದಲ್ಲದೆ, ಮತ್ತ್ಯಾವ ಮಾರ್ಗವೂ ನನ್ನ ಪಾಲಿಗುಳಿದಿರುವುದಿಲ್ಲ''

## ಪರಿಚ್ಛೇದ ೭

ರಾಕಾಚಂದ್ರನು ಸೆರೆಮನೆಯ ಸೋಬತಿಯಾಗಿ ಇಂದಿಗೆ ನಾಲ್ಕು ವರ್ಷಗಳಾದವು ಈ ದಿನ ಜವನ ದಾಡೆಯಲ್ಲಿ ಎಲ್ಲಾ ಕಾವಲುಗಾರರು ಲಗುಬಗೆಯಿಂದ ಕೆಲಸಗಳನ್ನು ಮಾಡುತ್ತಿರುತ್ತಾರೆ ಪ್ರತಿಯೊಬ್ಬ ಕಾವಲುಗಾರನೂ ತನ್ನ ನಿಯಮಿತ ಸ್ಥಾನದಲ್ಲಿ ನಿಂತುಕೊಂಡು ಪಹರೆಯನ್ನು ಮಾಡುತ್ತಿರುತ್ತಾನೆ ಕತ್ತಲುಕೋಣೆಗಳಲ್ಲಿ ಹಾಕಲ್ಪಟ್ಟಿರುವ ಕೈದಿಗಳು ನರಳುವ ಶಬ್ದವು ಆ ಪ್ರದೇಶದಲ್ಲೆಲ್ಲ ತುಂಬಿ ಹೋಗಿದೆ ಇಂಥ ಸಮಯದಲ್ಲಿ ಸುಂದರಾಕಾರನಾದ ಒಬ್ಬ ಯುವಕನು ಮಿಲಟರಿ ಉಡುಪನ್ನು ಧರಿಸಿಕೊಂಡು ತನ್ನ ದೋಣಿಯಿಂದಿಳಿದು, ಸೆರೆಮನೆಯ ಬಳಿಗೆ ಬರುತ್ತಿದ್ದನು. ಇದನ್ನು ನೋಡಿ ಅಲ್ಲಿಯ ಜೈಲ್ ಜಮಾದಾರನು ಆತನಿಗೆ ಮುಜರೆ ಮಾಡಿ, ಒಳಕ್ಕೆ ಕರೆದುಕೊಂಡು ಬಂದನು ಹೊಸದಾಗಿ ಬಂದ ಮನುಷ್ಯನೇ ಜೈಲ್ ಇನ್‌ಸ್ಪೆಕ್ಟರ್ ರಾಧಾಕೃಷ್ಣರಾಯನು.

ಇನ್ಸ್ಪೆಕ್ಟರ್:—ಜಮಾದಾರ್, ಕೈದಿಗಳೆಲ್ಲರೂ ಇರುವರೋ?

ಜಮಾದಾರ:— ಇರುವರು ಪ್ರಭು.

ಇನ್ಸ್ಪೆಕ್ಟರ:—ಅವರ ಆಹಾರ ವಿಚಾರದಲ್ಲಿ ಸರಿಯಾಗಿ ನೋಡಿಕೊಂಡಿರುವೆಯಾ?

ಜಮಾದಾರ:— ಆಹಾರ ವಿಚಾರದಲ್ಲಿ ಯಾವ ಲೋಪವೂ ಇಲ್ಲದಂತೆ ನೋಡಿಕೊಂಡಿರುತ್ತೇನೆ

ಇನ್ಸ್ಪೆಕ್ಟರ:—ಕಾವಲುಗಾರರು ಕೆಲಸಗಳನ್ನು ಸಮರ್ಪಕ

ವಾಗಿ ಮಾಡುತ್ತಿರುವರೋ? ಯಾರೂ ಅಪ್ರಧೇಯರಾಗಿರುವುದಿಲ್ಲವೊ?

ಜಮಾದಾರ:— ಎಲ್ಲ ಕಾವಲುಗಾರರೂ ಕೆಲಸಗಳನ್ನು ಸರಿಯಾಗಿ ಮಾಡುತ್ತಿರುವರು.

ಇನ್ಸ್ಪೆಕ್ಟರ:—ಸರಿ. ಜೈಲ್ ರಜಿಸ್ಟರನ್ನು ತೆಗೆದುಕೊಂಡು ಬಾ, ಎಂದು ಹೇಳಿ ಅವನನ್ನು ಕಳುಹಿಸಿದನು. ಅವನು ಹೋಗುತ್ತಲೇ ಒಂದು ನಿಟ್ಟುಸಿರನ್ನು ಬಿಟ್ಟು, ಕಣ್ಣುಗಳಲ್ಲಿ ತುಂಬಿಕೊಂಡಿದ್ದ ಕಣ್ಣೀರನ್ನು ಕರವಸ್ತ್ರದಿಂದ ಒರಸಿಕೊಂಡನು. ಈತನ ಸ್ಥಿತಿಯನ್ನು ನೋಡಿದರೆ, ಯಾವುದೋ ಪ್ರಬಲವಾದ ಚಿಂತೆಯು ಈತನ ಮನಸ್ಸನ್ನು ಜ್ವಲಿಸುತ್ತಿದ್ದಂತೆ ತೋರಿತು. ಇನ್ನೂ ಏನನ್ನೋ ತನ್ನಲ್ಲಿ ಹೇಳಿಕೊಳ್ಳುವುದರಲ್ಲಿದ್ದನು; ಆದರೆ ಆ ಸಮಯಕ್ಕೆ ಜಮಾದಾರನು ಜೈಲ್ ರಜಿಸ್ಟರನ್ನು ತಂದು ಆತನ ಕೈಲಿ ಕೊಟ್ಟನು. ಸ್ವಲ್ಪ ಹೊತ್ತು ಒಂದೆರಡು ಹಾಳೆಗಳನ್ನು ತಿರುವಿ ಹಾಕಿ "ಕೈದಿಗಳನ್ನು ನೋಡೋಣ ನಡೆ" ಎಂದು ಹೇಳುತ್ತ, ಜಮಾದಾರನ ಹಿಂದೆ ಹೋದನು. ಜಮಾದಾರನು ಪ್ರತಿಯೊಂದು ಕೋಣೆಯಲ್ಲಿರುವ ಬಂದಿಯನ್ನು ತೋರಿಸುತ್ತ ಹೊರಟನು. ಕೊನೆಗೆ ರಾಕಾಚಂದ್ರನನ್ನು ಸೆರೆಯಿಟ್ಟಿದ್ದ ಕೋಣೆಗೆ ಬಂದರು. ಬಂದಿಯನ್ನು ನೋಡುತ್ತಲೆ ಇನ್ಸ್ಪೆಕ್ಟರನ ಮುಖಛಾಯೆಯು ಬದಲಾಯಿಸಿತು. ಕಣ್ಣುಗಳು ಮಂಜುಗವಿದಂತಾಯಿತು. ತನ್ನ ಮುಖಭಾವವು ಇತರರಿಗೆ ತಿಳಿಯಬಾರದೆಂದು ದರ್ಪದಿಂದ ಬಂದಿಯನ್ನುದ್ದೇಶಿಸಿ:—"ನಿನಗೆ ಈ ಶಿಕ್ಷೆಯನ್ನು ವಿಧಿಸಲು ಕಾರಣವೇನು?" ಎಂದು ಪ್ರಶ್ನೆ ಮಾಡಿದನು.

ಬಂದಿ:-ನಾನು ರಾಜದ್ರೋಹಿಯೆಂಬ ಸುಳ್ಳು ಕಳಂಕವು ನನ್ನ ಮೇಲೆ ಆಪಾದನೆಯಾದ್ದರಿಂದ, ನನಗೆ ಈ ಶಿಕ್ಷೆಯನ್ನು ವಿಧಿಸಿದರು.

ಇನ್ಸ್ಪೆಕ್ಟರ:-ನೀನು ನಿಜವಾಗಿಯೂ ರಾಜದ್ರೋಹಿಯಲ್ಲವೆ?

ಬಂದಿ:— ಖಂಡಿತವಾಗಿಯೂ ಅಲ್ಲ.

ಇನ್ಸ್ಪೆಕ್ಟರ:— ನ್ಯಾಯಸ್ಥಾನದಲ್ಲಿ ನಿನ್ನ ಮೇಲೆ ಹೊರಿಸಿದ ಆಪಾದನೆಯು ಸುಳ್ಳೆಂದು ನೀನು ನಿರ್ಧರಿಸಲಿಲ್ಲವೋ?

ಬಂದಿ:—ನನಗೆ ಅಷ್ಟಕ್ಕೆ ಅವಕಾಶವನ್ನು ಕೊಟ್ಟದ್ದಿದ್ದರೆ, ಹಾಗೆ ಮಾಡುತ್ತಲೇ ಇದ್ದೆನು.

ಇನ್ಸ್ಪೆಕ್ಟರ:—ನಿನ್ನ ಬಿಡುಗಡೆಗೆ ನೀನು ಪ್ರಯತ್ನ ಪಡುವುದಿಲ್ಲವೇ?

ಬಂದಿ:—ಯಾವ ಪ್ರಯತ್ನವನ್ನು ಮಾಡಲೂ ನನಗೆ ಅವಕಾಶವೇ ಇರುವುದಿಲ್ಲ.

ಇನ್ಸ್ಪೆಕ್ಟರ:- ಈಗ ನಿನ್ನ ಬಿಡುಗಡೆಯಾದರೆ ನೀನು ಇಲ್ಲಿಂದ ಎಲ್ಲಿಗೆ ಹೋಗುವೆ?

ಬಂದಿ:—ದೇವರು ಎಲ್ಲಿಗೆ ಹೋಗಬೇಕೆಂದು ಪ್ರೇರೇಪಿಸುವನೋ ಅಲ್ಲಿಗೆ ಹೋಗುವೆನು.

ಇನ್ಸ್ಪೆಕ್ಟರು:—ನನ್ನ ಜೊತೆಯಲ್ಲಿಯೇ ಬರುವಿಯಾ?

ಬಂದಿ:—ಬರುವೆನು.

ಹೀಗೆಂದು ಹೇಳುತ್ತಲೆ ಇನ್ಸ್ಪೆಕ್ಟರು ತನ್ನ ಅಂಗಿಯ ಕಿಸೆಯಿಂದ ಒಂದು ಪತ್ರವನ್ನು ತೆಗೆದು ಅದನ್ನು ಜಮಾದಾರನ ಕೈಲಿ ಕೊಟ್ಟನು. ಅದನ್ನು ನೋಡಿಕೊಂಡು ಜಮಾದಾರನು ಕಾವಲುಗಾರನನ್ನು ಕರೆದು ಬಂದಿಗೆ ತೊಡಿಸಿದ್ದ ಕೋಳಗಳನ್ನು ತೆಗಿಸಿದನು; ಹಗು ನೀನು ಇನ್ಸ್ಪೆಕ್ಟರರ ಸಂಗಡ ಹೋಗಬಹುದೆಂದು ತಿಳಿಸಿದನು. ಇನ್ಸ್ಪೆಕ್ಟರು ಉಳಿದ ಇತರ ಕೋಣೆಗಳನ್ನೆಲ್ಲ ಪರೀಕ್ಷಿಸಿ, ಅಲ್ಲಿಂದ ರಾಕಾಚಂದ್ರನೊಡನೆ ತನ್ನ ದೋಣಿಯ ಬಳಿಗೆ ಹೊರಟನು. ದೋಣಿಯ ನಾವಿಕರು ಕೂಡಲೆ ಮರಕ್ಕೆ ಕಟ್ಟಿದ್ದ ಹಗ್ಗವನ್ನು ಬಿಚ್ಚಿದರು. ಅಷ್ಟರಲ್ಲಿ ಇವರಿಬ್ಬರೂ ದೋಣಿಯಲ್ಲಿ ಕುಳಿತುಕೊಂಡರು ದೋಣಿಯು ಅತಿ ವೇಗವಾಗಿ ಸಾನಂದನದಿಯ ಮೇಲೆ ಸುವರ್ಣಪುರದ ಕಡೆಗೆ ಸಾಗಿತು. ಕೆಲವು ಕಾಲ ಅವರಿಬ್ಬರಲ್ಲಿ ಒಬ್ಬನೂ ಮಾತನಾಡಲಿಲ್ಲ. ಇಲ್ಲಿಯ ವರೆವಿಗೂ ರಾಕಾಚಂದ್ರನು ತನ್ನ ಮನಸ್ಸಿನಲ್ಲಿ ಈ ರೀತಿಯಾಗಿ ಆಲೋಚಿಸಿದನು "ನನಗೆ ನ್ಯಾಯಾಧೀಶ ಮಹೇಂದ್ರನು. ಆಮರಣಾಂತ ಜೈಲುವಾಸವನ್ನು ವಿಧಿಸಿದ್ದನು.

ಆತನು ಕೊಟ್ಟ ತೀರ್ಪನ್ನು ಈ ಕೊಂಚಕಾಲದಲ್ಲಿ ರದ್ದುಮಾಡಬೇಕಾದರೆ ಯಾರೋ ನನ್ನ ವಿಮೋಚನೆಗಾಗಿ ಪ್ರಯತ್ನಪಟ್ಟಿರಲೇಬೇಕು. ನನ್ನ ವಿಷಯದಲ್ಲಿ ಇಷ್ಟು ಕರುಣವನ್ನು ತೋರಿಸಿದ ಮಹಾನುಭಾವನಾವನೊ ತಿಳಿಯದು. ಈ ಇನ್‌ಸ್ಪೆಕ್ಟರು ನನ್ನ ಕೋಣೆಯೊಳಕ್ಕೆ ಬರುತ್ತಲೇ ವ್ಯಸನವನ್ನು ಹೊಂದಿದಂತೆ ಕಂಡೆನು ಇವರು ನನ್ನನ್ನು ನೋಡಿ ವ್ಯಸನಪಡಲು ಕಾರಣವೇನು? ಹಾಗೆ ವ್ಯಸನಪಡಬೇಕಾದರೆ ಈತನು ನನ್ನ ಸಂಬಂಧಿಯಾಗಿಯೇ ಇರಬೇಕು ನಾನು ನೋಡಿದಂತೆ ನನ್ನ ಸಂಬಂಧಿಗಳೆಲ್ಲಾರೂ ಈತನಿರುವ ಹಾಗೆ ಇರುವುದಿಲ್ಲ ಹಾಗಾದರೆ ಈತನಾರು? ನನ್ನ ಬಂಧವಿಮೋಚನೆಯನ್ನು ಮಾಡಿಸುವುದರಲ್ಲಿ ಈತನಿಗಿರುವ ಉದ್ದಿಶ್ಯವೇನು? ಆಗಲಿ. ಈತನನ್ನು ಕೇಳಿ ತಿಳಿದುಕೊಳ್ಳುವೆನು'' ಹತ್ತಿರದಲ್ಲಿ ಕುಳಿತಿದ್ದ ಇನ್‌ಸ್ಪೆಕ್ಟರ್ ರಾಧಾಕೃಷ್ಣನನ್ನು ಕುರಿತು:—''ಸ್ವಾಮಿ, ನನ್ನ ಬಂಧವಿಮೋಚನಯು ಯಾವ ಮಹಾತ್ಮನ ದೆಸೆಯಿಂದಾಯ್ತೆಂಬುದನ್ನು ತಿಳಿಸುವಿರಾ?'' ಎಂದು ಕೇಳಿದನು.

ಇನ್‌ಸ್ಪೆಕ್ಟರ:—ಅದನ್ನು ತಿಳಿದುಕೊಂಡು ನಿನಗಾಗಬೇಕಾಗಿರುವುದೇನು?

ರಾಕಾಚಂದ್ರ:—ನಾನು ನನ್ನ ಕೃತಜ್ಞತೆಯನ್ನು ಆತನಿಗೆ ತಿಳಿಯಪಡಿಸಬೇಕೆಂದು.

ಇನ್‌ಸ್ಪೆಕ್ಟರ:—ಅದನ್ನು ಯಾವರೀತಿ ವ್ಯಕ್ತಪಡಿಸುವೆ?

ರಾಕಾಚಂದ್ರ:—ಚಿರಕಾಲವೂ ಆತನ ದಾಸನಾಗಿದ್ದು.

ಇನ್‌ಸ್ಪೆಕ್ಟರು:—ಆತನು ನಿನ್ನ ದಾಸ್ಯತ್ವವನ್ನು ಸ್ವೀಕರಿಸದಿದ್ದರೆ?

ರಾಕಾಚಂದ್ರ:—ಅದಕ್ಕೆ ನಾನೇನೂ ಮಾಡಲಾರೆನು. ಆ ಮಹಾತ್ಮನನ್ನು ಚಿರಕಾಲವೂ ಮನಸ್ಸಿನಲ್ಲಿಯೇ ವಂದಿಸುವೆನು.

ಇನ್‌ಸ್ಪೆಕ್ಟರ:-ಹಾಗಾದರೆ ನಿನ್ನ ಬಂಧವಿಮೋಚನೆಗೆ ಕಾರಣರ್ಯಾರೆಂದು ಹೇಳುವೆನು ಕೇಳು. ಆ ವ್ಯಕ್ತಿಯು ನಿನ್ನ ಚಿರಪರಿಚಿ

ತೆಯೂ, ನಿನ್ನನ್ನೇ ನಂಬಿ ನಿನಗಾಗಿ ಪ್ರಾಣವನ್ನು ಇಟ್ಟುಕೊಂಡಿರುವವಳೂ ಆದ ಚಂಚಲೆಯು.

ರಾಕಾಚಂದ್ರ:—ಏನು? ಚಂಚಲೆಯು ನನ್ನನ್ನು ಬಂಧವುಕ್ತನನ್ನಾಗಿ ಮಾಡಿಸಿದಳೇ? ಇದು ಹೇಗೆ? ಅವಳೀಗೆಲ್ಲಿರುವಳು?

ಇನ್ಸ್ಪೆಕ್ಟರ:— ಅದು ಹೇಗೆಂಬುದು ನನಗೆ ತಿಳಿಯದು. ಅವಳೆಲ್ಲಿರುವಳೆಂಬುದು ಮಾತ್ರ ನಾವು ಸುವರ್ಣಪುರಕ್ಕೆ ಹೋಗುತ್ತಲೇ ತಿಳಿಯುವುದು.

ರಾಕಾಚಂದ್ರ: ಹಾಗಾದರೆ, ತಾವು ಅವಳಿಗೇನಾಗಬೇಕು?

ಇನ್ಸ್ಪೆಕ್ಟರ:—ಆಕೆಯ ಸಹೋದರ.

ರಾಕಾಚಂದ್ರ:—ಆಕೆಗೆ ಸಹೋದರ-ಸಹೋದರಿಯರಾರೂ ಇಲ್ಲವಲ್ಲ!

ಇನ್ಸ್ಪೆಕ್ಟರ:— ನಾವಿಬ್ಬರೂ ಒಡಹುಟ್ಟಿದವರಲ್ಲದಿದ್ದರೂ, ಚಿಕ್ಕಂದಿನಿಂದಲೂ ಸಹೋದರ-ಸಹೋದರಿಯರಂತೆ ಒಡನಾಡುತ್ತಿದ್ದವಾದ ಕಾರಣ, ಆಕೆಯು ನನ್ನ ತಂಗಿಯು.

ರಾಕಾಚಂದ್ರ:—ಸಂತೋಷ! ಆದರೆ ತಾವು ಈ ಕೆಲಸದಲ್ಲಿ ಎಷ್ಟು ವರ್ಷಗಳಿಂದಿರುವಿರಿ?

ಇನ್ಸ್ಪೆಕ್ಟರ: ಈಗ ೧೦-೧೨ ಗಂಟೆಗಳಿಂದ ಈ ಉದ್ಯೋಗದಲ್ಲಿರುವೆನು

ರಾಕಾಚಂದ್ರ:—ಇಂಥ ಕಠಿಣ ತರವಾದ ಕೆಲಸವನ್ನು ಯಾತಕ್ಕಾಗಿ ಕೈಕೊಂಡಿರುವಿರಿ?

ಇನ್ಸ್ಪೆಕ್ಟರ:—ನಿನಗಾಗಿ

ರಾಕಾಚಂದ್ರ:— ಏನು, ನನಗಾಗಿಯೆ? ಹಾಗಾದರೆ ಈ ನಿಮ್ಮ ವೇಷದಲ್ಲಿ ಏನೋ ಮೋಸವಿದ್ದಂತೆ ತೋರುತ್ತೆ!

ಇನ್ಸ್ಪೆಕ್ಟರ:-ಒಬ್ಬ ನನ್ನು ಕುತ್ತಿನಿಂದ ಪಾರು ಮಾಡಲು ಪ್ರಯತ್ನಿಸಿದರೆ, ಆ ನಮ್ಮ ಪ್ರಯತ್ನವು ಮೋಸದಿಂದ ಕೂಡಿದ್ದರೂ ದೋಷವಲ್ಲ.

ರಾಕಾಚಂದ್ರ:—ನನಗಾಗಿ ಈ ರೀತಿ ಪ್ರಯತ್ನಪಡುತ್ತಿರುವ

ತಾವಾರೆಂಬುದನ್ನು ಈ ಅಭಾಗ್ಯನು ತಿಳಿದುಕೊಳ್ಳಬಹುದಲ್ಲವೆ?

ಈಶ್ವರ:-ನಿನ್ನ ಸ್ನೇಹಿತನಾದ ಬಲಭದ್ರನೆಂಬುದು ಜ್ಞಾಪಕದಲ್ಲಿದೆಯೆ?

ರಾಕಾಚಂದ್ರ:—ಅನ್ನದಾತನಾದ ತಿಮ್ಮಪ್ಪನಾಯ್ಕರ ಸುಪುತ್ರನಾದ ಬಲಭದ್ರನನ್ನು ಮರೆಯಲಾದೀತೆ?

ಈಶ್ವರ:—ಆ ಬಲಭದ್ರನೇ ನಾನು.

ಹೀಗೆಂದು ಹೇಳುತ್ತಲೆ ರಾಕಾಚಂದ್ರನ ಕಣ್ಣುಗಳು ಆನಂದಬಾಷ್ಪಗಳಿಂದ ತುಂಬಿಕೊಂಡವು. ಬಲಭದ್ರನನ್ನು ಆಲಿಂಗಿಸಿಕೊಂಡು:—"ಪ್ರಾಣಾಪ್ತ, ಬಲಭದ್ರ, ಈ ನಿರ್ಭಾಗ್ಯನ ಬಂಧವಿಮೋಚನವನ್ನು ಮಾಡಿಸಲು ನೀನು ಪ್ರಯತ್ನಪಟ್ಟುದೇಕೆ? ಅದನ್ನು ಯಾವ ರೀತಿ ಸಾಧಿಸಿದೆ? ಎಂಬುದನ್ನು ತಿಳಿಸುವೆಯಾ?" ಎಂದು ಪ್ರಾರ್ಥಿಸಿದನು

ಬಲಭದ್ರ:-(ಈಶ್ವರ ಮಹಾಶಯರನ್ನು ಇನ್ನು ಅವರ ಹೆಸರಿನಿಂದಲೇ ಕರೆಯೋಣ) ರಾಕಾಚಂದ್ರ, ಯಾವ ಚಂಚಲೆಯು ನಿನಗೆ ಕಾರಾಗಾರವಾಸವಾದುದನ್ನು ಕೇಳಿ ಇಲ್ಲದಂತಾದಳೊ, ಆ ನಿನ್ನ ಪ್ರಾಣೇಶ್ವರಿಯು ದುಷ್ಟರ ಕೈಗೆ ಸಿಕ್ಕಿ ಅವರ ದುಷ್ಟ ಕಾಮವಾಸನೆಗೆ ಎಲ್ಲಿ ಪಕ್ಕಾಗುವಳೋ ಎಂಬ ಭೀತಿಯಿಂದಲೂ, ನನಗೆ ಅವಳ ಮೇಲೆ ಇದ್ದ ಸೋದರೀ ವಾತ್ಸಲ್ಯದಿಂದಲೂ, ನಿನಗೆ ನನ್ನಲ್ಲಿದ್ದ ಅವ್ಯಾಜ ಸ್ನೇಹಭಾವವನ್ನು ಕಂಡು ನಿನಗೆ ಒದಗಿದ ಕಷ್ಟಗಳನ್ನು ಪರಿಹರಿಸಬೇಕೆಂದೂ ಮನಸ್ಸು ಮಾಡಿ ಅವಳ ಶೋಧನೆಗಾಗಿ ಹೊರಟೆ ಈ ಸುವರ್ಣಪುರದಲ್ಲಿರುವ ಒಂದು ದೇವಾಲಯದಲ್ಲಿ ಅವಳನ್ನು ಸಂನ್ಯಾಸಿನಿಯ ವೇಷದಲ್ಲಿ ಕಂಡೆ. ಕಂಡವನೇ ನಿನ್ನ ಬಂಧವಿಮೋಚನೆಗಾಗಿ ಹಾತೊರೆಯುತ್ತಿರುವೆನೆಂಬ ನನ್ನ ಅಭಿಪ್ರಾಯವನ್ನು ನಿವೇದಿಸಿದೆ. ಆದರಿಂದ ಆಕೆಗೆ ಅತ್ಯಂತ ಸಂತೋಷವಾಯಿತು. ನಾವಿಬ್ಬರೂ ಸೋಮಪುರಕ್ಕೆ ವರ್ತಕರ ಉಡುಪಿನಲ್ಲಿ ಬಂದೆವು. ಅಲ್ಲಿಯ ನ್ಯಾಯಸ್ಥಾನದ ಮುಖ್ಯಚಾಕರನೊಬ್ಬನನ್ನು

ಹಣದಾಸೆಯಿಂದ ಹಿಲಿಸಿಕೊಂಡು, ಹಿಂದು ಕಾಗದದ ಮೇಲೆ ರಾಕಾ ಚಂದ್ರನ ಬಂಧವಿಮೋಚನೆಯನ್ನು ಮಾಡುವುದೆಂದು ನ್ಯಾಯಾಧೀಶ ಮಹೇಂದ್ರನು ಜವನದಾಡೆಯ ಜಮಾದಾರನಿಗೆ ಪತ್ರವನ್ನು ಬರೆದಂತೆ ಬರೆಸಿ ಅದಕ್ಕೆ ನ್ಯಾಯಸ್ಥಾನದ ಮುದ್ರೆಯನ್ನು ಹಾಕಿಸಿದೆವು. ಅದನ್ನು ತೆಗೆದುಕೊಂಡು ಅಲ್ಲಿಂದ ಹೊರಟೆವು. ಚಂಚಲೆಯನ್ನು ಆ ದಿನವೇ ಸುವರ್ಣಪುರಕ್ಕೆ ಸಂನ್ಯಾಸಿನಿಯ ವೇಷದಲ್ಲಿ ಕಳುಹಿಸಿದೆನು. ಕೂಡಲೆ ನಾನು ಜೈಲ್ ಇನ್ಸ್ಪೆಕ್ಟರು ಕಾಗದವನ್ನು ಬರೆದಂತೆ ಬರೆದು, ಇಂಥ ದಿನ ಇಷ್ಟು ಗಂಟೆಗೆ ಜೈಲ್ ಇನ್ಸ್ಪೆಕ್ಟನ್ನಿಗೆ ಬರುವೆನೆಂದು ತಿಳಿಸಿದೆನು. ಈ ದಿನ ಅಲ್ಲಿಗೆ ಬಂದೆನು. ಮುಂದೆ ನಡೆದ ವಿಚಾರಗಳು ನಿನಗೆ ತಿಳಿದೇ ಇವೆ.

ರಾಕಾಚಂದ್ರ:—ಈಗ ನಾವು ಮಾಡುವುದೇನು?

ಬಲಭದ್ರ:—ನಿನಗೆ ಅಹಿತವನ್ನು ಮಾಡಿರುವ ವಿಕ್ರಮ, ಭೀಷಣ ಮತ್ತು ನ್ಯಾಯಾಧೀಶ ಮಹೇಂದ್ರರನ್ನು ಗೊತ್ತಿಗೆ ಹಚ್ಚಿ, ಅವರ ಕೃತ್ಯಕ್ಕೆ ತಕ್ಕ ಪ್ರತೀಕಾರವನ್ನು ಮಾಡುವುದಕ್ಕೆ ಪ್ರಯತ್ನ ಪಡಬೇಕು. ಇದಕ್ಕೆ ಆಗಬೇಕಾದ ದ್ರವ್ಯಸಹಾಯವೆಲ್ಲವನ್ನು ನಾನು ಮಾಡುವೆನಲ್ಲದೆ, ಮತ್ತಾವ ನೆರವು ನನ್ನಿಂದ ಬೇಕಾದರೂ ಕೊಡಲು ಸಿದ್ಧನಾಗಿರುವೆನು.

ರಾಕಾಚಂದ್ರ:-ಬಲಭದ್ರ, ಈ ಅಲ್ಪನ ವಿಷಯಕ್ಕಾಗಿ ನೀನು ಇಷ್ಟು ಶ್ರಮವನ್ನು ವಹಿಸಬೇಕಾಗಿದ್ದಿಲ್ಲ. ನನ್ನೊಬ್ಬನಿಂದ ಎಷ್ಟು ಮಂದಿಗೆ ತ್ರಾಸವಾಗುತ್ತೆಂಬುದನ್ನು ಯೋಚಿಸಿರುವೆಯಾ? ನಮಗೆ ಅಹಿತವನ್ನು ಮಾಡಿದವರಿಗೆ ಹಿತವನ್ನು ಬಯಸಬೇಕಲ್ಲದೆ, ಪ್ರತೀಕಾರವನ್ನು ಮಾಡಬಾರದಲ್ಲವೆ?

ಬಲಭದ್ರ:—ರಾಕಾಚಂದ್ರ, ನೀನು ಹೇಳುವುದೇನೋ ನಿಜ. ಆದರೆ "ಚೇಳನ್ನು ಕೊಲ್ಲಬಾರದು. ಅದೂ ನಮ್ಮಂತೆ ಹಿಂದು ಪ್ರಾಣಿಯು" ಎಂದು ಸುಮ್ಮನೆ ಬಿಟ್ಟರೆ, ಅದರ ನೈಜವಾದ ಕೆಟ್ಟಗುಣವನ್ನು ಎಂದಿಗಾದರೂ ಬಿಡುವುದೆ? ಕೆಟ್ಟ ಪ್ರಾಣಿಯನ್ನು ಕೊಲ್ಲಲು

ಹೇಗೆ ಮನಸ್ಸನ್ನು ಮಾಡುವೆವೋ, ಅದೇ ರೀತಿ ನೀಚಕೃತ್ಯವನ್ನು ಮಾಡುವ ಮನುಷ್ಯನನ್ನು ಶಿಕ್ಷಿಸಲೇಬೇಕು. ಇರಲಿ. ಈ ಪುರಾಣವನ್ನು ಹಿಂದಿನಿಂದ ನೋಡೋಣ. ಈಗ ನೀನು ಆ ದುಷ್ಟರ ಕೃತ್ರಿಮಗಳನ್ನು ಹೊರಗೆಡಹದೆ ಹೋದರೆ ಚಂಚಲೆಯು ನಿನ್ನವಳಾಗದೆ ಪ್ರಾಣವನ್ನು ಬಿಡುವಳು. ಅದು ಹೇಗೆಂದರೆ, ನೀನು ಸೆರೆಮನೆಯಿಂದ ತಪ್ಪಿಸಿಕೊಂಡು ಬಂದೆಯೆಂದು ತಿಳಿದೊಡನೆಯೆ, ನಿನ್ನ ಪತ್ನಿಯನ್ನು ಹಚ್ಚಿ, ನಿನ್ನನ್ನು ನರಕ ಯಾತನೆಗೆ ಗುರಿಮಾಡುವರು. ನಿನ್ನ ಪ್ರೀತಿಪಾತ್ರಳಾದ ಚಂಚಲೆಯನ್ನು ಬಲಾತ್ಕಾರದಿಂದಲಾದರೂ ವಶಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುವರು. ಅವರ ವಶವಾಗುವುದಕ್ಕೆ ಮನಸ್ಸಿಲ್ಲದೆ ಈಗ ಅವಳು ಪ್ರಾಣತ್ಯಾಗ ಮಾಡುವಳು. ಇದರಿಂದ ಸ್ತ್ರೀಹತ್ಯಾದೋಷವು ನಿನ್ನ ಸೆರಗಿನಲ್ಲಿ ಗಂಟು ಬೀಳುವುದು. ಅಲ್ಲದೆ ನಿನ್ನ ದುರವಸ್ಥೆಗಾಗಿ ಹಲುಬಿ ಹಂಬಲಿಸಿ, ಅನ್ನಾಹಾರಗಳನ್ನು ತೊರೆದು, ಪರಂಧಾಮವನ್ನೈದಿದ ನಿನ್ನ ತಂದೆಯು ನಿನ್ನ ಈ ಅಲ್ಲದ ಧಾರ್ಮಿಕ ಬುದ್ಧಿಯನ್ನು ನೋಡಿ ಸಂತೋಷಪಡಲಾರನು.

ರಾಕಾಚಂದ್ರ:--ಬಲಭದ್ರ, ಏನನ್ನು ಹೇಳಿದೆ? ನನ್ನ ತಂದೆಯು ತೀರಿ ಹೋದನೆ? ಏತಕ್ಕಾಗಿ? ಈ ಅಭಾಗ್ಯನ ಅವಸ್ಥೆಯನ್ನು ನೋಡಲಾರದೆಯೆ? ಅನ್ನಾಹಾರಗಳಿಲ್ಲದೆ ದೇಹವನ್ನು ಬಿಟ್ಟು ಹೋದನೆ? ಅಯ್ಯೋ! ತಂದೆ!! ಜನ್ಮದಾತ!!! ಈ ಪ್ರಪಂಚದಲ್ಲಿ ನೀನೂ ಹೋದ ಮೇಲೆ ನನಗಿನ್ನಾರು ಗತಿ? ಮಾತೆಯಿಲ್ಲದ ಈ ಅಭಾಗ್ಯನನ್ನು ಎಷ್ಟು ಅಕ್ಕರೆಯಿಂದ ಸಲಹಿದ್ದೆಯಲ್ಲ? ನನಗಾಗಿ ಎಷ್ಟು ಉಪವಾಸಗಳನ್ನು ಮಾಡಿದ್ದೆಯಲ್ಲ? ತಂದೆ, ಕೊನೆಗೂ ನೀನು ನಿನ್ನ ಉಪವಾಸದಿಂದಲೇ ಈ ನಶ್ವರವಾದ ಪ್ರಪಂಚವನ್ನು ಬಿಟ್ಟು ಹೋದೆಯಾ? ಬಲಭದ್ರ-ಪ್ರಾಣಾಪ್ತ, ಇಗೋ ಶಪಥ ಮಾಡುವೆನು ಕೇಳು: ಯಾವ ನನ್ನ ದೈವ ಸ್ವರೂಪಿಯಾದ ತಂದೆಯ ಮರಣಕ್ಕೆ ಕಾರಣಭೂತರಾಗಿರುವ ಆ ಚಂಡಾಲರನ್ನು ನಿರ್ಮೂಲ ಮಾಡುವೆನು. ಆ ಪಾಪಿಗಳ ಮೇಲೆ ನನಗಿರುವ 'ಸೇಡ'ನ್ನು ತೀರಿಸಿಕೊಳ್ಳುವೆನು. ಇಲ್ಲವೆ

ಈ ದೇಹವನ್ನು ಅಗ್ನಿಯಲ್ಲಿ ಭಸ್ಮ ಮಾಡಿ ಬಿಡುವೆನು. ಸೇಡು! ಸೇಡು!! ಸೇಡು!!!

ಎಲ್ಲೆಲ್ಲಿಯೂ ಸೇಡು-ಸೇಡು ಎಂಬ ಶಬ್ದಗಳೇ ಪ್ರತಿಧ್ವನಿಗೊಂಡವು

## ಪರಿಚ್ಛೇದ ೮

"ತಾವು ಎಲ್ಲಿಂದ ಬಂದಿರುವಿರಿ? ನನ್ನಲ್ಲಿ ತಮಗೇನು ಕೆಲಸವಿರುವುದು?" ಎಂದು ಸುವರ್ಣಪುರದಲ್ಲಿ ಪೇಟೆಯ ಮಧ್ಯಭಾಗದಲ್ಲಿರುವ ಒಂದು ಪ್ರಾಸಾದದ ಮೂರನೇ ಅಂತಸ್ತಿನ ಒಳಭಾಗದ ಕೋಣೆಯಲ್ಲಿ ಕುಳಿತಿದ್ದಂತಹ ಮಧ್ಯಮ ವಯಸ್ಸಿನ ಪುರುಷನೊಬ್ಬನು ತನ್ನ ಇದಿರಿನಲ್ಲಿ ಕೂತುಕೊಂಡಿದ್ದ ಆಗಂತುಕನೊಬ್ಬನನ್ನು ಪ್ರಶ್ನೆ ಮಾಡುತ್ತಿದ್ದನು.

ಆಗಂತುಕ:— ನಾನು ಸೋಮಪುರದಿಂದ ಬಂದಿರುವೆನು. ಚಿಂತಾಸಾಗರರು ತಮ್ಮನ್ನು ನೋಡಿ, ತಮ್ಮಲ್ಲಿ ಕೆಲವು ಮಾತುಗಳನ್ನು ಹೇಳಿ ಬಾ, ಎಂದು ಕಳುಹಿಸಿರುವರು ತಮ್ಮ ಹೆಸರು ದೇವಿದಾಸರೆಂದಹುದೋ-ಅಲ್ಲವೋ? ಎಂಬ ಸಂಶಯದಿಂದ ಇಲ್ಲಿಯ ವರೆಗೂ ಸುಮ್ಮನಿರಬೇಕಾಯಿತು.

ದೇವಿದಾಸ:-ನಾನೇ ದೇವಿದಾಸನು. ಆ ವಿಷಯದಲ್ಲಿ ತಮಗೆ ಎಳ್ಳಷ್ಟು ಸಂಶಯವು ಬೇಕಿಲ್ಲ. ಚಿಂತಾಸಾಗರನು ಸೌಖ್ಯವಾಗಿರುವನಷ್ಟೇ?

ಆಗಂತುಕ: — ಸೌಖ್ಯದಿಂದಿರುವನು

ದೇವಿದಾಸ:—ಯಾವ ವಿಷಯವನ್ನು ನನ್ನೊಡನೆ ತಿಳಿಸಬೇಕೆಂದು ಹೇಳಿರುವನು?

ಆಗಂತುಕ:—ತಮಗೆ ಮೊದಲು ಈ ಪತ್ರವನ್ನು ಕೊಡೆಂದು ಹೇಳಿರುವನು, ಎಂದು ಹೇಳುತ್ತಾ, ತನ್ನ ಕಿಸೆಯಲ್ಲಿಟ್ಟುಕೊಂಡಿದ್ದ ಕಾಗದವೊಂದನ್ನು ತೆಗೆದು, ದೇವಿದಾಸನ ಕೈಲಿ ಕೊಟ್ಟನು. ದೇವಿ

ದಾಸನು ಆದ್ಯಂತವಾಗಿ ಅದನ್ನು ಓದಿಕೊಂಡು ಸಂತೋಷವನ್ನು ಹೊಂದಿ:—"ಉಪೇಂದ್ರ(ಆಗಂತುಕನ ಹೆಸರು), ನಿನ್ನನ್ನು ನೋಡಿ, ನನಗೆ ಬಹಳ ಆನಂದವಾಯ್ತು. ನೀನು ನನ್ನ ಕೆಲಸಕ್ಕೆ ಕೈ ಹಾಕಿದ ಮೇಲೆ ಕಾರ್ಯವು ಫಲಕಾರಿಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ; ಆದರೆ ತನಗೊಬ್ಬ ಸಹೋದರನಿರುವನೆಂದೂ, ಆತನು ನನ್ನ ಶತ್ರುವಾದ ಚಂದ್ರಚೂಡನ ಮಂತ್ರಿಯಾಗಿರುವನೆಂದೂ ಚಿಂತಾಸಾಗರನು ತಿಳಿಸಿಯೇ ಇರಲಿಲ್ಲವಲ್ಲ?

ಉಪೇಂದ್ರ:— ಹಾಗಾದರೆ ಅಣ್ಣನವರು ನನ್ನ ವಿಚಾರದಲ್ಲಿ ಏನಾದರೂ ಬರೆದಿರುವರೆ?

ದೇವಿದಾಸ:—ಹೌದು. ಪತ್ರದಲ್ಲೆಲ್ಲಾ ನಿನ್ನ ವಿಚಾರವನ್ನೇ ವರ್ಣನೆ ಮಾಡಿರುವರು ಕಾಗದವನ್ನು ಬರೆದಾದ ಮೇಲೆ ಅದನ್ನು ನಿನಗೆ ತೋರಿಸಲಿಲ್ಲವೇ?

ಉಪೇಂದ್ರ:—ಇಲ್ಲ

ದೇವಿದಾಸ:-ಹಾಗಾದರೆ ಈ ಪತ್ರವನ್ನು ಓದುವೆನು, ಕೇಳು:

ಸೋಮಪುರ,

ಪ್ರಿಯಮಿತ್ರ, ದೇವಿದಾಸನಲ್ಲಿ—ಚಿಂತಾಸಾಗರ ಉರ್ಫ ಮಹೇಂದ್ರನ ಸಾಷ್ಟಾಂಗ ನಮಸ್ಕಾರಗಳು ಈ ಪತ್ರವನ್ನು ತಂದಿರುವವನು ನನ್ನ ಸಹೋದರ ಉಪೇಂದ್ರನು ಈತನು ಚಂದ್ರಚೂಡನ ಮುಖ್ಯ ಮಂತ್ರಿಯಾಗಿರುವನು. ಮೊದಮೊದಲು ಈತನು ಚಂದ್ರಚೂಡನಲ್ಲಿ ನಿಶ್ಚಲವಾದ ಸ್ವಾಮಿಭಕ್ತಿಯನ್ನಿಟ್ಟಿದ್ದನು; ಆದರೆ ಆತನ ಅತ್ಯಾಚಾರಗಳು ಹೆಚ್ಚಾಗುತ್ತ ಬಂದಂತೆಲ್ಲ ಈತನ ಸ್ವಾಮಿಭಕ್ತಿಯು ಕುಗ್ಗುತ್ತಾ ಬಂದಿತು. ಜನಗಳಲ್ಲಿ ರಾಜಭಕ್ತಿಯು ಸಂಪೂರ್ಣವಾಗಿ ಮಾಯವಾಗುತ್ತ ಬಂದಿರುವುದು. ಈ ಸಮಯವನ್ನು ಸಾಧಿಸಿ. ನಾನು ಒಂದು ದಿನ ಉಪೇಂದ್ರನಲ್ಲಿ ನಿನ್ನ ವಿಚಾರವನ್ನು ಪ್ರಸ್ತಾಪ ಮಾಡಿದೆ ನಿನ್ನ ಕಾರ್ಯಕ್ಕೆ ಈತನು ಅನುಕೂಲವಾಗಿಯೇ ಇರುವನು. ಈತನು ನಿನ್ನಿಂದ ಅನೇಕ ವಿಚಾರಗಳನ್ನು

ತಿಳಿದುಕೊಳ್ಳಲಿಚ್ಛಿಸುವನು ಆತನ ಪ್ರಶ್ನೆಗಳಿಗೆ ಸದುತ್ತರವನ್ನು ಕೊಟ್ಟು ನಿನ್ನ ಕೆಲಸವನ್ನು ಆಗುಮಾಡಿಕೊಳ್ಳತಕ್ಕದ್ದು.

ನಿನ್ನ ಹಿತಚಿಂತಕ,

ಮಹೇಂದ್ರ.

ದೇವಿದಾಸನು ಕಾಗದವನ್ನು ಓದಿ ಪೂರೈಸಿ ಉಪೇಂದ್ರನನ್ನು ಕುರಿತು:—"ಉಪೇಂದ್ರ, ನಿನ್ನ ಸಹೋದರನು ನನಗೆ ಹೇಗೆ ಆಪ್ತನೊ ನೀನೂ ಹಾಗೆಯೇ ಆಪ್ತನು. ಇನ್ನು ನಿನ್ನಲ್ಲಿ ಯಾವುದನ್ನೂ ಮರೆಮಾಚುವುದಿಲ್ಲ. ಬೇಕಾದ ವಿಷಯವನ್ನು ಕೇಳು ಹೇಳುವೆನು."

ಉಪೇಂದ್ರ:—ತಮ್ಮ ಅನುಗ್ರಹವು ನನ್ನ ಮೇಲೆ ಉಂಟಾದದ್ದಕ್ಕಾಗಿ ನಾನು ಧನ್ಯನಾದೆ ಚಂದ್ರಚೂಡನನ್ನು ಪದಚ್ಯುತನಾಗುವಂತೆ ಮಾಡಿದರೆ, ನನ್ನನ್ನು ಮಂತ್ರಿ ಪದವಿಯಲ್ಲಿಯೇ ಇಟ್ಟುಕೊಳ್ಳುವಿರಾ?

ದೇವಿದಾಸ:—ಇದೇನು, ಹೀಗೆ ಪ್ರಶ್ನೆ ಮಾಡುವೆ? ನಿನಗಿಂತಲೂ ಆಪ್ತನೇ ಇಲ್ಲವೆಂದು ಹೇಳಲಿಲ್ಲವೇ? ದೇಶವನ್ನೇ ನಿನ್ನ ಆಧೀನದಲ್ಲಿಟ್ಟು ನಾನು ಸುಖದಿಂದಿರುವೆನು. ಹೀಗೆ ಪ್ರಶ್ನೆ ಮಾಡಲು ಕಾರಣವೇನು?

ಉಪೇಂದ್ರ:— ಇದರಲ್ಲಿ ಒಂದು ಮುಖ್ಯೋದ್ದೇಶವುಂಟು. ಆ ಉದ್ದೇಶವು ತಮಗೂ ತಿಳಿದಿರುವುದೇ ಆಗಿರುವುದು. ನನ್ನ ಮತ್ತು ಮಹೇಂದ್ರನ ಪದವಿಗಳು ಹೆಚ್ಚಿದರೆ, ನಮ್ಮಲ್ಲಿಯ ಹುಳುಕುಗಳನ್ನು ತಿಳಿದಿರುವ ಅನೇಕರು ಜವನ್ನು ಎತ್ತಿ ಹಾರಲು ಸಮರ್ಥರಾಗುವರು; ಆಗ ನಮಗೆ ಅನೇಕ ತೊಂದರೆಗಳುಂಟಾಗಬಹುದು.

ದೇವಿದಾಸ:—ಉಪೇಂದ್ರ, ನೀನು ಹೇಳುತ್ತಿರುವ ವಿಷಯವಾವುದೆಂದು ಗೊತ್ತಾಯಿತು. ನಿನ್ನ ಅಣ್ಣನ ಭಾರ್ಯೆಯಾದ ಮಂಥರೆಯ ವಿವಾಹದ ಸಂಗತಿ ಆ ವಿಚಾರದಲ್ಲಿ ನೀವಾದರೂ ಭಯಪಡುವ ಅವಶ್ಯಕತೆಯಿಲ್ಲ. ಮಂಥರೆಯು ತಾನಾಗಿಯೆ ಒಪ್ಪಿ, ಅವನನ್ನು ಮದುವೆಯಾಗಿರುವಳು; ಆಕೆಯ ತಂದೆ-ತಾಯಿಗಳೂ ಒಪ್ಪಿರುವರು.

ಉಪೇಂದ್ರ:—ಆದರೆ...........

ದೇವಿದಾಸ:—ಆದರೆ ಏನು? ಸೋಮಚಂದ್ರನನ್ನು ಮೋಸದಿಂದ ಸೆರೆಯಲ್ಲಿರಿಸಿ, ತಾನೇ ಅವನೆಂದು ಮಂಥರೆಯನ್ನು ಮದುವೆಯಾದನೆಂದು ನಿನ್ನ ಊಹೆಯಲ್ಲವೆ? ಹೌದು, ಹಾಗೆಯೇ ಮಾಡಿದನು ಆದರೆ ಸೋಮಚಂದ್ರನಾಗಲಿ, ಅವನ ಮಾತಾ-ಪಿತೃಗಳಾಗಲಿ ಬದುಕಿರುವರೆಂದು ಯಾರು ತಾನೆ ಹೇಳುವರು? ಅವರು ನನ್ನ ಸ್ವಾಧೀನದಲ್ಲಿರುವಾಗ, ಅದರಲ್ಲೂ ನೆಲಮನೆಯ ಸೆರೆಯಲ್ಲಿರುವಾಗ ಯಾರಿಗೆ ತಾನೆ ಅವರ ಪತ್ತೆ ಹಚ್ಚುವುದಕ್ಕಾಗುವುದು?

ಉಪೇಂದ್ರ:— ಹೇಗೂ ಅವರು ಜೀವದಿಂದಿರುವಾಗ ನಮ್ಮ ಕಾರ್ಯಗಳು ಸಫಲವಾಗುವುದೆಂದೂ, ನಮ್ಮಣ್ಣನ ಮೋಸವು ಮುಚ್ಚಿಡಲ್ಪಡುವುದೆಂದೂ ಹೇಳಲಾಗದು.

ದೇವಿದಾಸ:—ಅವರನ್ನು ಏನು ಮಾಡಬೇಕೆಂದಿರುವೆ?

ಉಪೇಂದ್ರ:—ಅವರನ್ನು ಬೇಗನೆ ಕೊಲ್ಲಿಸಬೇಕು

ದೇವಿದಾಸ:—ಆ ಕೆಲಸ ಮಾಡಲು ನನ್ನ ಮನವೊಪ್ಪದು.

ಉಪೇಂದ್ರ:— ಹಾಗಾದರೆ ಮಹೇಂದ್ರನ ಯೋಗಕ್ಷೇಮವು ನಿಮಗಿಲ್ಲವೆಂದು ಕಾಣುತ್ತೆ.

ದೇವಿದಾಸ:—ಹಾಗೆಂದಿಗೂ ಭಾವಿಸಬೇಡ. ಆಣೆ ಮಾಡಿ ಹೇಳುವೆನು ಅವರನ್ನು ನಿನ್ನ ವಶಕ್ಕೊಪ್ಪಿಸುವೆನು. ನೀನು ನಿನ್ನ ಮನಬಂದಂತೆ ಮಾಡು.

ಉಪೇಂದ್ರ:— ಹಾಗೊ? ಹಾಗೆಯೇ ಆಗಲಿ. ಅವರನ್ನು ನನ್ನೊಡನೆ ಕಳುಹಿಸಿ ಅವರನ್ನು ಈ ರಾತ್ರಿಯೇ ಇಲ್ಲದಂತೆ ಮಾಡಿ ಪುನಃ ನಾಳೆ ಬಂದು ನಿಮ್ಮನ್ನು ನೋಡುವೆನು.

ಕೂಡಲೆ ದೇವಿದಾಸನು ನೆಲಮಾಳಿಗೆಯಲ್ಲಿ ಸೆರೆಯಿಟ್ಟಿದ್ದ ಮೂವರನ್ನು ತಂದು ಗಾಡಿಯಲ್ಲಿ ಕೂಡಿಸಿ ಉಪೇಂದ್ರನ ಸಂಗಡ ಕಳುಹಿಸಿಕೊಟ್ಟನು.

# ಪರಿಚ್ಛೇದ ೯

"ಇದರ ಪರಿಣಾಮವೇನಾಗುವದೆಂಬದನ್ನು ನಾನು ಬಲ್ಲೆ ನಿನ್ನ ಈ ಬೆದರಿಕೆಗಳಿಗೆ ನಾನು ಸೊಪ್ಪು ಹಾಕುವವನಲ್ಲ ಮಧುಪ್ರಿಯ, ನೀನೆಷ್ಟರವನು? ನಿನ್ನ ಮಾತುಗಳ ಬೆಲೆ ಏನು? ಎಂಬುದನ್ನು ಬಾಲ್ಯದಿಂದಲೂ ಬಲ್ಲ ನನ್ನಲ್ಲಿಯೇ ನಿನ್ನ ಪುರಾಣವನ್ನೋದಲಿಕ್ಕೆ ಬಂದಿರುವೆ? ನನ್ನ ಹೆಸರಿಗೆ ತಕ್ಕಂತೆ ನಾನು ನನ್ನ ವೈರಿಗಳಿಗೆ ಭೀಷಣನಾಗಿಯೇ ಇರುವೆನು."

ಮಧುಪ್ರಿಯ:—ಭೀಷಣ, ನಿನ್ನ ಮತ್ತು ಆ ವಿಕ್ರಮನ ಸಂಚುಗಳು ಹೊರಬಿದ್ದವೆಂಬುದನ್ನು ಬಲ್ಲೆಯಾ?

ಭೀಷಣ:-ನಾವು ಸಂಚನ್ನು ಮಾಡಿದ್ದರಲ್ಲವೆ ಹೊರಬೀಳುವದು?

ಮಧುಪ್ರಿಯ:—ನೀವುಗಳು ನಿರ್ದೋಷಿಗಳೊ? ಆಗಲಿ. ಇನ್ನು ಸ್ವಲ್ಪ ಕಾಲದಲ್ಲಿಯೇ ನಿಮ್ಮ ಶತ್ರುಗಳ ನೆನಪನ್ನು ನಿಮಗೆ ಮಾಡಲು ಆ ನಿಮ್ಮ ಪ್ರತಿವಾದಿಯು ಜವನದಾಡೆಯು ಜೈಲಿನಿಂದ ತಪ್ಪಿಸಿಕೊಂಡು ಹೋಗಿರುವನು ತನ್ನ ಕೈಯನ್ನು ನಮ್ಮ ಮೇಲೆ ತೋರಿಸಲು ಸಂಧಿಯನ್ನು ಕಾಯುತ್ತಿರುವನು.

ಭೀಷಣ:—ಏನು, ರಾಕಾಚಂದ್ರನು ಸೆರೆಮನೆಯಿಂದ ತಪ್ಪಿಸಿಕೊಂಡು ಹೋಗಿರುವನೆ?

ಮಧುಪ್ರಿಯ:— ಹೌದು.

ಭೀಷಣ:—ಸತ್ಯವಾಗಿಯೂ ನಿಜವೆ?

ಮಧುಪ್ರಿಯ:—ಭೀಷಣ, ನೋಡಿದೆಯಾ? ನಿನ್ನ ಭೀಷಣವಾದ ಎದೆಯು ಕೂಡ ಈ ವಿಚಾರವನ್ನು ಕೇಳುತ್ತಲೆ ನಡುಗಿದಂತೆ ಕಾಣುತ್ತೆ. ಈಗ ಮತ್ತೊಂದು ಬಾರಿ ಹೇಳುವೆನು ಕೇಳು: ನಿನ್ನ ಶತ್ರುವು ಸತ್ಯವಾಗಿಯೂ ಸೆರೆಯಿಂದ ತಪ್ಪಿಸಿಕೊಂಡು ಹೋಗಿರುವನು ನೀನು ಯಾರನ್ನು ಮೋಸಪಡಿಸಿ ಈ ಅಪಾರ ಆಸ್ತಿಯನ್ನು ಹೊಂದಿದೆಯೋ, ಅಂಥ ತಿಮ್ಮಪ್ಪನಾಯ್ಕರ ಮಗನಾದ ಬಲಭದ್ರ

ನೂ ಆತನಿಗೆ ಸಹಾಯಕನಾಗಿರುವನು.

ಭೀಷಣ:—ಭಲಭದ್ರನೂ ಆತನಿಗೆ ಸಹಾಯ ಮಾಡಲೊಪ್ಪಿರುವನೇ? ಇದೆಂದಿಗೂ ನಂಬಲಾರದ ವಿಚಾರ.

ಮಧುಪ್ರಿಯ:—ನೀನು ನನ್ನ ಮಾತನ್ನು ನಂಬಿದರೂ, ನಂಬದಿದ್ದರೂ ನನಗಾಗುವ ಪ್ರಯೋಜನವು ಅಷ್ಟರಲ್ಲೇ ಇರುವುದು; ಆದರೆ ನೀನು ಈ ಕುತ್ತಿನಿಂದ ಪಾರಾಗಬೇಕಾದರೆ, ನಿನ್ನಲ್ಲಿರುವ ಲೆಖ್ಖ-ಪತ್ರಗಳನ್ನೆಲ್ಲಾ ಹಾಳು ಮಾಡಿದಲ್ಲದೆ ಬೇರೆ ಯಾವ ಉಪಾಯವೂ ಇರುವುದಿಲ್ಲ.

ಭೀಷಣ:—ನನ್ನಲ್ಲಿರುವ ಲೆಖ್ಖ-ಪತ್ರಗಳನ್ನು ಹಾಳು ಮಾಡಿದ್ದಾದರೆ ನನ್ನ ಭಾಗ್ಯಲಕ್ಷ್ಮಿಯನ್ನೇ ಮನೆಯಿಂದ ಹೊರಕ್ಕೆ ತಳ್ಳಿದಂತಾಗುವುದಲ್ಲ?

ಮಧುಪ್ರಿಯ:—ಹಾಗಾದರೆ ಮುಂದೆ ಬರುವ ಫಲವನ್ನು ಅನುಭವಿಸಲು ಸಿದ್ಧನಾಗಬೇಕು ಮತ್ತೊಂದು ವಿಚಾರ. ಸುವರ್ಣಪುರದ ವರ್ತಕ ಗೋವಿಂದಲಾಲನು ಸಿಂಹಳದ್ವೀಪಕ್ಕೆ ವ್ಯಾಪಾರಕ್ಕಾಗಿ ಹೋಗಿ, ಬರುತ್ತ ದಾರಿಯಲ್ಲಿ ಹಡಗು ಮುಳುಗಿ ತೀರಿಹೋದನೆಂದು, ಅವನಿಂದ ತಿಮ್ಮಪ್ಪನಾಯಕರಿಗೆ ಬರಬೇಕಾದ ಮೂರು ಸಾವಿರ ರೂಪಾಯಿಗಳಿಗೆ ಮೂವತ್ತು ಸಾವಿರ ರೂಪಾಯಿಗಳೆಂದು ನೀನು ಸುಳ್ಳು ಲೆಖ್ಖವನ್ನು ಹಾಕಿ, ಅವನ ಆಸ್ತಿಯೆಲ್ಲವನ್ನೂ ಸಾಲಕ್ಕಾಗಿ ಕಟ್ಟಿಕೊಂಡು, ಅವನ ಹೆಂಡಿರು-ಮಕ್ಕಳನ್ನು ಬೀದಿಯ ಭಿಕಾರಿಗಳಾಗಿ ಮಾಡಿದೆಯಂತಲ್ಲ? ನಿಜವೋ?

ಭೀಷಣ:—ಇದನ್ನು ನಿಜವೆಂದು ಯಾರು ಹೇಳುವರು?

ಮಧುಪ್ರಿಯ:—ಗೋವಿಂದಲಾಲನೇ ಹೇಳುತ್ತಿರುವನು.

ಭೀಷಣ:—ಸತ್ತು ಹೋಗಿರುವ ಗೋವಿಂದಲಾಲನು ಹೇಳಿದನೆನ್ನುವೆಯಾ? ಅವನು ಜೀವದಿಂದಿರುವುದು ಎಷ್ಟು ನಿಜವೊ, ನಾನು ಅವನ ವಿಷಯದಲ್ಲಿ ಮೋಸಪಡಿಸಿದ್ದೂ ಅಷ್ಟೇ ನಿಜ.

ಮಧುಪ್ರಿಯ:—ಹಾಗೋ? ಸರಿ. ಸರಿ. ಗೋವಿಂದಲಾಲ

ನನ್ನು ನೀನು ಸೆರೆಯಲ್ಲಿಟ್ಟದ್ದೂ, ಆವನನ್ನು ಬಲಭದ್ರನು ಬಿಡಿಸಿ ತನ್ನೊಡನೆ ಗುಪ್ತವಾಗಿಟ್ಟುಕೊಂಡಿರುವುದೂ, ನೀನು ನಿನ್ನ ಅಪರಾಧಗಳಿಗಾಗಿ ಇಷ್ಟರಲ್ಲಿಯೇ ಸೆರೆಮನೆಯ ಸೇಬತಿಯಾಗುವುದೂ ಎಲ್ಲವನ್ನೂ ನಾನು ತಿಳಿದಿರುವೆನು. ಏತಕ್ಕಾಗಿ ನನ್ನ ಕಣ್ಣಿಗೂ ಅಂಜನವನ್ನು ಹಾಕಬೇಕೆಂದಿರುವೆ?

ಭೀಷಣ:—ಈ ವಿಷಯಗಳೆಲ್ಲವನ್ನೂ ನೀನು ಹೇಗೆ ತಿಳಿದೆ?

ಮಧುಪ್ರಿಯ:—ನಿನ್ನ ಬಾಯಿಂದಲೇ?

ಭೀಷಣ:-ಏನು, ನಾನು ಈ ವಿಚಾರಗಳನ್ನು ನಿನಗೆ ಹೇಳಿದೆನೊ?

ಮಧುಪ್ರಿಯ:—ಹೌದು. ಈಗ ನಾಲ್ಕು ದಿನಗಳ ಹಿಂದೆ ನೀನು ಸುವರ್ಣಪುರಕ್ಕೆ ಏತಕ್ಕೆಂದು ಹೋಗಿದ್ದೆ?

ಭೀಷಣ:—ವ್ಯಾಪಾರಕ್ಕಾಗಿ.

ಮಧುಪ್ರಿಯ:-ಅಲ್ಲಿ ನೀನು ಯಾರ ಮನೆಯಲ್ಲಿ ಇಳಿದುಕೊಂಡಿದ್ದೆ?

ಭೀಷಣ:—ರತ್ನವ್ಯಾಪಾರಿ ಸಿಂಹಲಾಲನ ಮನೆಯಲ್ಲಿ.

ಮಧುಪ್ರಿಯ:—ಸಿಂಹಲಾಲನೆಂದು ಹೆಸರನ್ನು ಬದಲಾಯಿಸಿಕೊಂಡಿರುವ ವಿಕ್ರಮನ ಮನೆಯಲ್ಲೋ?

ಭೀಷಣ:—ವಿಕ್ರಮನಾರು?

ಮಧುಪ್ರಿಯ:—ರಾಕಾಚಂದ್ರನನ್ನು ನಾಶಮಾಡಬೇಕೆಂದು ನಿನ್ನೊಂದಿಗೆ ಪ್ರಯತ್ನವನ್ನು ಮಾಡಿದ ವಿಕ್ರಮನು, ಈಗ ನೀನು ಸಿಂಹಲಾಲನೆಂದು ಹೇಳಿದೆಯಲ್ಲಾ ಅವನು!

ಭೀಷಣ:-ಮಧುಪ್ರಿಯ, ನಮ್ಮ ಸಂಚುಗಳೆಲ್ಲವನ್ನೂ ಯಾರೊ ಬೈಲಿಗೆಳೆಯುತ್ತಿರುವರು. ಇದಕ್ಕುಪಾಯವೇನು?

ಮಧುಪ್ರಿಯ:—ನಿನ್ನ ಈ ವಿಚಾರಗಳನ್ನು ಹೊರಗೆಡಹುತ್ತಿರುವವನು ವಿಕ್ರಮನಲ್ಲದೆ ಮತ್ತಾರು? ಇಲ್ಲಿ ಅವನು ನಿನ್ನ ಪ್ರಾಣಾಪ್ತಸ್ನೇಹಿತನೆಂದು ನೀನು ತಿಳಿದುಕೊಂಡಿರುವೆ; ಆದರೆ ಅವನೇ ನಿನ್ನ ಪ್ರಾಣಾಘಾತವನ್ನುಂಟು ಮಾಡಲು ಹೊಂಚು ಹಾಕುತ್ತಿರುವನು.

ಭೀಷಣ:—ವಿಕ್ರಮನೇ ಇದಕ್ಕೆಲ್ಲ ಕಾರಣನೇ?

ಮಧುಪ್ರಿಯ:—ಹೌದು.

ಭೀಷಣ:— ಹಾಗಾದರೆ, ಈಗಲೇ ಹೋಗಿ ಅವನನ್ನು ಕೊಂದು ಬರುವೆನು.

ಮಧುಪ್ರಿಯ:— ದುಡುಕುವುದರಿಂದ ಕೆಲಸ ಕೆಡುವುದು. ಈಗ ನೀನು ರಾಕಾಚಂದ್ರನ ಬಲೆಯಿಂದ ತಪ್ಪಿಸಿಕೊಳ್ಳಬೇಕಾದರೆ, ನಾನು ಮೊದಲು ಹೇಳಿದಂತೆ ಕಾರ್ಖಾನೆಯ ಲೆಖ್ಖ-ಪತ್ರಗಳನ್ನು ನನ್ನ ಕೈಲಿ ಕೊಡು. ಅವನ್ನು ಗೌಪ್ಯವಾಗಿ ತೆಗೆದುಕೊಂಡು ಹೋಗಿ ಕಾಡಿನಲ್ಲಿ ಸುಟ್ಟು ಬರುವೆನು. ಏನನ್ನು ಯೋಚಿಸುತ್ತಿರುವೆ? ಏಳು, ತ್ವರೆ ಮಾಡು.

ಭೀಷಣನು ಮುಗ್ಧನಾದನು. ಏನು ಮಾಡುವುದಕ್ಕೂ ಅವನಿಗೆ ತೋಚಲಿಲ್ಲ. ಮಧುಪ್ರಿಯನ ಬಲಾತ್ಕಾರಕ್ಕೆ ಮನಸ್ಸನ್ನು ಇಳಿಬಿಟ್ಟನು. ಲೆಖ್ಖ-ಪತ್ರಗಳ ಪುಸ್ತಕವೊಂದನ್ನು ಅವನ ಕೈಲಿ ಕೊಟ್ಟನು. ಯಾವುದನ್ನೋ ಯೋಚಿಸುತ್ತ ಕ್ಷಣಕಾಲ ಕಣ್ಣುಗಳನ್ನು ಮುಚ್ಚಿಕೊಂಡು ಕುಳಿತಿದ್ದವನು, ಏನನ್ನೋ ನೆನಸಿಕೊಂಡು ಕಣ್ಣು ಬಿಟ್ಟು ಸುತ್ತಲೂ ನೋಡಿದನು. ಮಧುಪ್ರಿಯನಿರಲಿಲ್ಲ ಹೋಗುವಾಗ ಒಂದು ಮಾತನ್ನೂ ಹೇಳದೆ, ಒಂದು ಬಟ್ಟಲು ಸೆರೆಯನ್ನೂ ಪದ್ಧತಿಯಂತೆ ತೆಗೆದುಕೊಳ್ಳದೆ ಹೊರಟು ಹೋದನೆ? ಇಲ್ಲ, ಈಗ ಬರುವನು; ಆಗ ಬರುವನು, ಎಂದು ಸ್ವಲ್ಪಕಾಲ ತಡೆದನು. ಯಾರೂ ಬರಲಿಲ್ಲ ನನ್ನನ್ನು ಮೋಸಗೊಳಿಸಿ ಹೋಗಿರಬಹುದೇ? ಎಂದು ತರ್ಕಿಸಿದನು. ಮರುಕ್ಷಣದಲ್ಲಿಯೇ ಮಧುಪ್ರಿಯನು ತನ್ನನ್ನು ವಂಚಿಸಲಾರನೆಂದು ನಿರ್ಧರಿಸಿದನು. ತತ್‌ಕ್ಷಣವೇ ಆಳನ್ನು ಕರೆದು:"ಮಧುಪ್ರಿಯನು ಮನೆಯಲ್ಲಿರುವನೇ? ಈಗ ಒಂದು ಗಂಟೆಯ ಹಿಂದೆ ಮನೆಯಲ್ಲಿಯೇ ಇದ್ದನೇ? ಹೋಗಿದ್ದರೆ ಎಲ್ಲಿಗೆ ಹೋಗಿದ್ದಾನೆ? ಎಂಬ ಅಂಶಗಳನ್ನು ತಿಳಿದು ಬಾ" ರೆಂದು ಹೇಳಿದನು ಆಳು ಓಡುತ್ತ ಹೋಗಿ ಹಿಂದಿರುಗಿ ಬಂದು: -"ಸ್ವಾಮಿ, ಮಧುಪ್ರಿಯರಿಗೆ ಉಗ್ರವಾದ ಜ್ವರವು ಬಂದು ಬೆಳಗಿನಿಂದಲೂ ಮಲಗಿದವರು ಏಳಲಿಲ್ಲವಂತೆ"ಎಂದು ಹೇಳಿ

ದನು. ಇದನ್ನು ಕೇಳುತ್ತಲೆ ಭೀಷಣನ ತಲೆಯ ಮೇಲೆ ಸಿಡಿಲು ಬಡಿದಂತಾಯ್ತು "ಮೋಸ! ಮೋಸ!! ಮೋಸ ಹೋದೆನು!!!" ಎಂದು ಹೇಳುತ್ತಾ ನೆಲದ ಮೇಲೆ ಕುಳಿತುಕೊಂಡನು. ಅವನ ಮುಂದೆ ಒಂದು ಪತ್ರವು ಬಿದ್ದಿದ್ದಂತೆ ಕಾಣಿಸಿತು. ಆತುರದಿಂದ ಅದನ್ನು ತೆಗೆದುಕೊಂಡನು. ವಿಳಾಸವು ತನ್ನ ಹೆಸರಿನಲ್ಲಿಯೇ ಇತ್ತು. ಪತ್ರವನ್ನು ಬಿಚ್ಚಿ ಓದಿದನು:—"ಭೀಷಣ, ಅಧರ್ಮ, ಅತ್ಯಾಚಾರಗಳು ಕೆಲವು ಕಾಲ ವರ್ಧಿಸಿದರೂ, ಕೊನೆಗೆ ನಾಶವನ್ನೈದುವುವು. ಈ ವಿಷಯವನ್ನು ತಿಳಿಯದೆ, ನೀನೂ, ನಿನ್ನ ಪರಮಾಪ್ತನೂ ಆದ ವಿಕ್ರಮನೂ ಸೇರಿ, ಅಲ್ಲದ-ಸಲ್ಲದ ಅಪವಾದವನ್ನು ನನ್ನ ಮೇಲೆ ಹೊರಿಸಿ, ನಿಮ್ಮ ಇಷ್ಟಾರ್ಥವನ್ನು ಪೂರೈಸಿಕೊಳ್ಳಲು ಪ್ರಯತ್ನಪಟ್ಟಿರಿ; ಆದರೆ ದೈವಬಲವು ನನಗಿದ್ದುದರಿಂದಲೂ, ಸತ್ಯವೇ ಜಯವನ್ನು ಹೊಂದಬೇಕಾಗಿರುವುದರಿಂದಲೂ ನಾನು ಸೆರೆಮನೆಯಿಂದ ಹೊರಬಿದ್ದು, ನಿಮ್ಮ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಇನ್ನೂ ಜೀವದಿಂದಿರುವೆನು. ಇನ್ನು ಕೆಲವು ಕಾಲದಲ್ಲಿಯೇ ನೀವು ನಿಮ್ಮ ನೀಚಕೃತ್ಯಗಳಿಗೆ ಸರಿಯಾದ ಫಲವನ್ನು ಅನುಭವಿಸುವಿರಿ. ಮಧುಪ್ರಿಯನ ಸೋಗಿನಿಂದ ಬಂದು, ನಿನ್ನನ್ನು ವಂಚಿಸಿ, ನಿನ್ನಿಂದ ಲೆಖ್ಖ-ಪತ್ರಗಳ ಪುಸ್ತಕವನ್ನು ತೆಗೆದುಕೊಂಡು ಹೋಗಿರುವವನೇ ನಿನ್ನ ಪರಮ ವೈರಿ ರಾಕಾಚಂದ್ರನೆಂದು ತಿಳಿ"

ಇದನ್ನು ಓದುತ್ತಲೇ ಭೀಷಣನ ಕೈ-ಕಾಲುಗಳು ನಡುಗುವುದಕ್ಕೆ ಪ್ರಾರಂಭವಾದವು. ದೇಹಾದ್ಯಂತವೂ ಬೆವರಿತು. ಕಣ್ಣುಗಳು ಕತ್ತಲೆಗೂಡಿದವು. ಆದರೂ ಮನಸ್ಸನ್ನು ಸಮಾಧಾನಕ್ಕೆ ತಂದುಕೊಂಡು:—"ಪಾಪಿ! ರಾಕಾಚಂದ್ರ, ನೀನು ಪಾತಾಳವನ್ನು ಹೊಕ್ಕರೂ ಬಿಡದೆ, ನಿನ್ನನ್ನು ಹಿಡಿದು ನಿನ್ನ ಪ್ರಾಣವನ್ನು ಹೀರುವೆನು" ಎನ್ನುತ್ತಾ, ಮೇಲಕ್ಕೆದ್ದು ಮಲಗುವ ಕೋಣೆಗೆ ಹೋದನು.

# ಪರಿಚ್ಛೇದ ೧೦

ಮಟ ಮಟ ಮಧ್ಯಾಹ್ನ; ಸೂರ್ಯದೇವನು ನೆತ್ತಿಯ ಮೇಲಕ್ಕೆ ಬಂದಿರುವನು ಆತನ ಪ್ರಚಂಡವಾದ ಕಿರಣಗಳು ಪ್ರಪಂಚವನ್ನೆಲ್ಲ ದಹಿಸುತ್ತಿರುವುವೋ, ಎಂಬಂತೆ ತೋರುತ್ತಿರುವುದು. ಬಿಸಿಲಿನ ತಾಪಕ್ಕೆ ಬೆಂಡಾಗಿ ಹಕ್ಕಿ-ಪಕ್ಷಿಗಳು ಸಹ ಆಹಾರಾನ್ವೇಷಣವನ್ನು ಬಿಟ್ಟು, ಎಲೆಗಳ ಮರೆಯಲ್ಲಿ ಗಿಡ-ಮರಗಳ ಮೇಲೆ ಕುಳಿತಿರುವುವು ದಾರಿಯಲ್ಲಿನ ಧೂಳು ಕಾದು ಕೆಂಡದಂತಾಗಿ, ನಡೆಯುವವರ ಪಾದಗಳಲ್ಲಿ ಬೊಬ್ಬೆಗಳೇಳುವಂತೆ ಮಾಡುತ್ತಿರುವುದರಿಂದ, ಎಲ್ಲಿಲ್ಲಿಯೂ ಜನಗಳ ಸುಳಿದಾಟವೇ ಕಾಣುತ್ತಿಲ್ಲ ಇಂಥ ಸಮಯದಲ್ಲಿ ಸೋಮಪುರಕ್ಕೆ ಮೂರು ಮೈಲಿ ದೂರದಲ್ಲಿರುವ ಕಾಡಿನ ಮಧ್ಯಪ್ರದೇಶದಲ್ಲಿರುವ ಒಂದು ಹಾಳು ದೇವಾಲಯದಲ್ಲಿ ಮಾತ್ರ ಮೂವರು ಕುಳಿತುಕೊಂಡು ಮಾತನಾಡುತ್ತಿದ್ದಾರೆ ಎಲ್ಲೆಡೆಯಲ್ಲಿಯೂ ಭಾಸ್ಕರನ ತಾಪವು ಅತಿಯಾಗಿದ್ದರೂ, ಈ ಹಾಳು ದೇವಾಲಯದಲ್ಲಿ ಕುಳಿತಿರುವ ವ್ಯಕ್ತಿಗಳಿಗೆ ಮಾತ್ರ ಬಿಸಿಲಿನ ತಾಪವು ಸೋಂಕಿಲ್ಲದಂತೆ ಕಾಣುತ್ತೆ. ಇದು ಸಹಜವಾದದ್ದೆ. ಯಾಕೆಂದರೆ, ದೇವಾಲಯವು ಎತ್ತರವಾಗಿ ಬೆಳೆದು ನಿಂತಿರುವ ಮರಗಳ ಗುಂಪಿನಲ್ಲಿ ಅಡಗಿ ಹೋಗಿದೆ. ಸೂರ್ಯಕಿರಣಗಳು ಸಹ ಬೀಳದಷ್ಟು ದಟ್ಟವಾಗಿ ಮರಗಳು ಬೆಳೆದಿದ್ದು, ಮಂದಮಾರುತನಿಂದಲೂ, ಪಕ್ಷಿಗಳ ಕಲ-ಕಲ ರವದಿಂದಲೂ ಕೂಡಿ ಮನಸ್ಸಿಗೆ ಅತ್ಯಾನಂದವನ್ನುಂಟು ಮಾಡುತ್ತಿದೆ. ಆ ದೇವಾಲಯದಲ್ಲಿ ಕುಳಿತಿದ್ದ ಮೂರು ವ್ಯಕ್ತಿಗಳೂ ಸಂನ್ಯಾಸಿಗಳಂತೆ ಕಾಣುತ್ತಾರೆ ದೇವಸ್ಥಾನದ ಬಾಗಿಲು ಮುಚ್ಚಿ ಅವರಲ್ಲಿ ಈ ಕೆಳಗೆ ಹೇಳಿದಂತೆ ಸಂಭಾಷಣೆಯು ನಡೆಯುತ್ತಿದೆ:—

“ಬಲಭದ್ರ, ಹೇಗೂ ಮಧುಪ್ರಿಯನ ಸೋಗಿನಿಂದ ಹೋಗಿ ಭೀಷಣನನ್ನು ವಂಚಿಸಿದ್ದಾಯ್ತು. ಇನ್ನು ಗೋವಿಂದಲಾಲನನ್ನು

ಕೆಲವು ಕಾಲ ಈ ಗುಪ್ತ ಸ್ಥಳದಲ್ಲಿಯೇ ಇಟ್ಟಿದ್ದು, ವಿಕ್ರಮನ ಪತ್ರಿಯನ್ನು ಹಚ್ಚಿ, ಇವರೆಲ್ಲರನ್ನೂ ಒಟ್ಟಿಗೆ ಬಲೆಯಲ್ಲಿ ಹಾಕಿಕೊಳ್ಳುವುದುತ್ತಮ"

ಬಲಭದ್ರ:—ರಾಕಾಚಂದ್ರ, ವಿಕ್ರಮನು ಸಿಂಹಲಾಲನೆಂಬಭಿಧಾನದಿಂದ ಸುವರ್ಣಪುರದಲ್ಲಿ ಒಬ್ಬ ಧನಿಕನಾಗಿರುವನೆಂದು ನೀನೇ ಹೇಳಿದ್ದೆಯಲ್ಲವೆ?

ರಾಕಾಚಂದ್ರ:—ಹೌದು. ಯಾವ ದಿನ ರಾತ್ರಿ ಭೀಷಣನೊಡನೆ ಕುಳಿತುಕೊಂಡು ಮಾತನಾಡುತ್ತಿದ್ದನೊ, ಆ ದಿನ ಸಿಂಹಲಾಲನೆಂಬ ಹೆಸರಿನಿಂದ ಸುವರ್ಣಪುರದಲ್ಲಿದ್ದನು; ಆದರೆ ಈಗ ಅವರಿದ್ದ ಸ್ಥಳದಲ್ಲಿ ಬೇರೊಬ್ಬ ವರ್ತಕನಿರುವನು. ಅವನನ್ನು ವಿಚಾರಿಸಲು ಸಿಂಹಲಾಲನು ಎರಡು ದಿನಗಳ ಹಿಂದೆ ಎಲ್ಲಿಗೊ ಹೋದನೆಂದು ಹೇಳಿದನು. ನಮ್ಮ ಸುಳಿವನ್ನು ಅವನು ತಿಳಿದುಕೊಂಡೇ ಸುವರ್ಣಪುರವನ್ನು ಬಿಟ್ಟಿರಬಹುದು; ಇಲ್ಲವೆ ಬೇರೆ ಹೆಸರಿನಿಂದ ಅಲ್ಲಿಯೇ ಇರಬಹುದು. ಹೇಗಿದ್ದರೂ ಅವನ ಶೋಧವನ್ನು ಮಾಡಿಯೇ ಬಿಡುವೆನು. ಅದಿರಲಿ. ನೀನು ದೇವಿದಾಸನ ಬಳಿಗೆ ಹೋದ ವಿಚಾರವೇನಾಯಿತು?

ಬಲಭದ್ರ:— ನಾನು ಹಿಡಿದ ಕೆಲಸವು ವ್ಯರ್ಥವಾಗುವುದೆಂದು ಎಂದಿಗೂ ತಿಳಿಯಬೇಡ. ಸೋಮಚಂದ್ರನನ್ನೂ, ಅವನ ಮಾತಾ-ಪಿತೃಗಳನ್ನೂ ನನ್ನ ಸಂಗಡಲೇ ಕರೆದುಕೊಂಡು ಬಂದು, ನೀನು ಗೋವಿಂದಲಾಲನನ್ನು ಯಾವ ಕೋಣೆಯಲ್ಲಿ ಸುರಕ್ಷಿತವಾಗಿಟ್ಟಿರುವೆಯೋ, ಅಲ್ಲಿಯೇ ಬೇರೊಂದು ಕೋಣೆಯಲ್ಲಿ ಅವರನ್ನಿಟ್ಟಿರುವೆನು.

ರಾಕಾಚಂದ್ರ:—ಅವರೆಲ್ಲರ ಆಹಾರ ಪಾನೀಯವೇ ಮೊದಲಾದ ಸಕಲ ಸೌಕರ್ಯಗಳ ವಿಚಾರದಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡಿರುವೆಯಷ್ಟೆ?

ಬಲಭದ್ರ:—ಆ ವಿಚಾರಗಳೆಲ್ಲವೂ ಚಂಚಲೆಗೆ ಸೇರಿದವುಗಳು.

ರಾಕಾಚಂದ್ರ:—ನಿಜ, ನಿಜ. ಚಂಚಲೆಯು ಎಲ್ಲಿರುವಳು?

ಬಲಭದ್ರ:— ನೀನು ಬರುವುದಕ್ಕೆ ಕೊಂಚ ಮುಂಚಿತವಾಗಿ ಮಂಥರೆಯನ್ನು ಕಂಡು ಮಹೇಂದ್ರನ ಮೋಸವನ್ನು ಅವಳಿಗೆ ಸೂಕ್ಷ್ಮವಾಗಿ ತಿಳಿಸುವುದಕ್ಕೋಸ್ಕರ ಹೋಗಿರುವಳು.

ರಾಕಾಚಂದ್ರ:— ಭಲೆ! ಭಲೆ! ಚಂಚಲೆಯು ಸಾಮಾನ್ಯಳಲ್ಲ. ನನಗೆ ನನ್ನ ವೈರಿಗಳ ಮೇಲಿರುವ ಸೇಡನ್ನು ತೀರಿಸಲು ತಾನೂ ಸಹಾಯಕಳಾಗಿ ಹೊರಟಿರುವಳೆ? ಬಲಭದ್ರ, ನಿನ್ನಂಥ ಆಪ್ತನೂ, ಚಂಚಲೆಯಂಥ ಸತಿಯೂ ದೊರೆತಿರಲು ಈ ರಾಕಾಚಂದ್ರನ ಕಾರ್ಯಗಳಿಗೆ ವಿಘ್ನವುಂಟಾಗುವುದು ತಾನೆ ಎಲ್ಲಿ? ನನ್ನ ಹಠವು ಸಾಧಿಸಿತೆಂದೇ ತಿಳಿಯುವೆನು. ಇನ್ನು ಭೀಷಣ, ವಿಕ್ರಮ ಮತ್ತು ಮಹೇಂದ್ರರ ಆಯುಜ್ಯೋತಿಯು ನಂದಿಹೋಗುವ ಕಾಲವು ಸಮೀಪಿಸಿತೆಂದೇ ಈ ನಮ್ಮ ನಿರ್ವಿಘ್ನವಾದ ಕಾರ್ಯಕ್ರಮದಿಂದ ಗೊತ್ತಾಗುತ್ತಿರುವುದು. ವಿಕ್ರಮನನ್ನು ಬಲೆಯಲ್ಲಿ ಹಾಕಿಕೊಂಡು ಮೂವರನ್ನೂ ಏಕಕಾಲದಲ್ಲಿ ನ್ಯಾಯಸ್ಥಾನದಲ್ಲಿ ನಿಲ್ಲಿಸಿ, ಅವರವರ ಅಪರಾಧಗಳಿಗನುಗುಣವಾದ ಶಿಕ್ಷೆಯು ವಿಧಿಸಲ್ಪಡುವಂತೆ ಮಾಡುವುದೊಂದೇ ನಮ್ಮ ಕೆಲಸವಾಗಿ ಉಳಿದಿರುವುದು. ಇನ್ನು ಹೋಗಿ ಸೋಮಚಂದ್ರನೇ ಮೊದಲಾದವರ ಯೋಗಕ್ಷೇಮವನ್ನು ವಿಚಾರಿಸಿ ಮುಂದಿನ ಕರ್ತವ್ಯವನ್ನು ಆಲೋಚಿಸೋಣ.

---

## ಪರಿಚ್ಛೇದ ೧೧

ಯಾವ ದಿನ ಬಲಭದ್ರನು ಉಪೇಂದ್ರನಾಮಕದಿಂದ ದೇವಿದಾಸನ ಬಳಿಗೆ ಬಂದು ಅವನನ್ನು ವಂಚಿಸಿ ಸೋಮಚಂದ್ರನೇ ಮೊದಲಾದವರನ್ನು ಬಿಡಿಸಿಕೊಂಡು ಹೊರಟು ಹೋದನೋ, ಆ ದಿನ ಬೆಳಿಗ್ಗೆ ಮಹೇಂದ್ರ ಉರ್ಫ ಚಿಂತಾಸಾಗರನು ದೇವೀದಾಸನ ಭೇಟಿಗೆ ಬಂದನು. ಇವನನ್ನು ನೋಡುತ್ತಲೆ ದೇವಿದಾಸನಿಗೆ ಅಪರಿ

ಮಿತವಾದ ಸಂತೋಷವಾಗಿ ಅವನನ್ನು ಹೆಳಗೆ ತನ್ನ ಕೋಣೆಯಲ್ಲಿ ಕುಳ್ಳಿರಿಸಿಕೊಂಡು:-"ಚಿಂತಾಸಾಗರ, ನೀನು ನನ್ನ ವಿಷಯದಲ್ಲಿ ಅತ್ಯಂತ ಉತ್ಸಾಹದಿಂದ ಕೆಲಸ ಮಾಡುತ್ತಿರುತ್ತೀ ಎಂದು ತಿಳಿದಿದ್ದರೂ, ನನಗೆ ನೀನು ನಿನ್ನೆ ದಿನ ಮಾಡಿದ ಉಪಕಾರವನ್ನು ಸ್ಮರಿಸಿಕೊಂಡರೆ, ಆ ಜನ್ಮವೂ ನಿನ್ನ ದಾಸಾನುದಾಸನಾಗಿರಬೇಕೆಂಬ ಕೃತ ಕೃತಜ್ಞತಾ ಬುದ್ಧಿಯು ನನ್ನಲ್ಲಿ ಉಂಟಾಗುತ್ತಿರುವುದು!"

ಚಿಂತಾಸಾಗರ:-ದೇವಿದಾಸ, ನೀನು ಹೇಳುತ್ತಿರುವ ಮಾತುಗಳು ನನಗೆ ಅರ್ಥವಾಗುತ್ತಿಲ್ಲವಲ್ಲ? ನಿನ್ನೆಯ ದಿನ ನಾನು ನಿನಗೆ ಮಾಡಿದ ಅಂಥ ಮಹೋಪಕಾರ ತಾನೆ ಯಾವುದು?

ದೇವಿದಾಸ:— ಇದೇನು, ಹೀಗೆ ಹೇಳುತ್ತಿರುವೆ? ಯಾವ ನಿನ್ನ ಸಹೋದರನೂ ಚಂದ್ರಚೂಡನ ಮಂತ್ರಿಯೂ ಆಗಿರುವ ಉಪೇಂದ್ರನನ್ನು ನನ್ನ ಬಳಿಗೆ ಕಳುಹಿಸಿದಲ್ಲಿಲ್ಲವೇ?

ಚಿಂತಾಸಾಗರ:—ದೇವಿದಾಸ, ನೀನು ಆಡುತ್ತಿರುವ ಪ್ರತಿಯೊಂದು ಮಾತೂ ನನಗೆ ಹೊಸದಾಗಿ ಕಾಣುತ್ತಿರುವುದಲ್ಲ! ಉಪೇಂದ್ರನು ನನ್ನ ಸಹೋದರನೆ? ನಾನು ಅವನನ್ನು ನಿನ್ನ ಬಳಿಗೆ ಕಳುಹಿಸಿದ್ದನೇ? ಇಲ್ಲ ಉಪೇಂದ್ರನಿಗೂ, ನನಗೂ ಪರಿಚಯವೇ ಇಲ್ಲವಲ್ಲ? ಮಂತ್ರಿ ಪದವಿಯಲ್ಲಿರುವ ಮತ್ತು ಚಂದ್ರಚೂಡನಿಗೆ ಬಹಿಃಪ್ರಾಣವಾಗಿರುವ ಉಪೇಂದ್ರನು ನಿನ್ನಲ್ಲಿಗೆ ಬಂದಿದ್ದನೆಂದರೆ, ಹೇಗೆ ತಾನೆ ನಂಬಲಿ? ಅದರಲ್ಲೂ ನನ್ನಿಂದ ಕಳುಹಲ್ಪಟ್ಟಿದ್ದನೆಂದು ಹೇಳುತ್ತಿರುವೆ? ಇದಂತೂ ಸರ್ವಥಾ ನಿಜವಲ್ಲ. ಇರಲಿ. ಇದರಲ್ಲೇನೋ ಮೋಸವಿದ್ದಂತೆ ತೋರುತ್ತೆ. ಉಪೇಂದ್ರನು ಬಂದು ಯಾವ ವಿಷಯವನ್ನು ತಿಳಿಸಿದನು? ಏನಾಯಿತು? ಎಂಬುದನ್ನಾದರೂ ದಯವಿಟ್ಟು ಬೇಗನೆ ತಿಳಿಸು

'ಮೋಸ'ಎಂಬ ಪದವು ದೇವಿದಾಸನ ಕಿವಿಗೆ ಬೀಳುತ್ತಲೆ ಅವನು ತನ್ನ ಘಾತವೇ ಆಯಿತೆಂದು ಬೆದರಿದನು. ಮಾತನಾಡಲು ನಾಲಿಗೆಯೇ ಬಾರದಾಯ್ತು. ಇವನ ಸ್ಥಿತಿಯನ್ನು ನೋಡಿ ಚಿಂತಾಸಾಗರನೂ

ಹೆದರಿದನು ದೇವಿದಾಸನನ್ನು ಕುರಿತು:—"ದೇವಿದಾಸ, ಏನಾಯಿತೆಂಬದನ್ನು ಬಾಯಿ ಬಿಟ್ಟು ಹೇಳಬಾರದೇ?" ಎಂದು ಮತ್ತೊಂದು ಬಾರಿ ಕೇಳಿದನು ದೇವಿದಾಸನಾದರೊ ತನ್ನ ಹಿಂಬದಿಯ ಕಪಾಟಿನಲ್ಲಿಟ್ಟಿದ್ದ ಪತ್ರವೊಂದನ್ನು ತೆಗೆದು, ಚಿಂತಾಸಾಗರನ ಕೈಲಿ ಕೊಟ್ಟನು. ಅವನು ನಡುಗುವ ಕೈಗಳಿಂದ ಆ ಪತ್ರವನ್ನು ಬಿಚ್ಚಿ ಓದಿದನು. ಪತ್ರದಲ್ಲಿ ಬರೆದಿದ್ದ ಆ ಬರವಣಿಗೆಯು ತನ್ನ ಬರವಣಿಗೆಯನ್ನೇ ಹೋಲುತ್ತಿದ್ದಂತೆ ತೋರಿತು. ಪತ್ರವನ್ನು ಓದಿ ಮುಗಿಸಿ: "ದೇವಿದಾಸ, ಈ ದಿನ ನೀನು ಹೇಳುತ್ತಿರುವ ಮಾತುಗಳನ್ನೂ, ಕೊಟ್ಟಿರುವ ಪತ್ರವನ್ನೂ ನೋಡಿದರೆ, ನಮ್ಮಿಬ್ಬರ ಅಂತ್ಯವು ಬೇಗನೆ ಆಗಬಹುದೆಂದು ಕಾಣುತ್ತೆ.

ದೇವಿದಾಸ:—ಏನು? ನಾನು ಮೋಸ ಹೋಗಿರುವೆನೇ? ಈ ಪತ್ರವು ನೀನು ಬರೆದಿದ್ದಲ್ಲವೇ?

ಚಿಂತಾಸಾಗರ:—ಖಂಡಿತವಾಗಿಯೂ ನೀನು ಮೋಸ ಹೋಗಿರುವೆ? ಇರಲಿ, ಮತ್ತೇನು ಸಮಾಚಾರ?

ದೇವಿದಾಸ:—ಸೋಮಚಂದ್ರನೂ, ಅವನ ಮಾತಾ-ಪಿತೃಗಳೂ ಜೀವದಿಂದಿದ್ದರೆ ನಿನ್ನ ಪರಿಣಾಮವು ನೆಟ್ಟಗಾಗುವುದಿಲ್ಲವೆಂದೂ, ಅವರ ಸಮಾಚಾರವನ್ನು ತಾನು ತೆಗೆದುಕೊಳ್ಳುವೆನೆಂದೂ ಹೇಳಿ, ನನ್ನ ವಶದಲ್ಲಿದ್ದ ಅವರನ್ನು ಕರೆದುಕೊಂಡು ಹೋದನು "ಸೋಮಚಂದ್ರನೇ ಮೊದಲಾದವರನ್ನು ಕರೆದುಕೊಂಡು ಹೋದನು" ಎಂಬ ವಾಕ್ಯವನ್ನು ಕೇಳುತ್ತಲೇ ಚಿಂತಾಸಾಗರನ ತಲೆಯು ತಿರುಗಲಾರಂಭವಾಯ್ತು. ಸಹಸ್ರ ಚೇಳುಗಳು ಏಕಕಾಲದಲ್ಲಿ ಕುಟುಕಿದರೆ, ಉಂಟಾಗುವಷ್ಟು ಯಾತನೆಯುಂಟಾಯಿತು. ಇನ್ನು ಪೀಠದ ಮೇಲೆ ಕುಳಿತಿರಲಾರದೆ ಹೋದನು. ನೆಲದ ಮೇಲೆ ಕುಳಿತುಬಿಟ್ಟನು ದೇವಿದಾಸನನ್ನು ಕುರಿತು:—"ಪ್ರಾಣಾಪ್ತನೆಂದು ನಿನ್ನನ್ನು ನಂಬಿದ್ದಕ್ಕೆ ನಾನು ನನ್ನ ವೈರಿಗಳ ಸಂಧಾನಾಗ್ನಿಗೆ ಆಹುತಿಯಾಗಬೇಕಾಗಿ ಬಂದಿತು. ಶತ್ರುಗಳಿಂದ ಆವರಿಸಲ್ಪಟ್ಟಿದ್ದಾಗ್ಯೂ ಉಪೇಂದ್ರ ನಾಮ

ಕನಾದ ಪ್ರಬಲ ಶತ್ರುವಿನ ಮಾತಿಗೆ ಬೆರಗಾಗಿ, ನನ್ನನ್ನು ಕಷ್ಟಕ್ಕೀಡುಮಾಡಿದೆ. ನೀನು ಬುದ್ಧಿವಂತನೆಂದೂ, ನೀಚರ ಕೃತ್ರಿಮೋಪಾಯಗಳಿಗೆ ಸೊಪ್ಪು ಹಾಕದವನೆಂದೂ ನಂಬಿ, ನಿನ್ನಲ್ಲಿ ಆ ಸೋಮಚಂದ್ರನೇ ಮೊದಲಾದವರನ್ನು ಬಿಟ್ಟು ಹೋಗಿದ್ದೆನಲ್ಲದೆ, ನಿನ್ನ ಈ ಮಂಕುತನವು ನನಗೆ ಮೊದಲೇ ತಿಳಿದಿದ್ದ ಭಾಗದಲ್ಲಿ ಅವರನ್ನು ಈ ಮುಂಚೆಯೇ ಯಮಲೋಕಕ್ಕಟ್ಟುತ್ತಿದ್ದೆ. ದೇವಿದಾಶ, ಇನ್ನು ನೀನು ನನ್ನ ಸ್ವಾಸ್ಥ್ಯವನ್ನು ಸಂಪಾದಿಸುವ ಹಂಬಲವನ್ನು ಬಿಡು. ನೀನು ಮಹಾ ದುರದೃಷ್ಟನು. ನಿನ್ನ ಉನ್ನತಿಗಾಗಿ ಮಾಡಿದ ಪ್ರಯತ್ನಗಳೂ, ಒಡ್ಡಿದ ಬಲೆಗಳೂ ಎಲ್ಲವೂ ಹಾಳಾದವು. ವೈರಿಗಳು ನಮ್ಮ ಮೇಲೆ ಸೇಡನ್ನು ತೀರಿಸಿಕೊಳ್ಳದೆ ಬಿಡರು. ಮಂಥರೆಗೆ ನಾನು ಮಾಡಿದ ಮೋಸವೇನಾದರೂ ತಿಳಿದ ಭಾಗದಲ್ಲಿ ಅವಳು ಜೀವದಿಂದಿರಲಾರಳು. ಯಾವ ನನ್ನ ಶತ್ರುಗಳನ್ನು ಚಿಂತಾಸಾಗರದಲ್ಲಿ ಮುಳುಗಿಸಬಲ್ಲೆನೆಂದು ಧೈರ್ಯವಾಗಿದ್ದೆನೋ, ಆ ನಾನೇ ಇಂದು ವಿಪತ್ಪರಂಪರೆಗಳ ಸುಳಿಯಲ್ಲಿ ಸಿಕ್ಕಿಕೊಂಡು ನರಳಬೇಕಾಗಿರುವುದು. (ಸ್ವಲ್ಪ ಧೈರ್ಯವನ್ನು ತಂದುಕೊಂಡು) ಛೆ, ಹೆಂಗಸಿನಂತೆ ನಾನೇಕೆ ಅಧೀರನಾಗಬೇಕು? ಸಾಧ್ಯವಾದಷ್ಟು ಪ್ರಯತ್ನವನ್ನು ಮಾಡಿ ಈ ಮೋಸವನ್ನು ಮಾಡಿದ ದ್ರೋಹಿಯನ್ನು ಕಂಡು ಹಿಡಿದು, ಅವನಿಗೆ ಸರಿಯಾದ ಶಿಕ್ಷೆಯನ್ನೇ ವಿಧಿಸುವೆನು. ಮಂಥರೆಗೆ ಈ ನನ್ನ ಮೋಸವು ಗೊತ್ತಾಗದಂತೆ ಮಾಡುವೆನು. ಆಕೆಯನ್ನು ಎಲ್ಲಿಗೂ ಹೋಗಗೊಡೆನು. ಯಾರೊಡನೆಯೂ ಮಾತನಾಡದಂತೆ ಮಾಡುವೆನು. ಇದನ್ನು ಆಕೆಗೆ ತಿಳಿಯದಂತೆ ಮಾಡಿ, ಆಕೆಯ ಬಳಿಗೆ ಯಾರೂ ನನ್ನಪ್ಪಣೆಯಿಲ್ಲದೆ ಬಾರದಂತೆ ಮಾಡುವೆನು. ದೇವಿದಾಸ, ಆದದ್ದಾಗಿ ಹೋಯಿತು. ಇನ್ನಾದರೂ ಎಚ್ಚರಿಕೆಯಿಂದಿರು" ಎಂದು ಹೇಳಿದವನೇ ಅಲ್ಲಿಂದ ಹೊರಕ್ಕೆ ಬಂದು, ತನ್ನ ಗಾಡಿಯಲ್ಲಿ ಕುಳಿತುಕೊಂಡು ಎತ್ತಲೋ ಹೊರಟು ಹೋದನು.

# ಪರಿಚ್ಛೇದ ೧೨

ಪ್ರಶ್ನೆ:—ಮಂಥರಾಬಾಯಿಯವರು ಒಳಗಿರುವರೇ?

ಉತ್ತರ:—ಇರುವರು.

ಪ್ರಶ್ನೆ:—ಅವರನ್ನು ನೋಡಲು ಅವಕಾಶವಿದೆಯೆ?

ಉ:—ಅವರನ್ನು ಯಾರೂ ನೋಡುವುದಕ್ಕೆ ಅವಕಾಶವಿಲ್ಲ.

ಪ್ರಶ್ನೆ:—ಏತಕ್ಕಾಗಿ?

ಉತ್ತರ:—ಆ ಪ್ರಶ್ನೆಗೆ ಉತ್ತರವನ್ನು ಹೇಳಲಾರೆ.

ಪ್ರಶ್ನೆ:—ಹಾಗಾದರೆ ಈ ಕಾಗದವನ್ನಾದರೂ ಅವರಿಗೆ ಕೊಡುವಿಯಾ?

ಉತ್ತರ:—ಅದೂ ಆಗಲಾರದು.

ಪ್ರಶ್ನೆ:— ಆಕೆಯ ಸ್ನೇಹಿತಳು ಈ ಕಾಗದವನ್ನು ಕೊಟ್ಟು ಬಾ, ಎಂದು ಕಳುಹಿಸಿರುವಳು ನಿನಗೆ ಇದರಿಂದ ಯಾವ ತೊಂದರೆಯೂ ಉಂಟಾಗುವುದಿಲ್ಲ ದಯುವಿಟ್ಟು ನನ್ನ ಕೋರಿಕೆಯನ್ನು ನಡೆಸಿಕೊಡಲಾರೆಯಾ?

ಉತ್ತರ:—ಯಾರಿಂದ ಕಾಗದವು ಬಂದಿದ್ದಾಗೂ, ವಿಷಯವು ಮಹತ್ವದ್ದಾಗಿದ್ದರೂ ಅಮ್ಮನವರ ಬಳಿಗೆ ಯಾರನ್ನೂ ನನ್ನ ಅಪ್ಪಣೆಯಿಲ್ಲದೆ ಕರೆದುಕೊಂಡು ಹೋಗಕೂಡದೆಂದೂ, ಯಾವ ಪತ್ರವನ್ನೂ ಮುಟ್ಟಿಸಕೂಡದೆಂದೂ ರಾಯರು ನನಗೆ ಆಜ್ಞೆ ಮಾಡಿರುವರು. ಆದುದರಿಂದ ನಿನ್ನ ಪ್ರಾರ್ಥನೆಯನ್ನು ನೆರವೇರಿಸಲಾರೆ ರಾಯರು ಬರುವ ವೇಳೆಯಾಯಿತು ಇಲ್ಲಿಂದ ಹೊರಟು ಹೋಗು.

ಈ ರೀತಿ ನಿದಾರ್ಕ್ಷಿಣ್ಯವಾಗಿ ಹೇಳುತ್ತಿದ್ದ ಸೇವಕನ ಕೈಲಿ ದಾದಿಯ ವೇಷದಿಂದ ಒಂದು ಪ್ರಶ್ನೆಮಾಡುತ್ತಿದ್ದ ನಮ್ಮ ಕಥಾನಾಯಕಿ ಚಂಚಲೆಯು ಹಿಂದು ರೂಪಾಯಿಯನ್ನಿಟ್ಟಳು. ನಾಣ್ಯವು ಕೈಗೆ ಬಂದದ್ದನ್ನು ನೋಡಿ ಸಂತೋಷಭರಿತನಾಗಿ ಪತ್ರವನ್ನು ಮಂಥರೆಗೆ ಮುಟ್ಟಿಸುವೆನೆಂದು ಹೇಳಿ, ಅದನ್ನು ಆಕೆಯಿಂದ ತೆಗೆದುಕೊಂಡು ಒಳಕ್ಕೆ ಹೋ

ದನು. ಅವನು ಹಿಳಕ್ಕೆ ಹೋಗುತ್ತಲೆ, ಚಂಚಲೆಯು ಶೀಘ್ರಗತಿಯಿಂದ ಅಲ್ಲಿಂದ ಹೊರಟು ಹೋದಳು. ಸೇವಕನು ಪತ್ರವನ್ನು ತಂದು ಕೊಡುವ ಕಾಲಕ್ಕೆ ಮಂಥರೆಯು ನಿನ್ನಿನ ರಾತ್ರಿ ತನಗಾದ ದುಃಸ್ವಪ್ನಗಳ ವಿಚಾರವನ್ನು ತನ್ನ ಸಖಿಯಾದ ಊರ್ಮಿಳೆಗೆ ಹೇಳುತ್ತ, ಆಗಾಗ ಕಣ್ಣೀರು ಸುರಿಸುತ್ತಿದ್ದಳು. ಸೇವಕನು ಹಿಳಕ್ಕೆ ಬಂದು ಪತ್ರವನ್ನು ಅಕೆಯ ಮುಂದಿಟ್ಟು ದೂರದಲ್ಲಿ ಹೋಗಿ ನಿಂತುಕೊಂಡನು.

ಮಂಥರೆಯು ಪತ್ರವನ್ನು ಕೈಲಿ ತೆಗೆದುಕೊಂಡು:--"ಇದನ್ನು ಯಾರು ಕೊಟ್ಟರು?" ಎಂದು ಕೇಳಿದಳು.

ಸೇವಕ:—ಹಿಬ್ಬ ಹೆಂಗಸು ಇದನ್ನು ತಂದು ಕೊಟ್ಟಳು.

ಮಂಥರೆ:—ಅಕೆಯನ್ನು ಹಿಳಕ್ಕೆ ಕರೆ.

ಸೇವಕನು ಹೊರಗೆ ಹೋಗಿ ನೋಡಿ, ಅಕೆಯು ಹೊರಟು ಹೋಗಿರುವಳೆಂದು ತಿಳಿಸಿದನು.

ಮಂಥರೆಯು ಪತ್ರವನ್ನು ಬಿಚ್ಚಿ ಓದಿದಳು ಅವಳ ಮುಖದಲ್ಲಿ ಕ್ಷಣಕ್ಷಣಕ್ಕೆ ತೋರುತ್ತಿರುವ ಬದಲಾವಣೆಗಳನ್ನು ನೋಡಿದರೆ, ಯಾವುದೋ ಒಂದು ಮಹತ್ತರವಾದ ವಿಷಯವು ಪತ್ರದಲ್ಲಿ ಉಲ್ಲೇಖಿಸಿದ್ದಂತೆ ಭಾಸವಾಗುತ್ತಿತ್ತು ಒಂದು ಬಾರಿ ನಿಟ್ಟುಸಿರ್ಗರೆವಳು. ಮತ್ತೊಂದು ಬಾರಿ ಕ್ರೋಧದಿಂದ ಕಣ್ಣುಗಳು ಕೆಂಪಡರುವುವು. ತುಟಿಗಳು ನಡುಗುವುವು. ಹಲ್ಲುಗಳ ಕಟಕಟ ಧ್ವನಿಯು ಸ್ಪಷ್ಟವಾಗಿ ಕೇಳಿಸುವುದು. ಇನ್ನೊಂದು ಬಾರಿ ದುಃಖದಿಂದ ಕಣ್ಣೀರ್ಗರೆವಳು. ಈ ವಿಧವಾದ ಅನೇಕ ಭಾವಗಳ ತರಂಗಗಳು ಅವಳ ಮನಸ್ಸಮುದ್ರದಲ್ಲಿ ಏರಿ ಇಳಿವಂತೆ ಅವಳ ಮುಖಚರ್ಯೆಯಿಂದ ಗೊತ್ತಾಗುವುದು. ಹಾಗಾದರೆ ಪತ್ರದಲ್ಲಿರುವುದೇನು? ಇದನ್ನು ತಿಳಿಯುವುದಕ್ಕಾಗಿ ನಮ್ಮ ವಾಚಕವರ್ಗವು ಹಾತೊರೆಯುತ್ತಿರುವುದಲ್ಲವೆ? ಅದಕ್ಕಾಗಿ ಪತ್ರದಲ್ಲಿ ಬರೆದಿರುವ ವಿಷಯವನ್ನು ಈ ಕೆಳಗೆ ಬರೆದಿರುವೆವು. ದಯವಿಟ್ಟು ಓದೋಣವಾಗಲಿ.

"ಮಂಧರೆ, ನಿನ್ನನ್ನು ಏನೆಂದು ಸಂಬೋಧಿಸಬೇಕೆಂಬುದೇ ತಿಳಿಯೆನು! 'ಅಭಾಗಿನಿ' ಎಂದು ಸಂಬೋಧಿಸುವೆನೆಂದರೆ, ಮೋಸಕ್ಕೆ ಸಿಕ್ಕಿ ಮೋಹದ ಪತಿಯಿಂದ ಬೇರ್ಪಡಿಸಲ್ಪಟ್ಟವಳಾದರೂ ಅದನ್ನರಿಯದೆ, ಇರುವವನೇ ಪತಿದೇವನೆಂದು ನಂಬಿ, ಅವನೊಡನೆ ಸುಖಸಾಮ್ರಾಜ್ಯವನ್ನನುಭವಿಸುತ್ತಿರುವೆ! 'ಅದೃಷ್ಟಹೀನೆ' ಎಂದು ಕರೆಯೋಣವೆಂದರೆ, ಅಷ್ಟೈಶ್ವರ್ಯಸಂಪನ್ನೆಯಾಗಿ ಸ್ವರ್ಣಪುರಾಧೀಶ ಮಹೇಂದ್ರನ ಪತ್ನಿಯಾಗಿರುವೆ. ಆದುದರಿಂದ ನಿನ್ನ ಹೆಸರಿಗೆ ಯಾವ ವಿಶೇಷಣವನ್ನೂ ಸೇರಿಸದೆ, ನಿನಗೆ ತಿಳಿಸಬೇಕೆಂದಿರುವ ಕೆಲವಂಶಗಳನ್ನು ನಿನ್ನ ಅವಗಾಹನೆಗೆ ತರುವೆನು. ಇದರಿಂದ ನೀನು ಎಂಥ ಸಂಕಟದಲ್ಲಿ ಬಿದ್ದೆಯೆಂಬುದನ್ನು ತಿಳಿ.

ಮಂಧರೆ,

ನೀನು ಪತಿಯೆಂದು ನಂಬಿರುವ ಮಹೇಂದ್ರನು ಸೋಮಚಂದ್ರನಲ್ಲ. ಇವನು ಸುವರ್ಣಪುರದಲ್ಲಿರುವ ದೇವಿದಾಸನ ಮಿತ್ರ ಚಿಂತಾಸಾಗರನು. ಇವನು ಅಜ್ಞಾತ ಕುಲ-ಗೋತ್ರನು. ತಾನೇ ಸೋಮಚಂದ್ರನೆಂದೂ, ತನ್ನನ್ನು ಚಿಕ್ಕಂದಿನಿಂದಲೂ ಮಹೇಂದ್ರನೆಂದು ಕರೆಯುತ್ತಿದ್ದುದರಿಂದ ಆ ಹೆಸರಿನಿಂದಲೂ ತಾನು ಕರೆಯಲ್ಪಡುತ್ತಿರುವೆನೆಂದೂ ನಿನ್ನಲ್ಲಿ ಹೇಳಿಕೊಂಡಿರುವನು. ನೀನು ಸೋಮಚಂದ್ರನನ್ನು ಪ್ರೀತಿಸಿ, ಅವನನ್ನೇ ವರಿಸಬೇಕೆಂದು ಹಠಹಿಡಿದಿರುವ ವಿಚಾರವನ್ನು ದೇವಿದಾಸನ ಪುತ್ರನಿಗೆ ತಿಳಿಸಿದನು. ಸೋಮಚಂದ್ರನನ್ನು ಯಾವಾಗಲೂ ನೋಡದೆ ಇದ್ದ ನೀನು ಆತನಿಗಿರುವ ಐಶ್ವರ್ಯವನ್ನು ಕೇಳಿ, ಆ ಸಂಪತ್ತಿಗೋಸ್ಕರ ಅವನನ್ನು ಮದುವೆಯಾಗುವೆಯೆಂಬ ವಿಚಾರವು ಇವರಿಬ್ಬರಿಗೆ ತಿಳಿಯಿತು. ಮದುವೆಯನ್ನು ನಿನ್ನ ತಂದೆ ತಾಯಿಗಳು, ಸೋಮಚಂದ್ರನ ತಂದೆ-ತಾಯಿಗಳು ಒಟ್ಟಿಗೆ ಕಲೆತು ನಿಷ್ಕರ್ಷೆ ಮಾಡಲಿಲ್ಲ. ಎಲ್ಲವೂ ಪತ್ರಮುಖೇನ ನಡೆಯಿತು. ಇದು ಇವರ ನೀಚ ಕೃತ್ಯಕ್ಕೆ ಸಹಕಾರಿಯಾಯಿತು. ಮದುವೆಗೆಂದು ಸೋಮಚಂದ್ರನು ಅವನ ತಂದೆ-ತಾಯಿಗಳೊಡನೆ ಹೋಗುತ್ತಿರಲು,

ಇವರ ಸಂಚಿನಿಂದ ಅವರೆಲ್ಲರೂ ಸೆರೆಹಿಡಿಯಲ್ಪಟ್ಟು ಗುಪ್ತನಾಗಿಡಲ್ಪಟ್ಟರು ತಾನೇ ಸೋಮಚಂದ್ರನೆಂದು ಹೋಗಿ ಚಿಂತಾಸಾಗರನು ನಿನ್ನನ್ನು ಮದುವೆಯಾಗಿ ತನ್ನ ಕಾಮವಾಸನೆಯನ್ನು ಪೂರೈಸಿಕೊಂಡನು. ಆತನ ಅಭಿಪ್ರಾಯದಂತೆ ದೇವಿದಾಸನು ನಿನ್ನ ಮಾತಾ-ಪಿತೃಗಳನ್ನು ಯಮಲೋಕಕ್ಕಟ್ಟಿ, ಕಳ್ಳರಿಂದ ಕೊಲ್ಲಲ್ಪಟ್ಟರೆಂಬ ಸುಳ್ಳು ಸುದ್ದಿಯನ್ನು ಹರಡಿಸಿದನು ನಿನ್ನ ಪತಿಯೆಂದೆನಿಸಿಕೊಳ್ಳುವ ಈ ಯಮಘಾತುಕ ಮಹೇಂದ್ರನೇ ನನಗೂ ನನ್ನ ಪತಿಗೂ ಅನೇಕ ಸಂಕಟಗಳನ್ನುಂಟು ಮಾಡಿರುವನು; ಆದರೆ ಈ ನೀಚನು ತನ್ನ ನೀಚ ಕೃತ್ಯಗಳಿಗೆ ಇಷ್ಟರಲ್ಲಿಯೇ ಫಲವನ್ನನುಭವಿಸುವನು. ಪತಿಯು ಎಂಥವನೇ ಆಗಲಿ, ಅವನೇ ಸ್ತ್ರೀಯರಿಗೆ ದೈವಸ್ವರೂಪಿಯು. ಆತನ ನಿಂದೆಯನ್ನು ಮಾಡುವುದು ಪತಿವ್ರತೆಯರಿಗೆ ಅನ್ಯಥಾ ಯೋಗ್ಯವಾದುದಲ್ಲ; ಆದರೆ ನನಗೇತಕ್ಕೆ ಈ ವಿಷಯವನ್ನು ತಿಳಿಸಿ, ನನ್ನ ಪತಿಯ ವಿಷಯದಲ್ಲಿ ನನ್ನ ಮನಸ್ಸು ಬೇರ್ಪಡುವಂತೆ ಮಾಡಿದುದು? ಎಂದು ನೀನು ಅಂದುಕೊಳ್ಳಬಹುದು. ಸತಿಯಾದ ನೀನು ಪತಿಗೆ ಕಾಲೋಚಿತವಾಗಿ ಕೆಲವು ಬುದ್ಧಿವಾದದ ಮಾತುಗಳನ್ನು ಹೇಳಿ, ಆತನ ಪಾಪಮಯವಾದ ಮನಸ್ಸಿಗೆ ಪಶ್ಚಾತ್ತಾಪವೆಂಬ ಔಷಧಿಯನ್ನು ಹಾಕಿ, ಇನ್ನು ಮುಂದಾದರೂ ಸನ್ಮಾರ್ಗಗಾಮಿಯಾಗುವಂತೆ ಮಾಡಬಹುದೆಂಬ ಊಹೆಯಿಂದಲೇ ನಿನ್ನ ಪತಿಯ ಮೋಸ, ಅತ್ಯಾಚಾರ, ಅಧರ್ಮಾಚರಣೆಗಳ ಪಟ್ಟಿಯೊಂದನ್ನು ನಿನ್ನ ಮುಂದೆ ಇಟ್ಟಿರುವೆನು. ಇನ್ನು ನಿನಗೆ ತೋಚಿದಂತೆ ಮಾಡು ''

ನಿನ್ನ ಹಿತಾಕಾಂಕ್ಷಿ,

............

ಪತ್ರವನ್ನು ಪದೇಪದೇ ಓದಿದಳು ಹಿಂದೊಂದು ಬಾರಿ ಓದಿದರೆ, ಮನಸ್ಸು ಹಿಂದೊಂದು ವಿಧವಾಗುವುದು. ಕೋಣೆಯಲ್ಲಿದ್ದ ತನ್ನ ಸಖಿಯನ್ನು ಕಳುಹಿಸಿಕೊಟ್ಟು, ಕೋಣೆಯ ಬಾಗಿಲ-ಅಗಳಿಯನ್ನು ಹಾಕಿ, ತನ್ನ ದುರವಸ್ಥೆಗಾಗಿ ಬಹಳ ಅತ್ತಳು. ತನ್ನ ಪತಿಯು

ಮೋಸ ಮಾಡಿರುವನೇ? ನಾನು ಮೋಸ ಹೋದೆನೇ? ಒಂದು ಸಲ ಇದು ಅಸಂಭವವೆಂದು ನಿರ್ಧರಿಸುವಳು. ಈಗ ಕೆಲವು ದಿನಗಳಿಂದ ಪತಿಯು ಅನುರಾಗವು ತನ್ನಲ್ಲಿ ಕಡಿಮೆಯಾಗುತ್ತಿರುವುದನ್ನು ನೆನೆಸಿಕೊಂಡರೆ, ಪತ್ರದ ಸಂಗತಿಯು ನಿಜವೆಂದು ತೋರುವುದು. "ನನ್ನ ಮದುವೆಯಾಗಿ ಪತಿಯೊಡನೆ ಇಲ್ಲಿಗೆ ಬಂದ ಮೂರು ದಿನಗಳೊಳಗಾಗಿಯೇ ಮಾತಾ-ಪಿತೃಗಳು ಕಳ್ಳರಿಂದ ಕೊಲ್ಲಲ್ಪಟ್ಟರೆಂದು ಕೇಳಿದೆನು. ಇದು ಈ ಪತ್ರದಿಂದ ಸುಳ್ಳೆಂದೂ, ದ್ರೋಹಿಗಳಿಂದ ಅವರು ಕೊಲ್ಲಲ್ಪಟ್ಟಿರಬೇಕೆಂದೂ ನನ್ನ ಮನೋದೇವತೆಯು ಆಗಾಗ ನನಗೆ ಹೇಳುತ್ತಿದ್ದಳು. ಯಾವಾಗಲಾದರೂ ಅವರ ಮರಣದ ವಿಷಯವನ್ನು ಪತಿಯಲ್ಲಿ ಪ್ರಸ್ತಾಪ ಮಾಡಲು, ಅವರ ಮುಖವು ವಿವರ್ಣವಾಗುತ್ತಿತ್ತು; ಮತ್ತು ಆ ವಿಷಯವನ್ನು ಕೂಡಲೆ ಮರೆಸುವ ಮತ್ತಾವುದೋ ಮಾತನ್ನು ಮಧ್ಯೆ ತಂದೊಡ್ಡುತ್ತಿದ್ದರು. ಅದರ ಕಾರಣವೇನೆಂದು ಎಷ್ಟು ಯೋಚಿಸಿದರೂ ತಿಳಿಯುತ್ತಿರಲಿಲ್ಲ. ಆಹಾ! ಈಗ ಇವರ ಮೋಸವು ತಿಳಿಯಿತು. ಇದರ ನಿಜತ್ವವನ್ನು ಪರೀಕ್ಷಿಸಿಯೇ ಬಿಡುವೆನು ಪತ್ರದ ಸಂಗತಿಯು ನಿಜವಾದ ಪಕ್ಷದಲ್ಲಿ ಇನ್ನು ಈ ದೇಹವನ್ನು ಯಾವುದಾದರೊಂದು ವಿಧದಲ್ಲಿ ನೀಗುವೆನು. ಅಯ್ಯೋ ತಂದೆಯೇ, ಸೋಮಚಂದ್ರನಾರೆಂಬುದನ್ನು ಸಹ ನೋಡದೆ, ಈ ಮಹೇಂದ್ರನಾನು ಚಿಂತಾಸಾಗರನ ಮೋಸವನ್ನು ಕಂಡು ಹಿಡಿಯದೆ, ನನ್ನನ್ನು ಈ ಅವಸ್ಥೆಗೆ ತಂದಿಳಿಸಿ, ನೀನೂ ಮೃತ್ಯುವಿನ ಬಾಯಿಗೆ ಅಕಾಲ ಗ್ರಸ್ತನಾದೆಯಾ? ವಧು-ವರರನ್ನು ನೋಡದೆಯೂ, ಕುಲಗೋತ್ರಗಳನ್ನು ಪರೀಕ್ಷಿಸದೆಯೂ ಪತ್ರ ಪ್ರಸಂಗದಿಂದ ನಿಷ್ಕರ್ಷಿಸಿ, ಲಗ್ನವನ್ನು ಬೆಳಸಿದ್ದರ ಪರಿಣಾಮವು ಈ ರೀತಿಯಾಯಿತಲ್ಲವೆ? ನಿಜ, ನಿಜ. ತನ್ನ ಮೋಸವು ಹೊರಬಿದ್ದೀತೆಂಬ ಭಯದಿಂದ ಪತಿಯೆಂದೆನಿಸಿಕೊಳ್ಳುವ ಈ ವಂಚಕನು—ಶಿವ, ಶಿವ, ಯಾವನೇ ಆಗಲಿ, ನಾನೀಗ ವರಿಸಿದ ಪತಿಯನ್ನು ನಿಂದಿಸಿದೆನಲ್ಲ—ನನ್ನ ಜನನೀ-ಜನಕರನ್ನು ಕೊಲ್ಲಿಸಿರಬಹುದು. ಛೆ! ಆಗಿ ಹೋದ

ಕಾರ್ಯಕ್ಕೆ ವ್ಯಥೆಪಡುವುದರಿಂದೇನಾದೀತು? ನನ್ನ ಅದೃಷ್ಟದಲ್ಲಿದ್ದಂತಾಗಲಿ!

---

## ಪರಿಚ್ಛೇದ ೧೩

ಮುಕೇಂದ್ರನೊಬ್ಬನೇ ತನ್ನ ಕೋಣೆಯಲ್ಲಿ ಕುಳಿತುಕೊಂಡು ಏನನ್ನೋ ಯೋಚಿಸುತ್ತಿದ್ದಾನೆ. ಮುಖವು ಕಾಂತಿಹೀನವಾಗಿದೆ ಕಣ್ಣುಗಳು ಕೆಂಪೇರಿವೆ? ದೇಹಾದ್ಯಂತ್ಯವೂ ಜ್ವರ ಬಂದಿರುವವರ ಮೈಯಂತೆ ಕಾಯುತ್ತಿದೆ. ಕುರ್ಚಿಯಲ್ಲಿ ಕುಳಿತುಕೊಂಡಿರುವವನು ಆಗಾಗ ಮೆಟ್ಟಿ ಬೀಳುವನು ಸುತ್ತಲೂ ಭ್ರಾಂತಿಯಿಂದ ನೋಡುವನು ಮನಸ್ಸಿಗೆ ನೆಮ್ಮದಿಯಿದ್ದಂತೆ ತೋರುವುದಿಲ್ಲ. ಅಸ್ಫುಟವಾದ ಮಾತುಗಳು ಅವನ ಬಾಯಿಂದ ಹೊರಬೀಳುವುವು ಬಾರಿಬಾರಿಗೂ ನಿಟ್ಟುಸಿರನ್ನು ಬಿಡುವನು. "ದೇವಿದಾಸ, ಎಂಥ ವಿಪತ್ತಿಗೆ ನನ್ನನ್ನು ಗುರಿ ಮಾಡಿದೆ! ಸುಖದ ಶಿಖರವನ್ನು ಹತ್ತಿದ್ದ ನನಗೆ ಪತನವು ಎಷ್ಟು ಜಾಗ್ರತೆಯಾಗಿ ಹಿದಗುವಂತೆ ಮಾಡಿದೆ? ಅಯ್ಯೋ! ಮೂರ್ಖ, ಚಿಂತಾಸಾಗರ! ಸೋಮಚಂದ್ರನನ್ನೂ, ಅವನ ತಂದೆ ತಾಯಿಗಳನ್ನೂ ಅಗಲಿ ಕೊಲ್ಲದೆ ಏಕೆ ಬಿಟ್ಟೆ? ನಿನ್ನ ಅವಿಜ್ಞತೆಗಾಗಿಯೋ ಈಗ ಈ ಫಲವನ್ನನುಭವಿಸು ನಿನ್ನೆಯಿಂದ ಹೇಳಿ ಕಳುಹಿಸಿದರೂ, ಮಂಥರೆಯು ತಾನು ಬರುವುದಕ್ಕಾಗುವುದಿಲ್ಲವೆಂದು ನಿಷ್ಠುರವಾಗಿ ಹೇಳಿ ಕಳುಹಿಸಿದಳು ಇದಕ್ಕೆ ಕಾರಣವೇನಿರಬಹುದು? ಆಕೆಗೂ ನನ್ನ ಮೋಸವು ಗೊತ್ತಾಗಿಂಬೇಕಲ್ಲವೆ? ಹಾಗೆ ಗೊತ್ತಾಗಿದ್ದ ಭಾಗದಲ್ಲಿ ಈ ನನ್ನ ಸಂಸಾರವು ಸ್ಮಶಾನವಾಗಲು ಏನು ತಾನೆ ಉಳಿದಿದೆ?" ಎಂದು ತನ್ನಲ್ಲಿ ತಾನೆ ಹೇಳಿಕೊಳ್ಳುತ್ತಿರಲು, ಕೋಣೆಯ ಬಾಗಿಲನ್ನು ತೆರೆದುಕೊಂಡು ಮಂಥರೆಯು ಒಳಗೆ ಬಂದಳು. ಅವಳನ್ನು ನೋಡುತ್ತಲೆ ಅವನ ಜೀವವೇ ಹೋದಂತಾಯಿತ್ತು. ತಾನು ಆಡಿಕೊಳ್ಳುತ್ತಿದ್ದ ಮಾತು

ಗಳನ್ನು ಅಳೆಯು ಕೇಳಿರಬಹುದೆಂದು ತಿಳಿದನು. ಇವನು ಹೀಗೆ ಆಲೋಚನಾಪರನಾಗಿರಲು, ಮಂಥರೆಯು:—ಮಹೇಂದ್ರ, ಏಕೆ? ನೀನು ಚಿಂತಾಕ್ರಾಂತನಾಗಿರುವಂತೆ ಕಾಣುತ್ತೆ?" ಎಂದು ಪ್ರಶ್ನೆ ಮಾಡಿದಳು. ತನ್ನ ಮನೋಭಾವವನ್ನು ಅವಳಿಗೆ ತೋರಗೊಡಬಾರದೆಂದು: "ಪ್ರಿಯೆ, ನನಗೆ ಯಾವ ಚಿಂತೆಯೂ ಇಲ್ಲವಲ್ಲ! ಇದೇನು ಹೀಗೆ ಕೇಳುವೆ?"

ಮಂಥರೆ:—ಪ್ರಿಯಾ, ಇನ್ನಾದರೂ ವಿಷಯವೇನೆಂಬುದನ್ನು ನನ್ನೊಡನೆ ಹುಡನುಡಿಯದೆ ಇರಬೇಡ. ನಿಮ್ಮ ಮನಸ್ಸಿನಲ್ಲಿರುವುದೆಲ್ಲವೂ ನನಗೆ ಗೊತ್ತಾಗಿ ಹೋಗಿದೆ

ಮಹೇಂದ್ರ:—ಇದೇನು, ಈ ದಿನ ಈ ರೀತಿ ಹೇಳುತ್ತಿರುವೆ?

ಮಂಥರೆ:—ಏನನ್ನು ಹೇಳುತ್ತಿರುವೆನು?

ಮಹೇಂದ್ರ:—ಈ ವರೆಗೂ ಯಾವ ವಿಷಯವಿದ್ದರೂ ನಿನ್ನಲ್ಲಿ ಹೇಳುತ್ತಿದ್ದೆನಲ್ಲದೆ, ಮರೆಮಾಜುತ್ತಿದ್ದನೆ?

ಮಂಥರೆ:—ಮರೆಮಾಜುವ ವಿಷಯಗಳನ್ನು ಮರೆಮಾಜಿಯೇ ಇರುವಿರಿ ಇದರಲ್ಲಿ ಸೋಜಿಗವೇನು?

ಮಹೇಂದ್ರ:—ಅಂಥ ವಿಚಾರವಾವುದು?

ಮಂಥರೆ: ಮೋಸ, ಕೊಲೆ! ಇನ್ನೇನಾಗಬೇಕು?

ಮಹೇಂದ್ರ:—ಏನು, ಮೋಸ ಮಾಡಿರುವೆನೆ? ಯಾರನ್ನು? ನಾನು ಕೊಲೆಗಡುಕನೇ? ಇದನ್ನು ಯಾರು ಹೇಳಿದರು?

ಮಂಥರೆ:—ಯಾರೂ ಹೇಳುವ ಕಾರಣವಿಲ್ಲ. ನಿಮ್ಮ ಚರ್ಯೆಯೇ ಹೇಳುತ್ತಿರುವುದು. ಹೋಗಲಿ, ನಿಮ್ಮ ನಿಜವಾದ ಹೆಸರೇನು?

ಮಹೇಂದ್ರ:—ಸೋಮಚಂದ್ರನೆಂದು.

ಮಂಥರೆ:—ಸೋಮಚಂದ್ರನೊ, ಚಿಂತಾಸಾಗರನೊ?

ಚಿಂತಾಸಾಗರನೆಂಬ ಹೆಸರನ್ನು ಮಂಥರೆಯು ಹೇಳುತ್ತಲೇ, ಮಹೇಂದ್ರನು ಅವಾಕ್ಕಾದನು ಮುಂದೆ ಏನು ಮಾಡಬೇಕೆಂದು ತೋಚಲಿಲ್ಲ.

K. 698

ಮಂಥರೆ:—ಏಕೆ ಸುಮ್ಮನಾದಿರಿ? ಸೋಮಚಂದ್ರನು ಜೀವದಿಂದಿರುವನು. ತಾವೇ ಸೋಮಚಂದ್ರರೆಂದು ನನ್ನನ್ನೂ, ನನ್ನ ತಾಯಿ-ತಂದೆಗಳನ್ನೂ ಮೋಸಪಡಿಸಿದಿರಿ. ಗುಟ್ಟು ರಟ್ಟಾಗಬಹುದೆಂದು ನನ್ನ ಪೂಜ್ಯ ಮಾತಾ-ಪಿತೃಗಳು ಕಳ್ಳರಿಂದ ಕೊಲ್ಲಲ್ಪಟ್ಟರೆಂಬ ವರ್ತಮಾನವನ್ನು ಹರಡಿಸಿ, ದೇವಿದಾಸನಿಂದ ಅವರನ್ನು ಕೊಲ್ಲಿಸಿದಿರಿ. ರಾಕಾಚಂದ್ರನು ರಾಜದ್ರೋಹಿಯೆಂದು ಅವನನ್ನು ಆಮರಣಾಂತ ಸೆರೆಯಲ್ಲಿ ಹಾಕುವಂತೆ ಶಿಕ್ಷೆಯನ್ನು ವಿಧಿಸಿದಿರಿ. ಮತ್ತೆ ಯಾವ ಮೋಸ, ಕೊಲೆಗಡುಕತನವನ್ನು ಮಾಡಿರುವಿರೋ ತಿಳಿಯದು. ಎಲ್ಲಿ? ಈಗ ಹೇಳಿರುವ ಅಪವಾದಗಳಲ್ಲಿ ಯಾವುದನ್ನು ಸುಳ್ಳೆಂದು ನಿರ್ಧರಿಸುವಿರಿ? ಹೇಳೋಣಾಗಲಿ.

ಮಹೇಂದ್ರನು ನಿರುತ್ತರನಾಗಿಯೇ ಇದ್ದನು ಪುನಃ ಮಂಥರೆಯು ಹೇಳತೊಡಗಿದಳು:—"ಮಹೇಂದ್ರ, ಸ್ತ್ರೀಗೆ ಪತಿಯೇ ಸರ್ವಸ್ವವು. ಆದ್ದರಿಂದ ನಿಮ್ಮನ್ನು ನಾನು ಯಾವ ದಿನ ಪತಿಯೆಂದು ವರಿಸಿದೆನೋ, ಆ ದಿನದಿಂದಲೂ ಎಳ್ಳಷ್ಟು ಲೋಪವಿಲ್ಲದೆ ನಿಮ್ಮ ಸೇವೆಯನ್ನು ಮಾಡಿರುವೆನು. ನೀವು ಮಾಡಿರುವ ಮೋಸ, ಕೊಲೆ, ರಾಜದ್ರೋಹಗಳಿಗೆ ಸರಿಯಾದ ಫಲವನ್ನು ಅನುಭವಿಸಿಯೇ ತೀರಬೇಕು. ನಾನು ಸ್ವಾರ್ಥಬುದ್ಧಿಯಿಂದ ಅಂದರೆ ನಿಮ್ಮ ಮೇಲಿನ ಪ್ರೇಮದಿಂದ ನಿಮ್ಮನ್ನು ರಕ್ಷಿಸಬೇಕೆಂದರೂ, ನಿಷ್ಪಕ್ಷಪಾತಿಯಾದ ಆ ಪರಮಾತ್ಮನು ನಿಮ್ಮನ್ನೆಂದಿಗೂ ಕ್ಷಮಿಸಲಾರನು ನಿಮ್ಮ ಮೇಲಿರುವ ಸೇಡನ್ನು ನಿಮ್ಮ ವೈರಿಗಳು ತೀರಿಸಿಕೊಳ್ಳುವರು ಇದರಲ್ಲಿ ಯಾವ ಸಂಶಯವೂ ಇಲ್ಲ; ಆದರೆ ನಿಮ್ಮ ಹಿತಚಿಂತಕಳಾದ ನಾನು, ನಿಮಗೆ ಉಂಟಾಗುವ ಶಿಕ್ಷೆಯನ್ನು ನೋಡಿದರೆ, ನನ್ನ ಎದೆಯೊಡೆಯುವುದು ಅದನ್ನು ನೋಡಿ ಪ್ರಾಣವನ್ನು ಬಿಡುವುದಕ್ಕಿಂತ ಈಗಲೇ ನಿಮ್ಮ ಕಣ್ಣೆದುರಿನಲ್ಲಿ ಈ ಜೀವವನ್ನು ಕೊನೆಗಾಣಿಸುವೆನು "ಎಂದು ಹೇಳಿ, ಪತಿಯ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ರೋದಿಸುತ್ತಾ:—"ಪ್ರಭೋ, ಈ ಅಭಾಗಿನಿಯ ಭಿಕ್ಷೆಯೊಂದನ್ನು ಸಲ್ಲಿಸಿ;

ಇಲ್ಲವೆಂದು ಹೇಳಬೇಡಿ. ಈ ಅಧಮಳು ತನ್ನ ಅಕ್ಕನನ್ನು-ನಿಮ್ಮ ಮೊದಲನೆಯ ಭಾರ್ಯೆಯನ್ನು-ನಿಮ್ಮಿಂದ ಕೊಲ್ಲಿಸಿದೆನೆಂದು ಜನ ರಾಡಿಕೊಳ್ಳುತ್ತಿರುವರು. ತ್ರೇತಾಯುಗದ ಮಂಥರೆಯು ತನ್ನ ಒಡತಿಯನ್ನೊಲಿಸಿಕೊಂಡಂತೆ, ನಾನೂ ಗಂಡನ ಮನಸ್ಸನ್ನು ಒಲಿಸಿಕೊಂಡು ನಿಮ್ಮ ಪ್ರಿಯತಮೆಯ ನಾಶವನ್ನು ಮಾಡಿಸಿದೆನೆಂದು ದೂರುತ್ತಿರುವರು. ಯಾರು ಹೇಗಾದರೂ ಅನ್ನಲಿ? ನನ್ನ ಸ್ವಾಮಿಯಾದ ತಾವು ನಾನು ನಿರ್ದೋಷಿಯೆಂದು ಒಂದು ಬಾರಿ ಹೇಳಿ ಈ ಅಪವಾದದಿಂದ ಬೆಂದು ಬಳಲಿರುವ ನನ್ನ ಮನಸ್ಸನ್ನು ಸಮಾಧಾನಪಡಿಸಿ. ಇದೊಂದೇ ನನ್ನ ಭಿಕ್ಷೆ'' ಎಂದವಳೇ, ತನ್ನಲ್ಲಿ ಬಚ್ಚಿಟ್ಟುಕೊಂಡಿದ್ದ ಬಾಕಿನಿಂದ ಎದೆಯನ್ನು ಇರಿದುಕೊಂಡು ಭೂಶಾಯಿಯಾದಳು ಈ ಕೃತ್ಯವನ್ನು ನೋಡುತ್ತಲೆ ಮಹೇಂದ್ರನು ಒಂದು ಸಾರಿ ಗಟ್ಟಿಯಾಗಿ ಚೀರಿದನು ಮಂಥರೆಯ ಎದೆಯಲ್ಲಿ ನಟ್ಟಿದ್ದ ಬಾಕನ್ನು ಕೀಳಹೋದನು; ಆದರೆ ಮಂಥರೆಯು ಅವನನ್ನು ತಡೆದು: ''ಹೃದಯೇಶ್ವರ, ಕೂಗಬೇಡಿ; ಇನ್ನು ನನ್ನನ್ನು ಬದುಕಿಸಿಕೊಳ್ಳುವೆನೆಂಬ ಆಶೆಯನ್ನು ಬಿಡಿ. ಆದರೆ ಒಂದು ಸಲ ನಿರ್ದೋಷಿಯೆಂದು ಹೇಳೋಣಾಗಲಿ. ಸಮಾಧಾನದಿಂದ ಪ್ರಾಣವನ್ನು ಬಿಡುವೆನು'' ಮಹೇಂದ್ರನಿಗ ಇನ್ನು ಸುಮ್ಮನಿರಲಾಗಲಿಲ್ಲ. ಮರಣಾವಸ್ಥೆಯಲ್ಲಿರುವ ಪತ್ನಿಯನ್ನು ಕುರಿತು:—''ಮಂಥರೆ, ಹೃದಯೇಶ್ವರಿ, ಈ ಅಧಮನು ಅತ್ಯಂತ ಪಾಪಿಯು. ಅನೇಕ ಅಪರಾಧಗಳನ್ನು ನಿನ್ನಲ್ಲಿ ಮಾಡಿರುವನು. ಅಯ್ಯೋ! ಜನಗಳು ನಿನ್ನನ್ನು ದೋಷಿಯೆಂದು ದೂರುವರೇ? ಪಾಪ, ಅವರಿಗೆ ಹೇಗೆ ತಾನೇ ಈ ನನ್ನ ಕೊಲೆಗಡುಕತನವೂ, ನಿನ್ನ ನಿರ್ದೋಷಿತ್ವವೂ ಗೊತ್ತಾಗಬೇಕು? ನಿನ್ನ ಶತ್ರುಗಳು ನನ್ನನ್ನು ವಧಸ್ಥಾನದಲ್ಲಿ ನಿಲ್ಲಿಸಿ ಮಂಥರೆಯು ದೋಷಿಯೆಂದು ಹೇಳದಿದ್ದರೆ, ಚಿತ್ರಹಿಂಸೆಗೆ ಗುರಿಮಾಡುವೆವೆಂದು ಬೆದರಿಸಿದರೂ, ನನ್ನ ಪ್ರತಿಯೊಂದು ಅಂಗವನ್ನು ತುಂಡು ತುಂಡಾಗಿ ಕತ್ತರಿಸಿದರೂ ಆಗೂ ನೀನು ನಿರ್ದೋಷಿಯೆಂದೇ ಸತ್ಯವಾಗಿಯೂ ಹೇಳುವೆನು.

ಇದರಲ್ಲಿ ಯಾವ ಸಂಶಯವೂ ಇಲ್ಲ. ಪ್ರಾಣಪ್ರಿಯೆ, ಸಾಧ್ವಿ! ನಿನ್ನೆನ್ನು ವಂಚಿಸಿದೆನು ನಿಜ. ಇದು ಸತ್ಯ. ನಿನ್ನ ಮಾತಾ-ಪಿತೃಗಳನ್ನೂ ಕೊಲೆ ಮಾಡಿಸಿದೆನು. ಇವೆಲ್ಲವನ್ನೂ ನಿನ್ನ ಮೇಲಿನ ಮೋಹಕ್ಕಲ್ಲದೆ, ಮತ್ತಾವುದಕ್ಕೂ ಅಲ್ಲ. ಇಗೋ, ನಿನ್ನನ್ನು ಕೈ ಮುಗಿದು ಬೇಡಿಕೊಳ್ಳುವೆನು. ನನ್ನ ಅಪರಾಧಗಳನ್ನು ಕ್ಷಮಿಸು'' ಎಂದವನೇ ನೆಲದ ಮೇಲೆ ಬಿದ್ದು ಮೂರ್ಛಿತನಾದನು ಈ ಸಮಯಕ್ಕೆ ಸರಿಯಾಗಿ ಮಹೇಂದ್ರನ ಮನೆಯ ಮುಂಭಾಗದಲ್ಲಿ ಒಂದು ಮೋಟಾರಗಾಡಿಯು ಬಂದು ನಿಂತಿತು ಅದರೊಳಗಿನಿಂದ ನಾಲ್ವರು ಕೆಳಕ್ಕಿಳಿದರು. ಇಳಿದವರೇ ಧಾವಿಸಿ ಮನೆಯೊಳಕ್ಕೆ ಹೋದರು. ಮಹೇಂದ್ರನು ನೆಲದ ಮೇಲೆ ಬಿದ್ದಿದ್ದನು. ಮಂಥರೆಯು ಪ್ರಾಣಪಕ್ಷಿಯು ಪಂಜರದೊಳಗಿಂದ ಆಗಲೇ ಹಾರಿಹೋಗಿತ್ತು. ಕೂಡಲೆ ಅವರಲ್ಲೊಬ್ಬನು ಸೇವಕರನ್ನು ಕೂಗಿ ನೀರನ್ನು ತರಿಸಿ, ಮೂರ್ಛಿತನಾಗಿ ಬಿದ್ದಿದ್ದ ಮಹೇಂದ್ರನಿಗೆ ಶೈತ್ಯೋಪಚಾರವನ್ನು ಮಾಡಿ ಎಬ್ಬಿಸಿದನು ಮಂಥರೆಯ ದೇಹವು ಅಲ್ಲಿಂದ ಸಾಗಿಸಲ್ಪಟ್ಟಿತು ಮಹೇಂದ್ರನು ತನ್ನ ಮುಂದೆ ಚಂದ್ರಚೂಡರಾಜನೂ, ಇಬ್ಬರು ಹೊಸಬರೂ, ಒಬ್ಬ ಪೋಲೀಸ ಠಾಣೆಯ ಮುಖ್ಯಸ್ಥನೂ ನಿಂತಿದ್ದನ್ನು ನೋಡಿ, ಮನಸ್ಸಿನಲ್ಲಿ ಬೆದರಿದನು. ಚಂದ್ರಚೂಡನಿಗೆ ನಮಸ್ಕಾರ ಮಾಡಹೋದನು; ಆದರೆ ಕೈಗಳು ಬರಲಿಲ್ಲ. ಇವನ ಈ ಸ್ಥಿತಿಯನ್ನು ನೋಡಿ ಚಂದ್ರಚೂಡನು:—"ಮಹೇಂದ್ರ, ಬಾ ಹೋಗೋಣ''ಎಂದು ಹೇಳಿ, ಅವನೊಡನೆ ಅಲ್ಲಿಂದ ಎಲ್ಲರೂ ಹೊರಟು ಹೋದರು.

---

## ಪರಿಚ್ಛೇದ ೧೪

"ವಿಕ್ರಮ, ನಿನ್ನ ಪರಾಕ್ರಮವೂ, ನನ್ನ ಭೀಷಣ ಪ್ರತಿಜ್ಞೆಯೂ ಎಲ್ಲವೂ ವಿಫಲವಾದಂತೆ ತೋರುತ್ತದೆ. ನಮ್ಮ ವೈರಿ ರಾಕಾಚಂ

ದ್ರನು ಇನ್ನೂ ಜೀವದಿಂದಿರುವನು. ಸೆರೆಯಿಂದ ತಪ್ಪಿಸಿಕೊಂಡು ಬಂದು ನಮಗೆ ಉಪಟಳವನ್ನುಂಟು ಮಾಡುತ್ತಿರುವನು. ಇವನ ನಾಶವನ್ನು ಮಾಡುವುದು ಹೇಗೆ?'' ಎಂದು ಭೀಷಣನು ವಿಕ್ರಮನ ಮನೆಯಲ್ಲಿ ಕುಳಿತುಕೊಂಡು ಪ್ರಶ್ನೆ ಮಾಡುತ್ತಿದ್ದನು.

ವಿಕ್ರಮ:— ಭೀಷಣ, ರಾಕಾಚಂದ್ರನು ನಿನಗೆ ಯಾವ ರೀತಿ ತೊಂದರೆಯನ್ನು ಕೊಡುತ್ತಿದ್ದಾನೆಯೊ, ಅದೇ ರೀತಿ ನನಗೂ ಕೊಡುತ್ತಿರುವನು. ಅವನಿಂದ ತಪ್ಪಿಸಿಕೊಂಡು ದೇಶಾಂತರದಲ್ಲಿದ್ದರೂ, ನನ್ನ ಬೆನ್ನ ಹಿಂದೆಯೇ ತಿರುಗುತ್ತಿರುವನು. ಇನ್ನು ನಾವಿಬ್ಬರೂ ದೇಶಾಂತರ ಹೊರಟು ಹೋಗುವುದೇ ಯುಕ್ತವಾಗಿ ತೋರುವುದು. ನಾನೂ ನೀನೂ ದೇವಿದಾಸನ ಪಕ್ಷವನ್ನು ವಹಿಸಿರುವ ವಿಷಯವನ್ನು ಅವನಾಗಲೆ ಅರಿತಿರುವನು

ಭೀಷಣ:— ಅದನ್ನು ಹೇಗೆ ತಿಳಿದ?

ವಿಕ್ರಮ:— ದೇವಿದಾಸನಿಗೆ ನಾವು ಮೂರು ದಿನಗಳ ಹಿಂದೆ ಬರೆದು ಕಳುಹಿಸಿದ ಪತ್ರವು ಅವನ ಹಸ್ತಗತವಾಗಿರುವುದು.

ಭೀಷಣ:— ಏನು? ಪತ್ರವು ಅವನ ಹಸ್ತಗತವಾಗಿರುವುದೇ? ಹಾಗಾದ ಭಾಗದಲ್ಲಿ ಮಧುಪ್ರಿಯನನ್ನು ಅವನು ಕನ್ನೆಡೆಗೆ ಎಳೆದುಕೊಂಡಿರಬೇಕು ಇಲ್ಲದಿದ್ದರೆ, ಮಧುಪ್ರಿಯನೊಡನೆ ಕಳುಹಿಸಿದ ಪತ್ರವು ಅವನ ಕೈಸೇರುವುದು ತಾನೆ ಹೇಗೆ?

ವಿಕ್ರಮ:— ಹಾಗಲ್ಲ, ಮಧುಪ್ರಿಯನು ದೇವಿದಾಸನ ಮನೆಗೆ ಹೋಗುತ್ತಿರುವಾಗ ದಾರಿಯಲ್ಲಿ ರಾಕಾಚಂದ್ರನನ್ನು ನೋಡಿದನಂತೆ. ರಾಕಾಚಂದ್ರನು ಇವನ ಬಳಿಗೆ ಬಂದು ಇವನನ್ನು ಅತಿಯಾಗಿ ಸ್ತೋತ್ರವನ್ನು ಮಾಡಿ, ಹತ್ತಿರದಲ್ಲಿದ್ದ ಮನೆಯೊಳಕ್ಕೆ ಕರೆದುಕೊಂಡು ಹೋಗಿ, ಬೇಕಾದಷ್ಟು ಮದ್ಯಪಾನವನ್ನು ಮಾಡಿಸಿದನಂತೆ ಮದ್ಯಸೇವನೆಯಿಂದ ಇವನಿಗೆ ಜ್ಞಾನವಿಲ್ಲದಂತಾಗಲು, ಇವನಲ್ಲಿದ್ದ ಆ ಪತ್ರವನ್ನು ತೆಗೆದುಕೊಂಡು ಅಲ್ಲಿಂದ ಹೊರಟು ಹೋದನೆಂದು ತಿಳಿಯ ಬಂದಿದೆ.

ಭೀಷಣ:—ಈಗ ಮಧುಪ್ರಿಯನು ಎಲ್ಲಿರುವನು?

ವಿಕ್ರಮ:—ಅವನೆಲ್ಲಿರುವನೊ ತಿಳಿಯದು; ಆದರೆ ಇಗೊ, ಈ ದಿನ ಈ ಪತ್ರವನ್ನು ಕಳುಹಿಸಿರುವನು ಎಂದು ಹೇಳುತ್ತ ಒಂದು ಪತ್ರವನ್ನು ತೆಗೆದು ಅವನ ಮುಂದೆಸೆದನು. ಪತ್ರದ ವಿಷಯವು ವಿಕ್ರಮನು ಮೇಲೆ ಹೇಳಿದ ವಿಷಯವೇ ಆಗಿತ್ತು.

ಭೀಷಣ:—ವಿಕ್ರಮ, ಮಧುಪ್ರಿಯನು ಇನ್ನು ನಮ್ಮನ್ನು ನೋಡುವ ಸಂಭವವೇ ಇಲ್ಲವೆಂದು ಬರೆದಿರುವನು. ಏಕೆ?

ವಿಕ್ರಮ:—ಆ ವಿಚಾರವನ್ನು ನೀನೇ ಊಹಿಸಬೇಕು.

ಭೀಷಣ:— ನನ್ನ ಊಹೆಗೆ ಬಗೆ ಹರಿಯಲಿಲ್ಲವಾದ್ದರಿಂದ, ನಿನ್ನನ್ನು ಕೇಳಿದೆನು.

ವಿಕ್ರಮ:—ರಾಜದ್ರೋಹಿಗಳಿಗೆ ಕೊಡುವ ಶಿಕ್ಷೆ ಯಾವುದು?

ಭೀಷಣ:—ಮರಣ.

ವಿಕ್ರಮ:—ಅದು ನಮ್ಮಿಬ್ಬರಿಗೂ ಆಗುವ ಸಂಭವವಿರುವುದರಿಂದ.

ಭೀಷಣ:—ನಾವು ರಾಜದ್ರೋಹಿಗಳೇ?

ವಿಕ್ರಮ:—ಇನ್ನು ಕೆಲವು ಕಾಲ ಇಲ್ಲಿಯೇ ಇದ್ದು, ರಾಕಾಚಂದ್ರನ ಬಲೆಗೆ ಬಿದ್ದರೆ, ಆಗ ರಾಜದ್ರೋಹಿಗಳೆಂದು ಪರಿಗಣಿಸಲ್ಪಡುವೆವು.

ಭೀಷಣ:— ಸೆರೆಮನೆಯಿಂದ ತಪ್ಪಿಸಿಕೊಂಡು ಬಂದ ರಾಕಾಚಂದ್ರನನ್ನು ಯಾರೂ ಹುಡುಕುತ್ತಿಲ್ಲವೇಕೆ?

ವಿಕ್ರಮ:—ಅವನನ್ನು ಈ ಕಾಲಕ್ಕೆ ಮೊದಲೇ ಹುಡುಕಿ ಸೆರೆಯಲ್ಲಿ ಹಾಕುತ್ತಿದ್ದರು; ಆದರೆ ರಾಜನೊಂದಿಗೆ ಮಾತನಾಡಿ, ಇದ್ದ ಸಂಗತಿಯನ್ನು ಆತನಿಗೆ ತಿಳಿಸಿ, ರಾಜದ್ರೋಹಿಗಳ ಪತ್ತೆ ಹಚ್ಚುವೆನೆಂದು ಭರವಸೆಯನ್ನು ಕೊಟ್ಟಿರುವನು. ಆದ್ದರಿಂದ ಅವನ ಮೇಲೆ ಯಾರೂ ಕೈ ಮಾಡುತ್ತಿಲ್ಲ. ಅದಲ್ಲದೆ ಅವನು ವೇಷವನ್ನು ಬದಲಾಯಿಸಿಕೊಂಡು ತಿರುಗುವುದರಲ್ಲಿ ಬಲು ಜಾಣನು. ಅವನನ್ನು

ಯಾರೂ ಗುರ್ತಿಸಲಾರರು. ಏನಾದರೂ ಆಗಲಿ, ನಮ್ಮ ಮುಂದಿನ ವಿಚಾರವೇನು?

ಭೀಷಣ:—ದೇವಿದಾಸನನ್ನೇ ಮರೆಹೋಗುವದುತ್ತಮ.

ವಿಕ್ರಮ:—ಅದು ನನ್ನಿಂದಾಗದು.

ಭೀಷಣ:— ಮತ್ತೆ ಏನನ್ನು ಮಾಡಬೇಕೆಂದಿರುವೆ?

ವಿಕ್ರಮ:—ನಾನು ಮೊದಲೇ ಹೇಳಲಿಲ್ಲವೆ? ದೇಶತ್ಯಾಗ.

ಭೀಷಣ:—ಹೇಡಿಯಂತೆ ಓಡಿ ಹೋಗುವುದು ನಮಗೆ ಯೋಗ್ಯವಲ್ಲ ನಮ್ಮ ಕ್ಷೋಭವನ್ನು ಮಾಡಬೇಕೆಂದು ಪ್ರಯತ್ನಿಸಿರುವವರನ್ನು ಕೊಲ್ಲಬೇಕು; ಇಲ್ಲವೆ ಸಾಯಬೇಕು. ಈ ಊರಿನ ಸಮೀಪದಲ್ಲಿರುವ ಕಾಡಿನಲ್ಲಿ ಒಂದು ಹಾಳು ದೇವಸ್ಥಾನವಿರುವುದು. ಅಲ್ಲಿ ರಾಕಾಚಂದ್ರನೇ ಮೊದಲಾದವರು ಛದ್ಮ ವೇಷದಿಂದಿರುವರು. ಅವರೆಲ್ಲರನ್ನೂ ಹಿಡಿದು, ಹೇಳಹೆಸರಿಲ್ಲದಂತೆ ಮಾಡುವ ಪ್ರಯತ್ನವನ್ನು ಮಾಡಿರುತ್ತೇನೆ. ಈ ಅಲ್ಪ ವಿಷಯಕ್ಕಾಗಿ ದೇಶತ್ಯಾಗ ಮಾಡುವುದೇ?

ವಿಕ್ರಮ:—ಹಾಗಾದರೆ ಅವರೆಲ್ಲರನ್ನೂ ಯಾವಾಗ ಹಿಡಿಯಬೇಕೆಂದಿರುವೆ?

ಭೀಷಣ:—ಇನ್ನೆರಡು ದಿನಗಳು ಬೇಕಾಗುವುವು.

ವಿಕ್ರಮ:—ಈಗಲೇ ಏಕಾಗಬಾರದು?

ಭೀಷಣ:—ಜನಗಳ ಸಹಾಯವಿಲ್ಲದೆ ಅದಾಗಲಾರದು. ನಂಬಿಕೆಯುಳ್ಳ ಜನಗಳನ್ನು ಇದಕ್ಕೆ ನೇಮಿಸಬೇಕು. ಮೊದಲು ಅವರನ್ನು ಗೊತ್ತು ಮಾಡಿ ಆ ಮೇಲೆ ನನ್ನ ಕಾರ್ಯವು ಕೈಗೂಡುವಂತೆ ಮಾಡುವೆನು.

ವಿಕ್ರಮ: —ಭೀಷಣ, ನಿನ್ನ ಸಾಹಸಕ್ಕೆ ಮೆಚ್ಚಿದೆ. ನಾನೂ ನನ್ನಿಂದಾದಷ್ಟು ಸಹಾಯವನ್ನು ಮಾಡಲು ಸಿದ್ಧನಾಗಿರುವೆನು.

"ನಾನೂ ಸಿದ್ಧನಾಗಿಯೇ ಇರುವೆನು" ಎಂಬ ವಾಕ್ಯವನ್ನು ಯಾರೋ ಹೊರಗಣಿನಿಂದ ಕೂಗಿ ಹೇಳಿದಂತಾಯಿತು. ಇಬ್ಬರೂ

ಗಾಬರಿಯಾದರು. ಬಾಗಿಲನ್ನು ತೆರೆದು ಹೊರಕ್ಕೆ ಹೋಗಿ ನೋಡು ತ್ತಾರೆ, ಅಲ್ಲಿ ಯಾರೂ ಕಾಣಿಸಲಿಲ್ಲ "ಭೀಷಣ, ದೈವಬಲವಿಲ್ಲ ದವರ ಪಾಡೇ ಇದು. ಕಂಡೆಯಾ?" ಎಂದು ಹೇಳುತ್ತ ವಿಕ್ರಮನು ಹೊರಟು ಹೋದನು.

---

## ಪರಿಚ್ಛೇದ ೧೫

ಮಹೇಂದ್ರನನ್ನು ಕರೆದುಕೊಂಡು ಚಂದ್ರಚೂಡನು ತನ್ನ ಅಂಮ ನೆಗೆ ಬಂದನು. ಅವನ ಹಿಂದೆಯೇ ಅಪರಿಚಿತರಾದ ಇಬ್ಬರು ವ್ಯಕ್ತಿ ಗಳಿದ್ದರೆಂದು ಹೇಳಿದ್ದೆವಲ್ಲವೆ? ಅವರೇ ನಮ್ಮ ಚಿರಪರಿಚಿತರಾದ ರಾಕಾಚಂದ್ರ ಮತ್ತು ಬಲಭದ್ರರು. ಮಹೇಂದ್ರನು ತನ್ನ ಜೀವದ ಆಶೆಯು ಮುಗಿಯಿತೆಂದು ತಿಳಿದುಕೊಂಡೇ ಚಂದ್ರಚೂಡನ ಹಿಂದಿ ನಿಂದ ಹೋದನು.

ಚಂದ್ರಚೂಡ:—ಮಹೇಂದ್ರ, ಇಲ್ಲಿ ಕುಳಿತಿರುವ ಇಬ್ಬರು, ಯಾರೆಂದು ಬಲ್ಲೆಯಾ?

ಮಹೇಂದ್ರ:—ಗೊತ್ತಿಲ್ಲ.

ಚಂದ್ರ:—ರಾಕಾಚಂದ್ರನೆಂಬ ಹೆಸರನ್ನು ಕೇಳಿರುವೆಯಾ?

ಮಹೇಂದ್ರ:—ಕೇಳಿರುವೆನು.

ಚಂದ್ರಚೂಡ:—ಯಾವಾಗ?

ಮಹೇಂದ್ರ:— ರಾಜದ್ರೋಹಿಯೆಂದು ವಿಚಾರಣೆ ಮಾಡ ಲ್ಪಟ್ಟು, ಆಮರಣಾಂತ ಸೆರೆಮನೆಯ ವಾಸವನ್ನು ವಿಧಿಸುವಾಗ.

ಚಂದ್ರಚೂಡ:-ಈತನು ನಿಜವಾಗಿಯೂ ರಾಜದ್ರೋಹಿಯೆ?

ಮಹೇಂದ್ರ:—ನಿರುತ್ತರ.

ಚಂದ್ರಚೂಡ:—ದೇವಿದಾಸನಿಂದ ಬಂದ ಪತ್ರವನ್ನು ಎಲ್ಲಿ ಟ್ಟಿರುವೆ?

ಮಹೇಂದ್ರ: —ಸುಟ್ಟು ಹಾಕಿದೆನು.

ಚಂದ್ರಚೂಡ:—ಏಕೆ?

ಮಹೇಂದ್ರ:—ಮಾತನಾಡಲಿಲ್ಲ

ಚಂದ್ರಚೂಡ:—ಚಿಂತಾಸಾಗರನೆಂಬುವವನಾರು?

ಮಹೇಂದ್ರನು ಆ ಪ್ರಶ್ನೆಗೂ ಉತ್ತರವೀಯದೆ ಕುಳಿತಿದ್ದನು.

ಚಂದ್ರಚೂಡ:-ಎಲ್ಲವನ್ನೂ ತಿಳಿದಿರುವ ನನ್ನ ಮುಂದೆ ಮೌನದಿಂದೇಕೆ ಕುಳಿತಿರುವೆ?

ಮಹೇಂದ್ರ:—ಸ್ವಾಮಿಯು ಎಲ್ಲವನ್ನೂ ತಿಳಿದಿದ್ದ ಮೇಲೆ, ಈ ಅಧಮನನ್ನು ಕೇಳುವುದೇಕೆ?

ಚಂದ್ರಚೂಡ: ಹಾಗಾದರೆ ನೀನು ರಾಜದ್ರೋಹಿಯಾಗಿರುವುದೇ ನಿಜವೋ?

ಮಹೇಂದ್ರ:—ಪ್ರಭೋ, ರಾಜದ್ರೋಹಿಯೆಂಬ ಕಳಂಕವೊಂದೇ ಈ ಮಹೇಂದ್ರನ ಮೇಲೆ ಹೊತ್ತಿದ್ದ ಭಾಗದಲ್ಲಿ, ಇವನು ಇಷ್ಟು ಕ್ಲೇಶವನ್ನನುಭವಿಸುತ್ತಿರಲಿಲ್ಲ; ಆದರೆ ಮಹಾಮಹಾಪರಾಧಗಳು ಈ ನಿರ್ಭಾಗ್ಯನಿಂದ ಮಾಡಲ್ಪಟ್ಟವೆ ಅವೆಲ್ಲಕ್ಕೂ ಸರಿಯಾದ ಶಿಕ್ಷೆಯನ್ನು ಈ ಲೋಕದಲ್ಲಿಯೇ ಅನುಭವಿಸುವಹಾಗಿದ್ದ ಭಾಗದಲ್ಲಿ, ಸಂತೋಷದಿಂದ ಅನುಭವಿಸುತ್ತಿದ್ದೆನು; ಆದರೆ ಈ ಲೋಕದಲ್ಲಿ ಮರಣದಂಡನೆಯೊಂದೇ ಅತ್ಯುಗ್ರವಾದ ಶಿಕ್ಷೆಯಾಗಿರುವುದು. ಅದಕ್ಕೂ ಕಠಿಣವಾದ ಶಿಕ್ಷೆಯೇ ಇಲ್ಲ!

ಚಂದ್ರಚೂಡ: —ಮರಣದಂಡನೆಯನ್ನು ಅನುಭವಿಸಲು ಸಿದ್ಧನಾಗಿರುವೆಯಾ? ಏಕೆ, ಇಷ್ಟು ನಿರಾಶನಾಗಿರುವೆ? ಸಾಯಲು ನಿನಗೆ ಹೆದರಿಕೆಯಾಗುವದಿಲ್ಲವೇ?

ಮಹೇಂದ್ರ:—ಪ್ರಭೋ, ಇದೇನು, ಈ ರೀತಿ ಅಪ್ಪಣೆ ಕೊಡಿಸುತ್ತಿರುವಿರಿ? ನಿಮ್ಮ ಮಾತುಗಳಿಂದ ನನಗೆ ಮರಣದಂಡನೆಯನ್ನು ವಿಧಿಸುವಂತೆ ತೋರುವುದಿಲ್ಲ ಅಧಮನು, ಪಾಷಂಡನು, ಸ್ತ್ರೀಹತ್ಯೆ, ಬ್ರಹ್ಮಹತ್ಯಾದಿ ದೋಷಕ್ಕೂ ಹೇಸದ ಈ ಕೊಲೆಗಡಕನಾದ ನನ್ನ

ವಿಷಯದಲ್ಲಿ, ಧರ್ಮಾವತಾರರಾದ ತಾವು ಸರ್ವಥಾ ದಯೆಯನ್ನು ತೋರಿಸಲಾಗದು. ಪ್ರಭುಗಳಾದ ತಾವು ನನ್ನ ನೀಚ ಕೃತ್ಯಗಳಿಗೆ ತಕ್ಕ ದಂಡನೆಯನ್ನು ವಿಧಿಸದ ಭಾಗದಲ್ಲಿ, ಆ ಶಿಕ್ಷೆಯನ್ನು ನಾನೇ ವಿಧಿಸಿಕೊಳ್ಳುವೆನು. ಶಿವ! ಶಿವ! ನನ್ನ ನೀಚಕೃತ್ಯಗಳಿಗಾಗಿ ಶಿಕ್ಷೆ ಬೇಡವೆ? ನನ್ನ ಮನೋದೇವತೆಯನ್ನು! ನನ್ನ ಭಾಗ್ಯದ ಲಕ್ಷ್ಮಿಯನ್ನು! ನನ್ನ ಇಹ-ಪರಗಳೆರಡಕ್ಕೂ ಸುಖಸ್ವರೂಪಿಣಿಯಾದ ಆ ಮಂಗಳೆಯನ್ನು!! ಸಾಧ್ವಿ ಶಿರೋಮಣಿ ಮಂಥರೆಯನ್ನು!!! ಸಂತಾಪ ಪಡಿಸಿದ ಈ ಪಾಪಿಗೆ ಶಿಕ್ಷೆ ಬೇಡವೆ? ನನಗಾಗಿ ಯಾವಾತೆಯು ಇಹಲೋಕವನ್ನು ಬಿಟ್ಟು ತೆರಳಿದಳೋ, ಆ ದೈವಸ್ವರೂಪಿಯನ್ನು ವಂಚಿಸಿ, ಆಕೆಯ ಮಾತಾ-ಪಿತೃಗಳನ್ನು ನಿರ್ದಯನಾಗಿ ಕೊಲ್ಲಿಸಿದೆನೋ, ಅಂಥ ಪರಮ ನೀಚನಾದ ನನ್ನಲ್ಲಿ ಕರುಣವೇ? ಬೇಡ; ಖಂಡಿತವಾಗಿಯೂ ಬೇಡ. ಅಂಗಲಾಚಿ ಬೇಡಿಕೊಳ್ಳುವೆನು. ಬೇಡ. ನನಗೆ ಮರಣ ದಂಡನೆಯನ್ನು ವಿಧಿಸಿ, ನನ್ನ ಸರ್ವ ಮಂಗಳೆಯಲ್ಲಿ ಕ್ಷಮಾ ಪ್ರಾರ್ಥನೆಗಾಗಿ ನನ್ನನ್ನು ಕಳುಹಿಸಿ ಕೊಡಿ. ರಾಕಾಚಂದ್ರ, ಮೋಹಕ್ಕೆ ಒಳಗಾಗಿ, ಪ್ರಪಂಚದ ನಶ್ವರ ಸುಖ-ಸಂಪತ್ತಿಗೆ ಬೆರಗಾಗಿ, ದೇವಿದಾಸನ ಬೇಡಿಕೆಗೆ ಒಳಗಾಗಿ, ಅಧರ್ಮಗಾಮಿಯಾಗಿ, ನಿನಗೆ ಸಂಕಟವನ್ನುಂಟು ಮಾಡಿದೆನು. ನಿನ್ನ ಈ ವೈರಿಯನ್ನು ಕ್ಷಮಿಸಲಾರೆಯಾ? ಅಯ್ಯೋ! ಮಮತೆ, ದಯೆ, ಕ್ಷಮೆಗಳನ್ನು ಈ ಕಟುಕನಲ್ಲಿ ತೋರಿಸಿದರೆ, ಆ ಸದ್ಗುಣಗಳು ಕಲಂಕಪೂರ್ಣವಾಗುವುವಲ್ಲವೆ? ನಿಜ! ನಿಜ!!

ಚಂದ್ರಚೂಡ:— (ದುಃಖಾಶ್ರುಗಳನ್ನು ಒರಸಿಕೊಳ್ಳುತ್ತಾ, ಎದ್ದು ಬಂದು ಹುಚ್ಚನಂತೆ ಹಲಬುತ್ತಿರುವ ಮಹೇಂದ್ರನನ್ನು ಹಿಡಿದುಕೊಂಡು)ಮಹೇಂದ್ರ! ಇದೇನು, ನಿನ್ನ ಪ್ರಲಾಪ? ಆದದ್ದಾಗಿ ಹೋಯಿತು. ಇನ್ನಾದರೂ ಸಮಾಧಾನದಿಂದಿರು.

ರಾಕಾಚಂದ್ರ:— ಮಹೇಂದ್ರ, ನೀನು ಈಗ ಪಡುತ್ತಿರುವ ಪಶ್ಚಾತ್ತಾಪವೇ ನಿನ್ನೀ ಅಕೃತ್ಯಗಳಿಗೆ ಶಿಕ್ಷೆಯಾಗಿರುವುದು. ಇದಕ್ಕಾಗಿ ವ್ಯಸನಪಡಬೇಡ.

ಮಹೇಂದ್ರ:—ಸ್ವಾಮಿನ್, ನಾನು ಮಹೇಂದ್ರನಲ್ಲ ಮಹತ್ಪಾಪಿಯು. ನನ್ನ ನಿಜವಾದ ಹೆಸರು ಚಿಂತಾಸಾಗರನೆಂದು. ನನ್ನ ಹೆಸರಿಗೆ ತಕ್ಕಂತೆ ನನ್ನ ಅವಸ್ಥೆಯಾದರೂ ಆಗಿರುವುದು. ಇದರಲ್ಲಿ ಹೆಚ್ಚೇನು? ಇನ್ನು ಈ ದೇಹವನ್ನು ಇಟ್ಟುಕೊಂಡು ಮಾಡುವುದು ತಾನೆ ಏನು? ನನಗೆ ಅಪ್ಪಣೆಯನ್ನು ಕೊಡಿ, ಎಂದವನೇ ತನ್ನಲ್ಲಿಟ್ಟುಕೊಂಡಿದ್ದ ಬಾಕಿನಿಂದ ಇರಿದುಕೊಂಡು ಪ್ರಾಣವನ್ನು ಬಿಟ್ಟನು!

---

## ಪರಿಚ್ಛೇದ ೧೬

ನಿಶಿ ರಾತ್ರಿ. ಯಾವ ಎದೆಗಾರನೂ ಕೂಡ ಈ ರಾತ್ರಿಯಲ್ಲಿ ಹೊರಕ್ಕೆ ಹೆಜ್ಜೆಯನ್ನಿಡಲು ಹಿಂಜರಿಯುವನು. ಆಕಾಶವೆಲ್ಲವೂ ಮೋಡಗಳಿಂದ ಆಚ್ಛಾದಿತವಾಗಿದೆ ಇದರಿಂದ ರಾತ್ರಿಯು ಮತ್ತಿಷ್ಟು ಭೀಕರನಾಗಿರುವುದು ಇಂಥ ಕಗ್ಗತ್ತಲೆಯಲ್ಲಿ ಹತ್ತು ಮಂದಿ ಭೀಷಣಾಕೃತಿಯುಳ್ಳ ಪುರುಷರು ಕೈಗಳಲ್ಲಿ ದೊಣ್ಣೆಗಳನ್ನು ಹಿಡಕೊಂಡು ಸೋಮಪುರದ ಕಾಡಿನಲ್ಲಿ ಹೋಗುತ್ತಿದ್ದಾರೆ. ಕಾಡೊ, ದಟ್ಟವಾಗಿಯೂ ಮುಗಿಲನ್ನು ಮುಟ್ಟುವಂತೆಯೂ ಬೆಳೆದಿರುವ ಮರಗಳಿಂದ ಅತಿ ದಟ್ಟವಾಗಿತ್ತು. ಈ ರಾತ್ರಿಯಲ್ಲಿ ಕ್ರೂರ ಮೃಗಗಳ ಅರ್ಭಟದಿಂದಲೂ, ಪೇಚಕ ಪಕ್ಷಿಗಳ ವ್ಯಂಗವಾದ ಧ್ವನಿಯಿಂದಲೂ, ಸರ್ಪಗಳ ಬುಸುಗುಟ್ಟುವಿಕೆಯಿಂದಲೂ ಅದು ಅತಿ ಭಯಂಕರವಾಗಿರುವುದು ಹೀಗಿದ್ದರೂ ಈ ಹತ್ತು ಮಂದಿಯೂ ನಿಶಾಚರರಂತೆ ನಿರ್ಭಯವಾಗಿ ಕಾಡಿನಲ್ಲಿ ಹೋಗುತ್ತಿರುವುದನ್ನು ನೋಡಿದರೆ, ಯಾವುದೋ ಒಂದು ದುಷ್ಕಾರ್ಯಾಚರಣೆಯನ್ನು ಮಾಡಲು ಹೊರಟದ್ದಂತೆ ತೋರುತ್ತಿತ್ತು. ಇವರು ಯಥಾಕಾಲದಲ್ಲಿ ಕಾಡಿನ ಮಧ್ಯದ ಹಾಳು ದೇಗುಲವನ್ನು ಹೊಕ್ಕರು. ತಮ್ಮ ಸಂಗಡ ತಂದಿದ್ದ ಪಂಜುಗಳನ್ನು ಹೊತ್ತಿಸಿ ಒಳಗೆಲ್ಲಾ ಪರೀಕ್ಷೆ ಮಾಡಿದರು. ಯಾರೂ ಇದ್ದಂತೆ

ತಿಳಿದು, ನಾನು ಇದಕ್ಕೆ ಕೈ ಹಾಕಿದೆನು. ಚಂಚಲೆಯ ಮೇಲಿನ ಮೋಹಕ್ಕೆ ಕಟ್ಟು ಬಿದ್ದ ಈ ವಿಕ್ರಮನು, ನನ್ನ ಕೆಲಸಕ್ಕೆ ಸಹಕಾರಿಯಾದನು. ಚಂಚಲೆಯು ರಾಕಾಚಂದ್ರನನ್ನಲ್ಲದೆ, ಮತ್ತಾರನ್ನೂ ಮದುವೆಯಾಗುವುದಿಲ್ಲವೆಂದು ಹಠ ತೊಟ್ಟದ್ದಳಾದ ಕಾರಣ, ರಾಕಾಚಂದ್ರನು ಸತ್ತು ಹೋದರೆ, ಆಗಲಾದರೂ ಚಂಚಲೆಯನ್ನು ಹೊಂದಬಹುದೆಂಬಾಶೆಯಿಂದ, ವಿಕ್ರಮನೂ ಅವನ ನಾಶದಲ್ಲಿ ಪ್ರಯತ್ನಪಟ್ಟನು ರಾಕಾಚಂದ್ರನು ಸುವರ್ಣಪುರಕ್ಕೆ ಹೋಗಿದ್ದುದೂ, ದೇವಿದಾಸನು ಇವನಿಗೆ ಒಂದು ಪತ್ರವನ್ನು ಚಿಂತಾಸಾಗರನಿಗೆ ಮುಟ್ಟಿಸಬೇಕೆಂದು ಹೇಳಿದುದೂ ಇವೆಲ್ಲವನ್ನು ರಾಕಾಚಂದ್ರನೇ ನನ್ನೊಡನೆ ಹೇಳಿದ್ದನು. ಈ ಸಂಧಿಯನ್ನು ಸಾಧಿಸಿ, ನಾನೇ ಎಡಗೈಯಿಂದ ಒಂದು ಕಾಗದವನ್ನು ಬರೆದು ಪೋಲೀಸು ಠಾಣೆಯ ಮುಖ್ಯಸ್ಥನ ವಿಳಾಸಕ್ಕೆ ಹಾಕಿದೆನು. ಇದರಿಂದ ರಾಕಾಚಂದ್ರನಿಗೆ ಆಮರಣಾಂತ ಜೈಲುವಾಸವು ವಿಧಿಸಲ್ಪಟ್ಟಿತು.

ಚಂದ್ರಚೂಡ:—ವಿಕ್ರಮ, ಭೀಷಣನು ಹೇಳಿದ ವಿಚಾರವೆಲ್ಲವೂ ನಿಜವೋ?

ವಿಕ್ರಮ:—ಎಲ್ಲವೂ ನಿಜ.

ಚಂದ್ರಚೂಡ:—ಭೀಷಣ, ನೀನು ತಿಮ್ಮಪ್ಪನಾಯಕರನ್ನು ಮೋಸಗೊಳಿಸಿ, ಸುಳ್ಳು ಲೆಖ್ಖಗಳನ್ನು ಬರೆದು, ಅದರಿಂದ ಅಪಾರವಾದ ಆಸ್ತಿಯನ್ನು ಹೊಂದಿದೆಯಲ್ಲವೆ?

ಭೀಷಣ:—ಹೌದು.

ಚಂದ್ರಚೂಡ:—ಗೋವಿಂದಲಾಲನನ್ನು ಸೆರೆಯಲ್ಲಿಟ್ಟು ಅವನಿಂದ ಬರಬೇಕಾಗಿದ್ದ ಮೂರು ಸಾವಿರ ರೂಪಾಯಿಗಳಿಗೆ ಬದಲಾಗಿ, ಮೂವತ್ತು ಸಾವಿರ ರೂಪಾಯಿಗಳು ಬರಬೇಕೆಂದು ಸುಳ್ಳು ಲೆಖ್ಖವನ್ನು ಬರೆದು ಅವನ ಆಸ್ತಿಯೆಲ್ಲವನ್ನೂ ಸಾಲಕ್ಕೆ ಕಟ್ಟಿಕೊಂಡು, ಅವನ ಹೆಂಡತಿ-ಮಕ್ಕಳನ್ನು ಭಿಕಾರಿಗಳಾಗಿ ಮಾಡಿದುದು ನಿಜವೋ?

ಭೀಷಣ:— ನಿಜ.

ಚಂದ್ರಚೂಡ:-ವಿಕ್ರಮ, ದೇವಿದಾಸನೊಂದಿಗೆ ಸೇರಿ ನೀನೂ ಭೀಷಣನೂ ಪಿತೂರಿಯನ್ನು ನಡೆಸಿದಿರೋ?

ವಿಕ್ರಮ:—ಹೌದು ತನ್ನ ಸ್ವಾಸ್ಥ್ಯವನ್ನು ತನಗೆ ಬರುವಂತೆ ಮಾಡಿದರೆ ಅಪಾರವಾದ ಐಶ್ವರ್ಯವನ್ನು ಕೊಡುವೆನೆಂದು ಹೇಳಿದ ಪ್ರಯುಕ್ತ, ಆತನಿಗೆ ಸಹಾಯಮಾಡಲೊಪ್ಪಿದ್ದೆವು.

ಚಂದ್ರಚೂಡ:—ಅದನ್ನು ಯಾವ ರೀತಿ ಸಾಧಿಸಬೇಕೆಂದು ಯೋಚಿಸಿದ್ದೆ?

ವಿಕ್ರಮ:—ಮಾರುವೇಷದಿಂದ ಅರಮನೆಯೊಳಕ್ಕೆ ನುಗ್ಗಿ ತಮ್ಮನ್ನು ಖೂನು ಮಾಡಿ, ಮೊದಲೇ ಏರ್ಪಡಿಸಿಕೊಂಡಿದ್ದಂತೆ ಎಲ್ಲರನ್ನು ಸೆರೆಹಿಡಿಯಬೇಕೆಂದು ಮಾಡಿದ್ದೆವು.

ಚಂದ್ರಚೂಡ:—ಹಾಗೆ ಮಾಡದೆ ಯಾಕೆ ಬಿಟ್ಟಿರಿ?

ವಿಕ್ರಮ:—ಇದನ್ನು ಸಾಧಿಸಬೇಕೆಂದಿರುವಾಗ್ಗೆ ರಾಕಾಚಂದ್ರನ ಉಪಟಳವು ಹೆಚ್ಚಾಯಿತು. ಅವನನ್ನು ಮೊದಲು ತೀರಿಸಿಕೊಂಡು, ತರುವಾಯ ದೇವಿದಾಸನ ಕೆಲಸಕ್ಕೆ ಪ್ರಯತ್ನ ಮಾಡಬೇಕೆಂದಿದ್ದೆವು

ಇವರ ವಿಚಾರಣೆಯಾಗುತ್ತಲೆ ಮಿಕ್ಕ ಎಲ್ಲರ ವಿಚಾರಣೆಗಳೂ ಆದವು. ಭೀಷಣ-ವಿಕ್ರಮರಿಗೆ ಯಾವಜ್ಜೀವವೂ ಜೈಲು ವಾಸವು ವಿಧಿಸಲ್ಪಟ್ಟಿತು. ಅವರೊಂದಿಗೆ ಸೇರಿದ್ದ ಕಾರ್ಖಾನೆಯ ಕೆಲವು ಆಳುಗಳಿಗೆ ಅವರವರ ತಪ್ಪಿತಕ್ಕೆ ತಕ್ಕಂತೆ ಶಿಕ್ಷೆ ವಿಧಿಸಲ್ಪಟ್ಟಿತು. ಗೋವಿಂದಲಾಲನಿಗೆ ಅವನ ಆಸ್ತಿಯು ಕೊಡಿಸಲ್ಪಟ್ಟಿತು. ಸೋಮಚಂದ್ರನಿಗೆ ಮಹೇಂದ್ರನ ಚರ-ಸ್ಥಿರ ಸ್ವತ್ತುಗಳು ಕೊಡಲ್ಪಟ್ಟವು. ಬಲಭದ್ರನು ತಂದೆಯಿಂದ ಭೀಷಣನಿಗೆ ಮಾರಲ್ಪಟ್ಟ ಕಾರ್ಖಾನೆಯ ಆಢಳಿತವನ್ನು ತೆಗೆದುಕೊಂಡನು.

.... .... .... .... .... ....

ಚಂಚಲೆಯನ್ನು ರಾಕಾಚಂದ್ರನಿಗೆ ಕೊಟ್ಟು ಜಮೀನ್ದಾರ ಸೋಮಶೇಖರರಾಯರು ವಿವಾಹವನ್ನು ವಿಜೃಂಭಣೆಯಿಂದ ಬಹು ನಡಿಸಿದರು.

.... .... .... .... .... ....

ಇದಾದ ಕೊಂಚ ಕಾಲದಲ್ಲಿಯೇ ದೇವಿದಾಸನು ಚಂದ್ರಚೂಡನಿಗೆ ಶರಣಾಗತನಾಗಿ ಅವನ ಪೋಷಣೆಯಲ್ಲಿಯೇ ಸುಖದಿಂದಿರಹತ್ತಿದ್ದನು.

ಸಂಪೂರ್ಣ.

ಇದು ಬಿ. ಪ. ಕಾಳೆ, ಇವರಿಂದ ಆನಂದವನ-ಆಗಡಿಯೊಳಗಿನ ತಮ್ಮ ಮಾಲಕಿಯ
ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.